ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 9 ಸೋಮವಾರ 2022

ಸಂಪುಟ: 43 | ಸಂಚಿಕೆ: 23 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಅಧಿಕಾರ ಹಿಡಿಯಲು ಆಪರೇಷನ್ ಕಮಲ ಅನಿವಾರ್ಯ

ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಘಂಟಾಘೋಷ

ಬೆಂಗಳೂರು,ಮೇ 8–ರಾಜಕೀಯ ಪಕ್ಷ ಅಧಿಕಾರ ಹಿಡಿಯ ಬೇಕಾದರೆ 'ಆಪರೇಷನ್ ಕಮಲ' ಅನಿವಾರ್ಯ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಸಮರ್ಥಿಸಿಕೊಂಡರು.

ಬಿಜೆಪಿ ಕಚೇರಿಯಲ್ಲಿ ಭಾನುವಾರ ಯುವ ಮೋರ್ಚಾ ಕಾರ್ಯಕಾರಿಣಿ ಸಭೆ ಉದ್ಘಾಟಿಸಿದ ನಂತರ ಮಾಧ್ಯಮಗಳೊಂದಿಗೆ



ಮಾತನಾಡಿದ ಅವರು, ರಾಮನ ಭಾರತ ಆಗಲು ಪ್ರತಿ ವ್ಯಕ್ತಿ ರಾಮ ಆಗಬೇಕು. ವ್ಯಕ್ತಿ ನಿರ್ಮಾಣದಿಂದ ರಾಷ್ಟ್ರ ನಿರ್ಮಾಣದ ಕಾರ್ಯ ಆಗಬೇಕು ಎಂದರು.

ಹಿಂದೆ ಆಪರೇಷನ್ ಕಮಲ ಮಾಡಿದಾಗ ಬೇರೆ ಪಕ್ಷಗಳಿಂದ ನಿಮ್ಮ ಪಕ್ಷಕ್ಕೆ ಕರೆದುಕೊಂಡು ಬರುವುದೇ ನಿಮ್ಮ ಕೆಲಸನಾ? ಎಂದು ಹಲವರು ಕೇಳಿದ್ದಾರೆ. ಆದರೆ ಒಂದು ರಾಜಕೀಯ ಪಕ್ಷ ಅಧಿಕಾರ ಹಿಡಿಯಲು ಆಪರೇಷನ್ ಕಮಲ ಅನಿವಾರ್ಯವಾಗಿದೆ. ಅಧಿಕಾರಕ್ಕಾಗಿ ಆಪರೇಷನ್ ಕಮಲ ಮಾಡಿರಬಹುದು. ಆದರೆ ನಮ್ಮ ಪಕ್ಷದಲ್ಲಿ ಪಕ್ಷಕ್ಕಾಗಿ ದುಡಿದವರು, ಸಾಮಾನ್ಯ ಕಾರ್ಯಕರ್ತನನ್ನು ಶಾಸಕರನ್ನಾಗಿ ಮಾಡುತ್ತೇವೆ. ನಮ್ಮದು ಅಧಿಕಾರಕ್ಕಾಗಿ ಆದರ್ಶ ಅಲ್ಲ. ಕಾಂಗ್ರೆಸ್‌ನಲ್ಲಿ ಈಗಲೂ ಇಂದಿರಾಗಾಂಧಿ, ಸೋನಿಯಾಗಾಂಧಿ, ರಾಹುಲ್‌ಗಾಂಧಿಗೆ ಜೈ ಅಂತಾರೆ. ನಾವು ಭಾರತಮಾತೆಗೆ ಜೈಕಾರ ಹಾಕುತ್ತೇವೆ ಎಂದು ಹೇಳಿದರು.



ಸಾಮಾಜಿಕ ಬದ್ಧತೆಯಿದೆ: ಚಹಾ ಮಾರುವ ಹುಡುಗ ಪ್ರಧಾನಿ ಆಗಬಲ್ಲ ಎಂದು ತೋರಿಸಿದ ಪಕ್ಷ ಬಿಜೆಪಿ. ಮತಗಟ್ಟೆ ಅಧ್ಯಕ್ಷರಾಗಿದ್ದ ಅಮಿತ್ ಶಾ ಅವರು ಇವತ್ತು ಕೇಂದ್ರದ ಗೃಹ ಸಚಿವ. ಹಳ್ಳಿಯಿಂದ ಬಂದವನೊಬ್ಬ ಸಾಮಾನ್ಯ ಬಿಜೆಪಿಯ ರಾಜ್ಯಾಧ್ಯಕ್ಷ ಆಗುತ್ತಾನೆ. ಮೂರು ಸಲ ಎಂಪಿ ಆಗುತ್ತಾನೆ. ಇದು ಬಿಜೆಪಿಯಲ್ಲಿ ಮಾತ್ರ ಸಾಧ್ಯ. ನಾವು ಪರಿವಾರವಾರದಿಂದ ಬಂದವರಲ್ಲ. ಹಣಬಲದಿಂದ ಬಂದವರಲ್ಲ. ರಾಷ್ಟ್ರಭಕ್ತಿ, ಸಾಮಾಜಿಕ ಬದ್ಧತೆಯಿಂದ ನಾವು ರಾಜಕೀಯಕ್ಕೆ ಬಂದವರು ಎಂದು ನಳೀನ್‌ಕುಮಾರ್ ಕಟೀಲ್ ಕಾಂಗ್ರೆಸ್‌ಗೆ ತಿರುಗೇಟು ಕೊಟ್ಟರು.

ಭ್ರಷ್ಟಾಚಾರ, ಭಯೋತ್ಪಾದನೆ ಕಾಂಗ್ರೆಸ್ ಕೊಡುಗೆ: ಕಾಂಗ್ರೆಸ್‌ನಲ್ಲಿ ಪದಾಧಿಕಾರಿಗಳ ಟೀಂ ಸಾಂವಿಧಾನಿಕವಾಗಿಲ್ಲ. ಕಾಂಗ್ರೆಸ್‌ನಲ್ಲಿ ಅವ್ಯವಸ್ಥೆ ತುಂಬಿದೆ. ಅವರಿಗೆ ಪಕ್ಷ ಕಟ್ಟಲು ಗೊತ್ತಿಲ್ಲ. ಇನ್ನು ನಾಡನ್ನು ಏನು ಕಟ್ತಾರೆ? ಕಾಂಗ್ರೆಸ್‌ನಲ್ಲಿ 150 ಪ್ರಧಾನ ಕಾರ್ಯದರ್ಶಿ ಇದ್ದಾರೆ. ಅದು ಮುಂದೆ 250 ದಾಟುತ್ತೆ. ಪಂಚರಾಜ್ಯಗಳ ಫಲಿತಾಂಶ ಬಳಿಕ ಕಾಂಗ್ರೆಸ್‌ಗೆ ಭಯ ಶುರುವಾಗಿದೆ. ಕಾಂಗ್ರೆಸ್ ದೇಶದಲ್ಲಿ ತಿರಸ್ಕರಿಸಲ್ಪಡುತ್ತಿದೆ. ಅಧಿಕಾರದಲ್ಲಿ ಇದ್ದಾಗ ಅವರ ನಡವಳಿಕೆಗಳೇ ಇದಕ್ಕೆ ಕಾರಣ. ಭ್ರಷ್ಟಾಚಾರ, ಭಯೋತ್ಪಾದನೆಗಳೇ ಕಾಂಗ್ರೆಸ್ ಪರಿವಾರದ ಕೊಡುಗೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿಗಳನ್ನು ಬಿಟ್ಟರೆ ಉಳಿದ ಎಲ್ಲಾ ಪ್ರಧಾನಿಗಳೂ ಕಳಂಕಿತರು. ವಾಜಪೇಯಿ, ಮೋದಿ ಕಳಂಕರಹಿತ, ಭ್ರಷ್ಟಾಚಾರ ರಹಿತ ಸರ್ಕಾರ ಕೊಟ್ಟವರು. ರಾಜ್ಯದಲ್ಲೂ ಎಲ್ಲಾ ಕಾಂಗ್ರೆಸ್ ಸಿಎಂಗಳು ಭ್ರಷ್ಟಾಚಾರಿಗಳು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹ್ಯೂಬ್ಲೋಟ್ ವಾಚ್ ಯಾರು ಕೊಟ್ಟರು? ಅರ್ಕಾವತಿ ರೀಡೂ ಪ್ರಕರಣದ ತನಿಖೆ ಆದರೆ ಸಿದ್ದರಾಮಯ್ಯ ಅವರು ಜೀವನ ಪರ್ಯಂತ ಜೈಲಿನಲ್ಲಿರುತ್ತಾರೆ. ಸಿದ್ದರಾಮಯ್ಯ ಅವರಷ್ಟು ಭ್ರಷ್ಟಾಚಾರಿ ಬೇರ್ಯಾರೂ ಇಲ್ಲ ಎಂದು ಕಟೀಲ್ ಹೇಳಿದರು.

> ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಮಾರ್ಗದರ್ಶನ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನೇತೃತ್ವದಲ್ಲಿ ಮುಂದಿನ ಚುನಾವಣೆ ಗೆಲ್ಲುತ್ತೇವೆ. ಕಾಂಗ್ರೆಸ್, ಜೆಡಿಎಸ್‌ನಿಂದ ಬಹಳ ಜನ ಬಿಜೆಪಿ ಬಾಗಿಲು ತಟ್ಟಿದ್ದಾರೆ. ನಮಗೆ ಪುರುಸೊತ್ತಿಲ್ಲ, ಅಷ್ಟು ಜನ ಬರುತ್ತಿದ್ದಾರೆ. ಹಾಗಾಗಿ ನಾವು ಲಿಸ್ಟ್ ಮಾಡ್ಕೊಂಡು ಸೇರ್ಪಡೆ ಮಾಡ್ಕೊಳ್ತಿದ್ದೇವೆ. ಯುವ ಮೋರ್ಚಾ ಕಾರ್ಯಕರ್ತರು ಮನೆ–ಮನೆಗೆ ತೆರಳಿ ಕೆಲಸ ಮಾಡಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಕೆಲಸದ ಬಗ್ಗೆ ಜನರಿಗೆ ತಿಳಿಸಬೇಕು. ಸರ್ಕಾರದ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು. ಯಾರೂ ಸಹ ವಿಧಾನಸೌಧ, ಸಚಿವರ ಮನೆಗಳ ಬಳಿ ಹೋಗಬಾರದು. ನಿಮಗೆ ಅಧಿಕಾರ ಕೊಟ್ಟಿರುವುದು ಪಕ್ಷದ ಕೆಲಸ ಮಾಡಲು. ಮನೆ ಮನೆಗೆ ತೆರಳಿ ಕೆಲಸ ಮಾಡಿದರೆ ಮುಂದೆ ನಿಮಗೆ ಹೆಚ್ಚಿನ ಜವಾಬ್ದಾರಿ ಜೊತೆಗೆ ಅಧಿಕಾರ ಸಿಗಲಿದೆ. ನೀವು ಎಲ್ಲಿ ಹೋಗಿ ಏನು ಮಾಡುವಿರಿ ಎಂದು ನಮಗೆ ಮಾಹಿತಿ ಬರುತ್ತೆ.
>
> –ನಳಿನ್‌ಕುಮಾರ್ ಕಟೀಲ್, ಬಿಜೆಪಿ ರಾಜ್ಯಾಧ್ಯಕ್ಷ

ಮೇ 20ರೊಳಗೆ ಎಸ್‌ಎಸ್‌ಎಲ್‌ಸಿ ಫಲಿತಾಂಶ

ಮೌಲ್ಯಮಾಪನಕ್ಕೆ ಗೈರು ಹಾಜರಾದರೆ ಶಿಸ್ತು ಕ್ರಮ

ಬೆಂಗಳೂರು, ಮೇ 8– ಎಸ್‌ಎಸ್‌ಎಲ್‌ಸಿ ಮೌಲ್ಯಮಾಪನ ಮುಗಿದಿದ್ದು, ವಿದ್ಯಾರ್ಥಿಗಳ ಅಂಕಗಳ ಕ್ರೋಢೀಕರಣ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ಮೇ 20ರೊಳಗೆ ಫಲಿತಾಂಶ ಪ್ರಕಟವಾಗುವ ಸಾಧ್ಯತೆಯಿದೆ. ಮೌಲ್ಯಮಾಪನದಲ್ಲಿ ಪಾಲ್ಗೊಳ್ಳದೇ ಫಲಿತಾಂಶ ಪ್ರಕಟ ವಿಳಂಬಕ್ಕೆ ಕಾರಣವಾದ ಶಿಕ್ಷಕರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಪ್ರೌಢ ಶಿಕ್ಷಣ ಮಂಡಳಿ ಸೂಚನೆ ನೀಡಿದೆ.

ಫಲಿತಾಂಶ ಪೂರ್ಣ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮಾ.28ರಂದು ಆರಂಭವಾಗಿ ಏ.11ರಂದು ಪೂರ್ಣಗೊಂಡಿತ್ತು. ಅಂದುಕೊಂಡಂತೆ ಮೌಲ್ಯಮಾಪನ ಪ್ರಕ್ರಿಯೆ ಪೂರ್ಣಗೊಂಡಿದ್ದರೆ ಮೇ 12ರೊಳಗೆ ಫಲಿತಾಂಶ ಹೊರ ಬೀಳುತ್ತಿತ್ತು. ಮೌಲ್ಯಮಾಪನಕ್ಕೆ ನೋಂದಣಿ ಮಾಡಿದ್ದ ಬಹುತೇಕ ಶಿಕ್ಷಕರು ಗೈರು ಹಾಜರಾಗಿದ್ದರು. ಹೀಗಾಗಿ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸ್ವಲ್ಪ ವಿಳಂಬವಾಗಿದೆ. ಇದರಿಂದ ಫಲಿತಾಂಶ ಮೇ 20ರೊಳಗೆ ಪ್ರಕಟವಾಗಲಿದೆ ಎಂದು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಉತ್ತರ ಪತ್ರಿಕೆ ಮೌಲ್ಯಮಾಪನಕ್ಕೆ ನೋಂದಣಿ ಮಾಡಿ ಗೈರು ಹಾಜರಾಗಿರುವ ಶಿಕ್ಷಕರ ವಿರುದ್ಧ ಕ್ರಮ ಜರುಗಿಸುವಂತೆ ▶ 8ನೇ ಪುಟಕ್ಕೆ

100 ಕೃಷಿ ಸಂಜೀವಿನಿ ವಾಹನಗಳಿಗೆ ಸಿಎಂ ಚಾಲನೆ



ಬೆಂಗಳೂರು: ಜಿಕೆವಿಕೆಯಲ್ಲಿ ಕೃಷಿ ಇಲಾಖೆ ಆಯೋಜಿಸಿದ್ದ ಸಮಾರಂಭದಲ್ಲಿ ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ–ಕೃಷಿ ಸಂಜೀವಿನಿಯ 100 ವಾಹನಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು. ಕೃಷಿ ಸಚಿವ ಬಿ.ಸಿ.ಪಾಟೀಲ್, ತೋಟಗಾರಿಕೆ ಸಚಿವ ಮುನಿರತ್ನ ಮತ್ತಿತರರು ಉಪಸ್ಥಿತರಿದ್ದರು. ಯಡಿಯೂರಪ್ಪ ಸಿಎಂ ಆಗಿದ್ದಾಗ ಪ್ರಾಯೋಗಿಕವಾಗಿ 40 ಕೃಷಿ ಸಂಜೀವಿನಿ ವಾಹನಗಳಿಗೆ ಚಾಲನೆ ನೀಡಲಾಗಿತ್ತು. ಇದೀಗ ರೈತರಿಗೆ ಮತ್ತಷ್ಟು ಸಹಕಾರಿಯಾಗಲು ಎಲ್ಲಾ ಜಿಲ್ಲಾ ಮತ್ತು ತಾಲೂಕು ರೈತ ಸಂಪರ್ಕ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು 100 ವಾಹನಗಳನ್ನು ಸಿಎಂ ಲೋಕಾರ್ಪಣೆ ಮಾಡಿದರು. ರೈತರು ಕೃಷಿ ಸಂಜೀವಿನಿ ಸಹಾಯವಾಣಿ ಸಂಖ್ಯೆ 155313 ಕರೆ ಮಾಡಿದರೆ, ನೇರವಾಗಿ ರೈತರ ಜಮೀನಿಗೆ ಬಂದು ಪರೀಕ್ಷೆ ಮಾಡುತ್ತದೆ. ಜಮೀನಲ್ಲಿ ಉತ್ಪಾದನೆ ಮತ್ತು ಉತ್ಪಾದಕತೆ ಸವೆತ, ಅತಿಯಾದ ಬೆಳೆ ಬೆಳವಣಿಗೆ, ಕೀಟ, ರೋಗದಂತಹ ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ ಒದಗಿಸುತ್ತದೆ.

ಟೆಂಡರ್ ಪೂರ್ವ ಪರಿಶೀಲನೆಗೆ ಹೈಕೋರ್ಟ್ ನಿವೃತ್ತ ನ್ಯಾ.ರತ್ನಕಲಾ ಅಧ್ಯಕ್ಷತೆಯ ಸಮಿತಿ

ಬೆಂಗಳೂರು, ಮೇ 8– ರಾಜ್ಯದಲ್ಲಿ ವಿವಿಧ ಸರಕು ಮತ್ತು ಸೇವೆ ಪಡೆಯಲು ಕರೆಯುವ ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಹಾಗೂ ದುಂದುವೆಚ್ಚಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ರತ್ನಕಲಾ ಅಧ್ಯಕ್ಷತೆಯಲ್ಲಿ ಟೆಂಡರ್ ಪೂರ್ವ ಪರಿಶೀಲನಾ ಸಮಿತಿಯನ್ನು ರಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.



ಜಲಸಂಪನ್ಮೂಲ ಇಲಾಖೆ ನಿವೃತ್ತ ಕಾರ್ಯದರ್ಶಿ ಬಿ.ಜಿ. ಗುರುಪಾದಸ್ವಾಮಿ (ಎಂಜಿನಿಯರಿಂಗ್ ಪರಿಣತ) ಹಾಗೂ ರಾಜ್ಯ ಲೆಕ್ಕ ಪತ್ರ ಇಲಾಖೆ ನಿವೃತ್ತ ನಿರ್ದೇಶಕ ಕೆ.ನಂದಕುಮಾರ್ ಈ ಸಮಿತಿಯ ಸದಸ್ಯರಾಗಿ ನೇಮಕಗೊಂಡಿದ್ದಾರೆ. ಈ ಸಮಿತಿಯು ಈಗಾಗಲೇ ಸರ್ಕಾರ ಹೊರಡಿಸಿದ ಮಾರ್ಗಸೂಚಿಗಳಂತೆ 50 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತದ ಟೆಂಡರ್‌ಗಳು, ಪಾರದರ್ಶಕತೆ, ನ್ಯಾಯಸಮ್ಮತವಾಗಿರುವ ಕುರಿತು ಪರಿಶೀಲನೆ ನಡೆಸಲಿದೆ. ಯೋಜನೆ ರೂಪಿಸಲಾಗಿರುವ ರೀತಿ, ಅದಕ್ಕೆ ತಗುಲುವ ವೆಚ್ಚದ ಕುರಿತು ಸಮಿತಿ ಪರಿಶೀಲನೆ ನಡೆಸಲಿದೆ.

ಜೂ.30ರವರೆಗೆ ತಿರುಮಲದಲ್ಲಿ ಕೆಲವು ಸಾಪ್ತಾಹಿಕ ಸೇವೆಗಳು ತಾತ್ಕಾಲಿಕ ಸ್ಥಗಿತ

ಹೈದರಾಬಾದ್, ಮೇ 8– ಆಂಧ್ರಪ್ರದೇಶದ ತಿರುಪತಿಯಲ್ಲಿರುವ ತಿರುಮಲ



ದೇವಾಲಯವು ಕೆಲವು ವಾರಗಳ ಕಾಲ ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುತ್ತಿರುವುದಾಗಿ ತಿಳಿಸಿದೆ. ವೆಂಕಟೇಶ್ವರನ ಬೆಟ್ಟದ ದೇವಾಲಯದೊಳಗೆ ನಡೆಸಲಾಗುವ ಕೆಲವು ವಾರದ ಸೇವೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ಘೋಷಿಸಿವೆ. ಮಂಗಳವಾರ ನಡೆಯುವ ಅಸ್ತದಳ ಪಾದಪದ್ಮರದಾನ, ಗುರುವಾರದ ತಿರುಪ್ಪವಾಡ, ಶುಕ್ರವಾರದ ನಿಜಪಾದ ದರ್ಶನಂ ಮುಂತಾದ ಸಾಪ್ತಾಹಿಕ ಸೇವೆಗಳನ್ನು ಜೂನ್ 30ರವರೆಗೆ ಸ್ಥಗಿತಗೊಳಿಸಲಾಗಿದೆ. ಬೇಸಿಗೆಯಲ್ಲಿ ಭಾರೀ ಸಂಖ್ಯೆಯಲ್ಲಿ ದೇವಾಲಯಕ್ಕೆ ಜನರು ಭೇಟಿ ನೀಡುವ ಹಿನ್ನೆಲೆ ಸಾಮಾನ್ಯ ಯಾತ್ರಾರ್ಥಿಗಳಿಗೆ ಹೆಚ್ಚಿನ ಸಮಯ ದರ್ಶನವನ್ನು ಒದಗಿಸುವ ಉದ್ದೇಶದಿಂದ ಕೆಲವು ಸೇವೆಗಳನ್ನು ಅಮಾನತುಗೊಳಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಟಿಟಿಡಿ ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಧರ್ಮಾರೆಡ್ಡಿ ಮಾತನಾಡಿ, ಮಂಗಳವಾರ ಮತ್ತು ಶುಕ್ರವಾರದಂದು ಹೆಚ್ಚುವರಿಯಾಗಿ ಸುಮಾರು 5,000 ಯಾತ್ರಾರ್ಥಿಗಳಿಗೆ ಮತ್ತು ಗುರುವಾರದಂದು 9,000 ಭಕ್ತರಿಗೆ ದರ್ಶನಕ್ಕೆ ಅನುಕೂಲವಾಗುವಂತೆ ಟಿಟಿಡಿ ಅನುವು ಮಾಡಿಕೊಡುತ್ತದೆ. ಈ ನಿರ್ಧಾರದಿಂದ ಭಕ್ತರು ವೆಂಕಟೇಶ್ವರ ದೇವಾಲಯದ ಒಳಗೆ ಹೆಚ್ಚು ಕಾಲ ಕಾಯಬೇಕಾಗಿಲ್ಲ ಎಂದಿದ್ದಾರೆ.

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯ ಸಿದ್ಧತೆ

- ಕೊನೆಗೂ ಕಾಮಗಾರಿ ಆರಂಭಕ್ಕೆ ವರ್ಕ್ ಆರ್ಡರ್ ನೀಡಲಾಗಿದೆ
- ಭಾರತೀಯ ಸೈನ್ಯದ ಶೌರ್ಯದ ಪ್ರತೀಕವಾಗಲಿದೆ ಯುದ್ಧ ಸ್ಮಾರಕ



ಯುದ್ಧ ಸ್ಮಾರಕ ನಿರ್ಮಾಣದ ನೀಲನಕ್ಷೆ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಮೇ 8– ಸಾಂಸ್ಕೃತಿಕ ನಗರಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಮೀಪ ನಿರ್ಮಿಸಲು ಉದ್ದೇಶಿಸಿರುವ 'ಯುದ್ಧ ಸ್ಮಾರಕ' ಕಾಮಗಾರಿ ಆರಂಭ ಕಾಲ ಸನ್ನಿಹಿತವಾಗುತ್ತಿದೆ. ಕಾಮಗಾರಿ ಆರಂಭಿಸಲು ವರ್ಕ್ ಆರ್ಡರ್ ನೀಡಲಾಗಿದ್ದು, ಕೆಲವೇ ದಿನಗಳಲ್ಲಿ ಸ್ಮಾರಕ ನಿರ್ಮಾಣಕ್ಕೆ ಶಂಕು ಸ್ಥಾಪನೆ ನೆರವೇರಿಸಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಮೈಸೂರಲ್ಲಿ ಯುದ್ಧ ಸ್ಮಾರಕ ನಿರ್ಮಾಣ ಮಾಡಬೇಕೆಂಬ 20 ವರ್ಷಗಳ ಹೋರಾಟಕ್ಕೆ ಇದೀಗ ಪ್ರತಿಫಲ ದೊರೆಯುತ್ತಿದ್ದು, ವರ್ಷದೊಳಗೆ ಜಿಲ್ಲಾಧಿಕಾರಿ ಕಚೇರಿ ಸಮೀಪದ ಪೆರೇಡ್ ಮೈದಾನದಲ್ಲಿ ಯುದ್ಧ ಸ್ಮಾರಕ ತಲೆ ಎತ್ತಲಿದೆ. ಸ್ಮಾರಕ ನಿರ್ಮಾಣಕ್ಕೆ ಹೆರಿಟೇಜ್ ಕಮಿಟಿಯಿಂದ ಸಮ್ಮತಿ ಪಡೆಯಲಾಗಿದ್ದು, ಸ್ಮಾರಕದ ವಿನ್ಯಾಸಕ್ಕೂ ಅನುಮತಿ ದೊರೆತಿದೆ. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ವಿದೇಶ ಪ್ರವಾಸ ಮುಗಿಸಿ ಬಂದ ಬಳಿಕ ▶ 8ನೇ ಪುಟಕ್ಕೆ

> ಪಾರಂಪರಿಕ ಶೈಲಿಯಲ್ಲಿಯೇ ಸ್ಮಾರಕ ನಿರ್ಮಾಣವಾಗಲಿದ್ದು, ಚೌಕಾಕಾರದಲ್ಲಿ ನಿರ್ಮಿಸಲಾಗುತ್ತದೆ. ಒಂದು ಭಾಗದಲ್ಲಿ ಮೂರು ವಿಧದ ಸೈನ್ಯದ ಸಂಕೇತದೊಂದಿಗೆ ದ್ವಾರ ನಿರ್ಮಿಸಲಾಗುತ್ತದೆ. ನಂತರ ಉಳಿದ 3 ಬದಿಯಲ್ಲಿ ಭೂ ಸೇನೆ, ವಾಯುಸೇನೆ, ನೌಕಾದಳದ ಮಹತ್ವ ಸಾರುವ ಯುದ್ಧ ಟ್ಯಾಂಕರ್‌ಗಳು, ಯುದ್ಧ ವಿಮಾನಗಳು, ನೌಕೆ, ಗನ್ ಸೇರಿದಂತೆ ಯುದ್ಧದಲ್ಲಿ ಬಳಸುವ ಪರಿಕರಗಳನ್ನು ಪ್ರದರ್ಶನಕ್ಕಿಡಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಸರ್ಕಾರದಿಂದ ರಕ್ಷಣಾ ಇಲಾಖೆಗೆ ಪತ್ರ ಬರೆದು ಟ್ಯಾಂಕರ್, ಗನ್ ಇನ್ನಿತರ ಪರಿಕರಗಳನ್ನು ತರಲು ಅಧಿಕಾರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷರು, ಉದ್ಯಮಿ ವಂಚನೆ ಆರೋಪ: ಉದ್ಯಮಿ ಆತ್ಮಹತ್ಯೆ

ಮೈಸೂರು, ಮೇ 8–ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಅಪ್ಪಣ್ಣ ಮತ್ತು ಸ್ವದೇಶಿ ಗ್ರೂಪ್ಸ್‌ನ ಮಾಲೀಕ ಪ್ರವೀಣ್, ತನ್ನಿಂದ ಹಣ ಪಡೆದು ಮೋಸ ಮಾಡಿದ್ದಾರೆ ಎಂದು ಡೆತ್‌ನೋಟ್ ಬರೆದಿಟ್ಟು ಉದ್ಯಮಿಯೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ತಡವಾಗಿ ವರದಿಯಾಗಿದ್ದು, ಈ ಸಂಬಂಧ ಅಪ್ಪಣ್ಣ ಮತ್ತು ಪ್ರವೀಣ್ ಅವರ ವಿರುದ್ಧ ಮೈಸೂರಿನ ಎನ್.ಆರ್.ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ–306 (ಆತ್ಮಹತ್ಯೆಗೆ ಪ್ರಚೋದನೆ) ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಮೈಸೂರಿನ ಗಣೇಶ್‌ನಗರದಲ್ಲಿ ಸ್ವರಾಜ್ ಗ್ರೂಪ್ ಫ್ರಾಂಚೈಸಿ ಎಂಬ ಸಂಸ್ಥೆಯ ಮಾಲೀಕ ಜಿ.ಆರ್.ಶರತ್ (35) ಎಂಬಾತನೇ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾದವನಾಗಿದ್ದು, ಪ್ರವೀಣ್ ಎಂಬುವರ ಮಾಲೀಕತ್ವದ ಸ್ವದೇಶಿ ಗ್ರೂಪ್ಸ್ ಎಂಬ ಸೋಲಾರ್, ಯುಪಿಎಸ್ ಮತ್ತು ಇಂಟೀರಿಯರ್ಸ್ ಕಂಪನಿಗೆ ಶೇ.50ರಷ್ಟು ಬಂಡವಾಳ ಹೂಡಿ ಪಾಲುದಾರನಾಗಿದ್ದು, ಪ್ರವೀಣ್ ತನ್ನನ್ನು ಪಾಲುದಾರಿಕೆಯಿಂದ ಬಿಡುಗಡೆ ಮಾಡಿದ್ದಲ್ಲದೇ ಹಣವನ್ನೂ ಹಿಂತಿರುಗಿಸಲಿಲ್ಲ. ▶ 8ನೇ ಪುಟಕ್ಕೆ

> “ಶರತ್ ಎಂಬಾತ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ನನ್ನ ವಿರುದ್ಧ ಕೇಸ್ ದಾಖಲಾಗಿರುವುದು ನನಗೆ ಗೊತ್ತಿಲ್ಲ. ಆತನಿಗೂ ನನಗೂ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರವಿಲ್ಲ. ಆತ ನನ್ನ ಮನೆಯ ಸಂಪ್ ಕ್ಲೀನ್ ಮಾಡಿ ಅದಕ್ಕೆ ಹಣವನ್ನೂ ಪಡೆದಿದ್ದ. ವಿಕ್ರಂ ಅಮಟೆ ಅವರು ಡಿಸಿಪಿ ಆಗಿದ್ದ ವೇಳೆ 2019ರಲ್ಲಿ ಶರತ್ ಕುವೆಂಪು ನಗರ ಠಾಣೆಗೆ ದೂರು ಸಲ್ಲಿಸಿ ನಾನು ಆತನಿಗೆ 27 ಲಕ್ಷ ರೂ. ಕೊಡಬೇಕೆಂದು ಆರೋಪಿಸಿದ್ದ. ಅದರ ಬಗ್ಗೆ ಅಂದಿನ ಡಿಸಿಪಿ ಅಮಟೆ ಅವರು ವಿಚಾರಣೆ ನಡೆಸಿದ ವೇಳೆ ಶರತ್ ನನ್ನ ವಿರುದ್ಧ ಸುಳ್ಳು ದೂರು ನೀಡಿರುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದಾನೆ. ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ನನ್ನ ಬಳಿ ಇವೆ.
>
> –ಅಪ್ಪಣ್ಣ, ಜಂಗಲ್ ಲಾಡ್ಜಸ್ & ರೆಸಾರ್ಟ್ಸ್ ಅಧ್ಯಕ್ಷ

ಮೈಸೂರಿನ ಶಂಕರ ಮಠದಲ್ಲಿ ಯಶಸ್ವಿ ಅತಿರುದ್ರ ಮಹಾಯಾಗ

ಮೈಸೂರು, ಮೇ 8– ಎಪ್ಪತ್ತು ವರ್ಷಗಳ ನಂತರ ಮೈಸೂರಿನ ಶಂಕರ ಮಠದಲ್ಲಿ ಲೋಕ ಕಲ್ಯಾಣಕ್ಕಾಗಿ ಅತಿರುದ್ರ ಮಹಾಯಾಗ ಅತ್ಯಂತ ವೈಭವದಿಂದ ನಡೆಯಿತು. ಶೃಂಗೇರಿಯ ಶಾರದ ಪೀಠದ 34ನೇ ಆಚಾರ್ಯರಾಗಿದ್ದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳು ಮೈಸೂರಿನ ಖಿಲ್ಲೆ ಮೊಹಲ್ಲಾದಲ್ಲಿರುವ ಶ್ರೀ ಶಂಕರ ಮಠದಲ್ಲಿ 70 ವರ್ಷಗಳ ಹಿಂದೆ ಅತಿರುದ್ರ ಮಹಾಯಾಗ ನಡೆಸಿದ್ದರು.

ಇದೀಗ ಮೈಸೂರಿನ ವಿಷ್ಣು ಪಾರಾಯಣ ಟ್ರಸ್ಟ್ ಮತ್ತು ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ಆಶ್ರಯದಲ್ಲಿ ಕಳೆದ ಐದು ದಿನಗಳಿಂದ ನಡೆದ ಅತಿರುದ್ರ ಮಹಾಯಾಗವು ಶುಕ್ರವಾರ 11 ಹೋಮಗಳು ಮತ್ತು ಪೂರ್ಣಾಹುತಿಯೊಂದಿಗೆ ಇದೇ ಶಂಕರ ಮಠದಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು.

ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುದೇಂದ್ರತೀರ್ಥ ಶ್ರೀಪಾದಂಗಳವರು ಮತ್ತು ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಆಶೀರ್ವಾದ ಮತ್ತು ಶ್ರೀ ಅರ್ಜುನ ಅವಧೂತರ ಸಾನ್ನಿಧ್ಯದಲ್ಲಿ ಪ್ರತಿನಿತ್ಯ ಗಣಪತಿ ಹೋಮ, ಪುಣ್ಯಾಹವಾಚನ, ಸುಹಾಸಿನಿ ಪೂಜೆ, ಲಲಿತಾ ಸಹಸ್ರನಾಮದೊಂದಿಗೆ 125 ಋತ್ವಿಕರು ಪ್ರಧಾನ ಅರ್ಚಕರಾದ ವೇ.ಬ್ರ. ಶ್ರೀ ಶ್ರೀನಿವಾಸನ್ ಅವರ ನೇತೃತ್ವದಲ್ಲಿ ಮಹಾಯಾಗ ನಡೆಸಿಕೊಟ್ಟರು. ಶುಕ್ರವಾರ ನಡೆದ ಕೊನೆ ದಿನದ ಕಾರ್ಯಕ್ರಮದಲ್ಲಿ ಬೆಲಗೂರು ಮಠದ ಶ್ರೀ ವಿಜಯ ಮಾರುತಿ ಸ್ವಾಮಿಗಳು, ಕೇಂದ್ರದ ಮಾಜಿ ಸಚಿವ ಸದಾನಂದಗೌಡ, ನಿರ್ಮಾಪಕ ಉಮಾಪತಿಗೌಡ, ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ಮೈಲಾಕ್ ಅಧ್ಯಕ್ಷ ಎನ್.ವಿ.ಫಣೀಶ್, ವಸ್ತುಪ್ರದರ್ಶನ ಪ್ರಾಧಿಕಾರ್ ಅಧ್ಯಕ್ಷ ಹೇಮಂತ್‌ಕುಮಾರ್ ಗೌಡ, ಕಾಂಗ್ರೆಸ್ ಮುಖಂಡರಾದ ಬಿ.ಎಲ್.ಶಂಕರ್, ಹರೀಶ್‌ಗೌಡ, ಮಾಜಿ ಸಂಸದ ವಿಜಯ ಶಂಕರ್, ಬಾಡಿ ಬಿಲ್ಡರ್ ಪಾನಿಪುರಿ ಕಿಟ್ಟಿ, ಮುಕ್ತ ವಿವಿ ಕುಲಪತಿ ವಿದ್ಯಾಶಂಕರ್, ಕಾಡ ಅಧ್ಯಕ್ಷ ಶಿವಲಿಂಗಯ್ಯ, ನಿರೂಪಕಿ ದಿವ್ಯಾ ಆಲೂರು ಸೇರಿದಂತೆ ಗಣ್ಯಾತೀತರು, ಚಲನಚಿತ್ರ ನಟರು, ಕಿರು ತೆರೆ ನಟ–ನಟಿಯರು ಪಾಲ್ಗೊಂಡು ಸಾವಿರಾರೂ ಗುರು ಭಕ್ತರ ಸಮ್ಮುಖದಲ್ಲಿ ಗುರುಗಳ ಜೊತೆ ತಮ್ಮ ಬಾಂಧವ್ಯ ಮತ್ತು ಅನುಭವವನ್ನು ಹಂಚಿಕೊಂಡರು.

ಶ್ರೀ ವಿಜಯ ಮಾರುತಿ ಸ್ವಾಮಿಗಳು ಮತ್ತು ಪರಮಪೂಜ್ಯ ಶ್ರೀ ಅರ್ಜುನ ಅವಧೂತರು ಆಶೀರ್ವಚನ ನೀಡಿದರು. ನಂತರ ಶ್ರೀ ಅರ್ಜುನ ಅವಧೂತರು ಕಳೆದ ಐದು ದಿನಗಳಿಂದ ಸ್ವಚ್ಚತಾ ಕಾರ್ಯ ನಡೆಸಿದ ಮಹಿಳೆಯರ ಪಾದ ಪೂಜೆ ನೆರವೇರಿಸಿದರು. ಪ್ರತಿದಿನ ಸಂಜೆ ಭಜನೆ, ಭರತನಾಟ್ಯ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು. ಪ್ರತಿದಿನ ಎಲ್ಲಾ ಭಕ್ತರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.




ಪ್ರಧಾನ ಅರ್ಚಕ ವೇ.ಬ್ರ. ಶ್ರೀ ಶ್ರೀನಿವಾಸನ್ ಅವರ ನೇತೃತ್ವದಲ್ಲಿ ಅತಿರುದ್ರ ಮಹಾಯಾಗ ನಡೆಸಲಾಯಿತು. ಮಹಾಯಾಗದಲ್ಲಿ ಪಾಲ್ಗೊಂಡಿದ್ದ ಭಕ್ತರನ್ನು ಎಡಚಿತ್ರದಲ್ಲಿ ಕಾಣಬಹುದು.

ಮೈಸೂರಲ್ಲಿ 6 ದಿನಗಳ ಕಾಲ ಸಿಲ್ಕ್ ಇಂಡಿಯಾ ಮೇಳ



ಮೈಸೂರು, ಮೇ 8–ಮೈಸೂರಿನ 'ಹಸ್ತಶಿಲ್ಪಿ' ಸಂಸ್ಥೆ ವತಿಯಿಂದ 'ಸಿಲ್ಕ್ ಇಂಡಿಯಾ–2022' ಮೇಳವನ್ನು ಮೇ 11 ರಿಂದ 16ರವರೆಗೆ 6 ದಿವಸಗಳ ಕಾಲ ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾಗಿದೆ

ಈ ಮೇಳದಲ್ಲಿ ಕಾಶ್ಮೀರದಿಂದ ಕಾಂಚಿಪುರಂವರೆಗಿನ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳು ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರತಿದಿನ ಬೆಳಿಗ್ಗೆ 10.30 ರಿಂದ ರಾತ್ರಿ 8.30ರವರೆಗೆ ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ.

ಮೇಳದಲ್ಲಿ ತಸ್ಸರ್ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರ್ನಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ(ಕಚ್ಚಾ) ಸಿಲ್ಕ್ ಮತ್ತು ಕೋಸಾ ಸೀರೆಗಳು, ಕೊಲ್ಕೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್‌ಚೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ಮೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೆಟೀರಿಯಲ್ಸ್‌ಗಳು ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್‌ವುಳ್ಳ ಮಲ್ಬರಿ ಸಿಲ್ಕ್, ಕೊಲ್ಕೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ದಾನಿ ರೇಷ್ಮೆ, ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಮಾರಾಟಕ್ಕಿವೆ. ಇದಲ್ಲದೆ ಕುರ್ತಾ, ಸ್ಟೋಲ್ಸ್, ಶಾಲುಗಳು, ಸಲ್ವಾರ್ ಕಮೀಜ್ ಮತ್ತು ಕುಶನ್ ಕವರ್‌ಗಳು ಮತ್ತು ಬೆಡ್‌ಶೀಟ್‌ಗಳನ್ನು ಈ ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಿ ಮಾರಾಟ ಮಾಡಲಾಗುವುದು. ಈ ವಸ್ತುಗಳನ್ನು ಉತ್ಪಾದಕರೇ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿರುವುದರಿಂದ ವಸ್ತುಗಳು ನ್ಯಾಯಯುತ ಬೆಲೆಯಲ್ಲಿ ದೊರಕುತ್ತದೆ.

ಪ್ರೊ. ಭಾಷ್ಯಂ ಸ್ವಾಮೀಜಿಗೆ ಶ್ರೇಷ್ಠ ತತ್ವಜ್ಞಾನಿ ಪ್ರಶಸ್ತಿ ಪ್ರದಾನ



ಶ್ರೀ ಶಂಕರ ಭಗವತ್ಪಾದಚಾರ್ಯರ ತತ್ವಜ್ಞಾನಿಗಳ ದಿನದ ಅಂಗವಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವಲಯ, ಜಿಲ್ಲಾ ಬ್ರಾಹ್ಮಣ ಮಹಾಸಭಾ, ಬ್ರಾಹ್ಮಣ ಯುವ ಸಭಾ, ಜಿಲ್ಲಾ ಬ್ರಾಹ್ಮಣ ಮಹಿಳಾ ವಿಭಾಗದಿಂದ ಕುವೆಂಪುನಗರದ ಸಂಧ್ಯಾ ಸುರಕ್ಷಾ ಟ್ರಸ್ಟ್‌ನಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಪ್ರವರ್ತಕ, ಸಂಸ್ಕೃತ ಪಂಡಿತರಾದ ಪ್ರೊ. ಭಾಷ್ಯಂ ಸ್ವಾಮೀಜಿ ಅವರಿಗೆ ಶ್ರೇಷ್ಠ ತತ್ವಜ್ಞಾನಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಚಿತ್ರದಲ್ಲಿ ಎಕೆಬಿಎಂಎಸ್ ವಲಯ ಉಪಾಧ್ಯಕ್ಷ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಾ.ಬಿ.ಆರ್.ನಟರಾಜ್ ಜೋಯಿಸ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಇನ್ನಿತರರನ್ನು ಕಾಣಬಹುದು.

ಕೆಪಿಎಸ್‌ಸಿಗೆ ಅಕ್ರಮ ನೇಮಕಾತಿ

ಎರಡು ದಿನದಲ್ಲಿ ನೇಮಕಾತಿ ವಾಪಾಸ್ ಪಡೆಯದಿದ್ದರೆ ರಾಜ್ಯಾದ್ಯಂತ ಹೋರಾಟ



ಮೈಸೂರು, ಮೇ 8(ಎಂಟಿವೈ)– ಅಕ್ರಮವಾಗಿ ಹುದ್ದೆ ಪಡೆದಿರುವ ಬಾಗಲಕೋಟೆ ಜಿಲ್ಲಾಧಿಕಾರಿ ಡಾ.ಕೆ.ರಾಜೇಂದ್ರ ಅವರನ್ನು ರಾಜ್ಯ ಲೋಕಸೇವಾ ಅಯೋಗ (ಕೆಪಿಎಸ್‌ಸಿ)ದ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿರುವುದನ್ನು ಎರಡು ದಿನಗಳೊಳಗೆ ಹಿಂಪಡೆಯದಿದ್ದಲ್ಲಿ ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸುವುದಾಗಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1999ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ನೇಮಕಾತಿಯಲ್ಲಿ ರಾಜೇಂದ್ರ ಅವರನ್ನು ಅಕ್ರಮ ಫಲಾನುಭವಿ ಎಂದು ಉಚ್ಚ ನ್ಯಾಯಾಲಯ ಸತ್ಯಶೋಧನಾ ಸಮಿತಿ ವರದಿಯಲ್ಲಿ ಗುರುತಿಸಲಾಗಿದೆ. ಈ ನೇಮಕಾತಿ ವಾಮಮಾರ್ಗದಲ್ಲಿ ನಡೆದಿದೆ ಎಂದು ಆರೋಪಿಸಿ ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಮೇಲ್ಮನವಿ ಸಲ್ಲಿಸಲಾಗಿದ್ದು, ವಿಚಾರಣೆ ಇನ್ನೂ ಬಾಕಿ ಇದೆ. ಹೀಗಿದ್ದರೂ ಡಾ.ಕೆ. ರಾಜೇಂದ್ರ ಅವರನ್ನು ಆಯೋಗದ ಕಾರ್ಯದರ್ಶಿಯನ್ನಾಗಿ ವರ್ಗಾಯಿಸಿರುವುದು ಆಕ್ಷೇಪಾರ್ಹವಾಗಿದೆ ಎಂದು ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ವಿವಿಧ ಸಮುದಾಯಗಳ ಮುಖಂಡರಾದ ಎನ್.ಆರ್.ನಾಗೇಶ್, ಯೋಗೀಶ್ ಉಪ್ಪಾರ್, ರವಿನಂದನ್ ಹಾಗೂ ಮೈಸೂರು ಬಸವಣ್ಣ ಇದ್ದರು.

ವಿಶೇಷಚೇತನ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ಮೈಸೂರು,ಮೇ8–ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಹಾಗೂ ವಿಕಲಚೇತರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಗ್ರಾಮೀಣ ಪುರ್ನವಸತಿ ಕಾರ್ಯಕ್ರಮದಡಿ ಹೆಚ್.ಡಿ.ಕೋಟೆ ತಾಲೂಕಿನ ಪಡುಕೋಟೆ ಕಾವಲ್ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಗ್ರಾಮೀಣ ಪುರ್ನವಸತಿ ಕಾರ್ಯಕರ್ತರಾಗಿ ಮಾಸಿಕ 6000 ರೂ.ಗಳ ಗೌರವಧನ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ತಾಲೂಕು ಪಂಚಾಯಿತಿಯಲ್ಲಿರುವ ವಿವಿಧೋದ್ದೇಶ ಪನರ್ವಸತಿ ಕಾರ್ಯಕರ್ತರರಿಂದ ಅರ್ಜಿ ಪಡೆದು ಮೇ 19ರೊಳಗಾಗಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂಖ್ಯೆ: 9611519719 ಸಂಪರ್ಕಿಸಬಹುದು.

ವಿದ್ಯುತ್ ಚಾಲಿತ ವಾಹನಗಳ ಉತ್ತೇಜನಕ್ಕೆ 'ಗೋ ಗ್ರೀನ್ ಮೈಸೂರು' ಸೈಕ್ಲೋಥಾನ್



ಮೈಸೂರು, ಮೇ 8 (ಆರ್‌ಕೆಬಿ)– ವಿದ್ಯುತ್ ಚಾಲಿತ ವಾಹನಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾ ಲಯ (ಜೆಎಸ್‌ಎಸ್ ಎಸ್‌ಟಿಯು) ಕಾಲೇಜಿನ ಪ್ರಾಜೆಕ್ಟ್ ರೀಚ್‌ಔಟ್ ಸಹಯೋಗದೊಂದಿಗೆ ಭಾನುವಾರ ಮೈಸೂರಿನಲ್ಲಿ ಜೆಸಿಯಾನ 2022– ಸೈಕ್ಲೋಥಾನ್ ನಡೆಸಲಾಯಿತು.

ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಉತ್ಸವದ ಅಂಗವಾಗಿ ಏರ್ಪಡಿಸಿದ್ದ 'ಗೋ ಗ್ರೀನ್ ಮೈಸೂರು ಸೈಕ್ಲೋಥಾನ್'ನಲ್ಲಿ ಮೈಸೂರಿನ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಸೇರಿದಂತೆ 250ಕ್ಕೂ ಹೆಚ್ಚು ಮಂದಿ 12 ಕಿ.ಮೀ. ದೂರವನ್ನು ಕ್ರಮಿಸಿ, ಜನರಿಗೆ ವಿದ್ಯುತ್ ಚಾಲಿತ ವಾಹನಗಳ ಬಗ್ಗೆ ಪ್ರಚುರಪಡಿಸಿದರು.

ಸೈಕ್ಲೋಥಾನ್‌ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಏಕಲವ್ಯ ಪ್ರಶಸ್ತಿ ಪುರಸ್ಕೃತ ಅಂತಾರಾಷ್ಟ್ರೀಯ ಸೈಕ್ಲಿಸ್ಟ್ ಎನ್.ಲೋಕೇಶ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಎಸ್‌ಪಿ ಆರ್. ಚೇತನ್, ಯುವಕರು ಸಾಕಷ್ಟು ಕ್ರಿಯಾ ಶೀಲರಾಗಿ ವಿವಿಧ ಕಾರ್ಯಕ್ರಮಗಳನ್ನು ಭಾಗವಹಿಸಲು ಸ್ವಯಂ ಪ್ರೇರಣೆಯಿಂದ ಮುಂದೆ ಬರಬೇಕು. ಯುವಕರು ದೈಹಿಕ ಹಾಗೂ ಶೈಕ್ಷಣಿಕವಾಗಿ ಸದೃಢರಾಗಬೇಕು ಎಂದು ಕರೆ ನೀಡಿದರು.

ಅಂತಾರಾಷ್ಟ್ರೀಯ ಸೈಕ್ಲಿಸ್ಟ್ ಎನ್. ಲೋಕೇಶ್ ಮಾತನಾಡಿ, ನಾವು ದೈಹಿಕವಾಗಿ ಸದೃಢರಾಗಿರಲು ವ್ಯಾಯಾಮ ಅತ್ಯುತ್ತಮ ಮಾರ್ಗವಾಗಿದೆ. ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಬಹಳ ಅಗತ್ಯ. ಇಂತಹ ಚಟುವಟಿಕೆಗಳನ್ನು ನಡೆಸುವ ಮೂಲಕ ಸಂಸ್ಥೆಯು ವಿದ್ಯಾರ್ಥಿಗಳಿಗೆ ನೀಡಿದ ಪ್ರೋತ್ಸಾಹ ಮತ್ತು ಬೆಂಬಲದ ಬಗ್ಗೆ ನನಗೆ ಸಂತೋಷವಾಗಿದೆ ಎಂದರು.

ಜೆಎಸ್‌ಎಸ್ ಎಸ್‌ಟಿಯು ಆವರಣದಿಂದ ಆರಂಭವಾದ ಸೈಕ್ಲೋಥಾನ್ ಸೇಂಟ್ ಜೋಸೆಫ್ ಪ್ರಥಮ ದರ್ಜೆ ಕಾಲೇಜು, ವಿ.ವಿ.ಪುರಂ ಸಂಚಾರ ಪೊಲೀಸ್ ಠಾಣೆ, ಆಕಾಶವಾಣಿ ವೃತ್ತ, ರಾಮಸ್ವಾಮಿ ವೃತ್ತ, ಸರಸ್ವತಿಪುರ ಅಗ್ನಿಶಾಮಕ ಠಾಣೆ ಮೂಲಕ ಸಾಗಿ, ಜೆಎಸ್‌ಎಸ್ ಎಸ್‌ಟಿಯು ಆವರಣಕ್ಕೆ ವಾಪಸಾಯಿತು. ಜೆಎಸ್‌ಎಸ್‌ಐಟಿಯು ಕುಲಪತಿ ಪ್ರೊ.ಎ.ಎನ್.ಸಂತೋಷ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಜೆಸಿಇ ಎಸ್‌ಟಿಇಪಿ ಸಿಇಓ ಬಿ.ಶಿವಶಂಕರ್, ವಿದ್ಯಾರ್ಥಿ ಸಂಘಟಕರಾದ ಎ.ಸಿ.ಶ್ರೇಯಸ್, ಚಿರಾಗ್‌ಗೌಡ, ನಮಿತಾ ಜೈನ್, ರಾಹುಲ್ ಇತಾಪೆ, ಅನಿದೇಚಮ್ಮ, ಐಸಿರಿ ಪದಕಿ, ಎನ್.ವರುಣ್ ಇನ್ನಿತರರು ಉಪಸ್ಥಿತರಿದ್ದರು.

ಸೈಕ್ಲೋಥಾನ್ ಮೊದಲ 10 ವಿಜೇತರು: ಆರ್.ವಿನಯ್, ಎಸ್.ಟಿ. ಧನಂಜಯ್, ಮಧು ಕುಮಾರ್, ಕಿರಣ್ ಕುಮಾರ್, ಅನೀಶ್, ಅಮೃತ್ ರಾಜ್, ಜಿ.ಕೆ.ಶ್ರೀಕರ್, ಕರಿನ್ ಮಾರ್ಷಲ್, ಉಮರ್ ಷರೀಫ್ ಮತ್ತು ಸತ್ಯ ಗಣೇಶ್. ವಿಜೇತರಿಗೆ ತಲಾ ಸಾವಿರ ರೂ. ನಗದು ಬಹುಮಾನ ಮತ್ತು ಪ್ರಮಾಣಪತ್ರ ಹಾಗೂ ಭಾಗವಹಿಸಿದ ಎಲ್ಲರಿಗೂ ಪ್ರಮಾಣಪತ್ರ ವಿತರಿಸಲಾಯಿತು.



ಶನಿವಾರ ಬಿಜೆಪಿ ಸೇರ್ಪಡೆಗೊಂಡ ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್ ಅವರನ್ನು ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್.ನಾಗೇಂದ್ರ, ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ಪಾಲಿಕೆ ಸದಸ್ಯ ಸಾತ್ವಿಕ್ ಸಂದೇಶ್‌ಸ್ವಾಮಿ, ಚಾಮರಾಜ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಪುನೀತ್, ಮುಖಂಡರಾದ ಎಂ.ಜಿ.ಮಹೇಶ್, ಜೋಗಿ ಮಂಜು ಇನ್ನಿತರರು ಉಪಸ್ಥಿತರಿದ್ದರು.


ಮೇ 18ರಿಂದ ಜೀವನೋತ್ಸಾಹ ಶಿಬಿರ

ಮೈಸೂರು, ಮೇ 8–ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಸಂಯುಕ್ತಾಶ್ರಯದಲ್ಲಿ ಮೇ 18ರಿಂದ 23ರವರೆಗೆ ಊಟಿಯಲ್ಲಿ ಸಾರ್ವಜನಿಕರಿಗಾಗಿ ಜೀವನೋತ್ಸಾಹ ಶಿಬಿರವನ್ನು ಏರ್ಪಡಿಸಿದೆ. ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ಹಾಗೂ ವಿಜಯಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳ ಮಾರ್ಗ ದರ್ಶನದಲ್ಲಿ ಪ್ರತಿನಿತ್ಯ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸಗಳು, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ.ರಾಜೇಶ್ ಅವರನ್ನು ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ನೇರವಾಗಿ ಅಥವಾ 0821–2548212, Extn.223/224 ಅಥವಾ ಮೊ: 996414 1560, 9489044575, 9448280666, 9448111244, 9343582337 ಸಂಪರ್ಕಿಸಿ ನೋಂದಾಯಿಸಿಕೊಳ್ಳಬಹುದಾಗಿದೆ. www.jssonline.orgಯಿಂದ ವಿವರ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ಇಂದಿನಿಂದ 3 ದಿನಗಳ ಕಲೋತ್ಸವ; ಅದ್ಭುತ ಗಾಯನ ಕಛೇರಿ, ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ ಗ್ರಂಥ ಬಿಡುಗಡೆ

ಮೈಸೂರು,ಮೇ 8(ಆರ್‌ಕೆಬಿ)–ಮೈಸೂರಿನ ಬ್ರಹ್ಮ ವಿದ್ಯಾಸಂಸ್ಥೆ, ರಸಋಷಿ ಸಂಶೋಧನಾ ಕೇಂದ್ರ, ಚನ್ನಪಟ್ಟಣದ ಸ್ವಾರಾಸಾಧಾ, ಅಮೇರಿಕಾದ ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಮೈಸೂರಲ್ಲಿ ಮೇ 9 ಸಂಜೆ 7 ಗಂಟೆಗೆ ಭಾರತೀಯ ಸಂಗೀತ ಶಾಸ್ತ್ರ ದಿನಾಚರಣೆ, ಗ್ರಂಥ ಬಿಡುಗಡೆ ಮತ್ತು 3 ದಿನಗಳ ಕಲೋತ್ಸವ ಉದ್ಘಾಟನೆ ನಡೆಯಲಿದೆ. ವಾಸುದೇವಾಚಾರ್ಯ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಮ್ಮುಖದಲ್ಲಿ ಶಾಸಕ ಎಸ್.ಎ.ರಾಮದಾಸ್, ಕನ್ನಡ ವಿವಿ ಕುಲಪತಿ ಡಾ.ಸ.ಚಿ.ರಮೇಶ್ ಅತಿಥಿಗಳಾಗಿ ಭಾಗವಹಿಸುವರು. ಶ್ರೇಷ್ಠ ವೀಣಾವಾದಕ, ವಾಗ್ಗೇಯಕಾರ ರ.ವಿಶ್ವೇಶ್ವರನ್ ಅಧ್ಯಕ್ಷತೆ ವಹಿಸುವರು. ವಾರಣಾಸಿಯ ಐಜಿಎನ್‌ಸಿಎ ನಿರ್ದೇಶಕ ಡಾ.ವಿಜಯ್‌ಶಂಕರ್ ಶುಕ್ಲ ಅವರಿಗೆ ಶಾಸ್ತ್ರಸೂರೀ ಪ್ರಶಸ್ತಿ, ವಸಂತ ಮಾಧವಿ (ಕರ್ನಾಟಕ ಸಂಗೀತ), ಡಾ.ಲಲಿತಾ ಶ್ರೀನಿವಾಸನ್ (ಭರತನಾಟ್ಯ), ಡಾ.ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ (ಸಂಗೀತಶಾಸ್ತ್ರ), ಡಾ.ಎಸ್.ಆರ್.ನರಸಿಂಹಮೂರ್ತಿ (ಆಗಮ–ಶ್ರೀವಿದ್ಯೆ) ಅವರಿಗೆ ಸಂಸ್ಮರಣ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮೇ 9ರಂದು ಸಂಜೆ 6 ಗಂಟೆಗೆ ಯುಗಳ ಗಾಯನದಲ್ಲಿ ಕಾಂಚನಾ ಸಹೋದರಿರಾದ ಶ್ರೀರಂಜಿನಿ ಮತ್ತು ಶ್ರುತಿ ರಂಜನಿರಿಂದ ಯುಗಳ ಗಾಯನ, ಮೇ 10ರಂದು ಸಂಜೆ 6ಕ್ಕೆ ಯುವ ಗಾಯಕ ಹರ್ಷ ಮತ್ತು ಸಂಗಡಿಗರಿಂದ ಕರ್ನಾಟಕ ಸಂಗೀತ ಕಚೇರಿ, ಸಂಜೆ 7ಕ್ಕೆ ನಾಟ್ಯ ವಿದುಷಿ ಡಾ.ರಾಧಿಕಾ ನಂದಕುಮಾರ್ ಮತ್ತು ಸಂಗಡಿಗರಿಂದ ಭರತನಾಟ್ಯ, ಮೇ 11ರಂದು ಸಂಜೆ ವಾಗ್ಗೇಯ ವಿಶ್ವೇಶ್ವರೀ ಡಾ.ರಾ.ವಿಶ್ವೇಶ್ವರನ್‌ರ ಸಂಗೀತ ಕೃತಿಗಳನ್ನು ಆಧರಿಸಿದ ವಿಶೇಷ ಸಂಗೀತ ಕಾರ್ಯಕ್ರಮ. ಸಂಜೆ 6 ಗಂಟೆಗೆ ಸಂಗೀತ ವಿದ್ವಾನ್ ಡಾ.ಕೆ.ವರದರಂಗನ್, ಸಂಗಡಿಗರಿಂದ ಗಾಯನ ಕಛೇರಿ, ಸಂಜೆ 7 ಗಂಟೆಗೆ ವಾಗ್ಗೇಯಕಾರ ಡಾ.ವಿಶ್ವೇಶ್ವರನ್‌ರಿಂದ ಗಾಯನ ಕಛೇರಿ ಇರಲಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.05.2022 ಸೋಮವಾರ, ಮಳೆ ನಕ್ಷತ್ರ : ಭರಣಿ 27.04.2022 ರಿಂದ 10.05.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಶುಕ್ಲ ಪಕ್ಷ ತಿಥಿ: ಅಷ್ಟಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

■ **ಶ್ರೀ ಕೃಷ್ಣ ಸೇವಾ ಸಮಿತಿ ಚಾರಿಟಬಲ್ ಟ್ರಸ್ಟ್ :** ಬ್ರಹ್ಮ ರಥೋತ್ಸವ, ಬೆಳಗ್ಗೆ 9ಕ್ಕೆ ಉತ್ಸವ, ಧ್ವಜಾರೋಹಣ, ಕುಂಭಾರಾಧನ ಪೂರ್ವಕ ಯಾಗಶಾಲಾ ಪ್ರವೇಶ, ಸಂಜೆ 6ಕ್ಕೆ ಚತುರ ಸ್ಥಾನ ಪೂರ್ವಕ ವಿಷ್ಣು ಸಹಸ್ರನಾಮಹೋಮ, ಚಂದ್ರಮಂಡಲೋತ್ಸವ ಸ್ಥಳ: ಟ್ರಸ್ಟ್ ಆವರಣ, ಗೋಕುಲಂ 3ನೇ ಹಂತ.

■ **ಗೃಹಶೋಭೆ ಇಂಟರ್‌ನ್ಯಾಷನಲ್ ಟ್ರೇಡ್ ಫೇರ್ :** ಗೃಹಶೋಭೆ ಜೀವನ ಶೈಲಿ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಗ್ರೌಂಡ್, ಬೆಳಗ್ಗೆ 11ರಿಂದ.

■ **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಗಾನಸಿರಿ–ವೇದಾಂತ ಲಹರಿ ಭಾಗ–9 ನವೋತ್ಸವ, ಶ್ರೀನಿವಾಸ ಕಲ್ಯಾಣ ವೈಭವ ಕಾರ್ಯಕ್ರಮ, ವಿದುಷಿ ತೇಜಸ್ವಿನಿ ಶ್ರೀಹರಿ (ಮಳಗಿ)ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ

■ **ಮೈಸೂರು ಉತ್ಸವ :** ವಸ್ತುಪ್ರದರ್ಶನ, ಸ್ಥಳ: ಜೆಎಸ್‌ಎಸ್ ಮೈದಾನ, ದೊಡ್ಡಕೆರೆ ಮೈದಾನದ ಪಕ್ಕ, ಸಂಜೆ 6ಕ್ಕೆ

■ **ಸಂಚಲನ ರಂಗೋತ್ಸವ:** ಸಂಚಲನ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಸಂಚಲನ ರಂಗೋತ್ಸವ ಉದ್ಘಾಟನಾ ಸಮಾರಂಭ, ಉಪಸ್ಥಿತಿ: ಎಡಿಸಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಪ್ರಾಸ್ತಾವಿಕ ನುಡಿ: ಸಂಚಲನ ಸಂಸ್ಥೆ ಅಧ್ಯಕ್ಷ ದೀಪಕ್, ಬಳ್ಳಾರಿ ಜಿಲ್ಲೆ ಸಿರಿಗೇರಿಯ ಧಾತ್ರಿ ರಂಗ ಸಂಸ್ಥೆಯಿಂದ ಆದಿಕವಿ ಪಂಪನ ಆದಿ ಪುರಾಣ ಕಾವ್ಯದ ಭರತ ಬಾಹುಬಲಿಯ ಯದ್ಧ ಪ್ರಸಂಗದ ಕಥೆಯ ಆಯ್ದ ಭಾಗ ಬಾಹುಬಲಿ ವಿಜಯಂ, ಸಹ ನಿರ್ದೇಶನ ಗಣೇಶ್ ಎಂ. ಹೆಗ್ಗೋಡು, ವಿನ್ಯಾಸ, ನಿರ್ದೇಶನ: ಭೀಮೇಶ್ ಹೆಚ್.ಎನ್. ದಾವಣಗೆರೆ, ಸ್ಥಳ: ಕಿರು ರಂಗಮಂದಿರ ರಂಗಾಯಣ, ಸಮಯ: ಸಂಜೆ 6.30ಕ್ಕೆ

■ **ಬ್ರಹ್ಮವಿದ್ಯಾ ಸಂಸ್ಥೆ:** ರಸಋಷಿ ಸಂಶೋಧನಾ ಕೇಂದ್ರ, ಸ್ವಾ.ರಾ.ಧಾ., ಚೆನ್ನಪಟ್ಟಣ, ವೀಣಾ ವಿಶ್ವೇಶ್ವರನ್ ಅಂತಾರಾಷ್ಟ್ರೀಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಭಾರತೀಯ ಸಂಗೀತಶಾಸ್ತ್ರ ದಿನಾಚರಣೆ, ಗ್ರಂಥ ಲೋಕಾರ್ಪಣೆ ಮತ್ತು ಕಲೋತ್ಸವಗಳ ಉದ್ಘಾಟನೆ, ಸಾನ್ನಿಧ್ಯ: ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅತಿಥಿಗಳು: ಶಾಸಕ ಎಸ್.ಎ.ರಾಮದಾಸ್, ಕನ್ನಡ ವಿವಿ ಕುಲಪತಿ ಡಾ.ಸ.ಚಿ. ರಮೇಶ್, ಅಧ್ಯಕ್ಷತೆ: ಡಾ.ರಾ.ವಿಶ್ವೇಶ್ವರನ್, ಶಾಸ್ತ್ರ ಸೂರೀ ಪ್ರಶಸ್ತಿ ಪುರಸ್ಕೃತರು: ವಾರಾಣಸಿ ಐಜಿಎನ್‌ಸಿಎ ನಿರ್ದೇಶಕ ಡಾ.ವಿಜಯ್ ಶಂಕರ್ ಶುಕ್ಲಾ, ಸಂಸ್ಮರಣ ಪ್ರಶಸ್ತಿ ಪುರಸ್ಕೃತರಾದ ವಸಂತ ಮಾಧವಿ(ಕರ್ನಾಟಕ ಸಂಗೀತ, ಡಾ. ಲಲಿತಾ ಶ್ರೀನಿವಾಸನ್(ಭರತನಾಟ್ಯ), ಡಾ.ಶ್ರೀಕಾಂತ ನಾಗೇಂದ್ರಶಾಸ್ತ್ರಿ (ಸಂಗೀತ ಶಾಸ್ತ್ರ), ಡಾ.ಎಸ್.ಆರ್.ನರಸಿಂಹ ಮೂರ್ತಿ(ಆಗಮ–ಶ್ರೀವಿದ್ಯೆ), ಉಪಸ್ಥಿತಿ: ನಾಟ್ಯಗುರು ಶ್ರೀಮತಿ ಜ್ಯೋತಿ ಪಟ್ಟಾಭಿರಾಮ್, ಡಾ.ರಾಧಿಕಾ ನಂದಕುಮಾರ್, ಮೋಹನ್ ದೇಶ್‌ರಾಜ್ ಅರಸ್, ಮಿರ್ಲೆ ಕಾರ್ತಿಕ್, ಡಾ. ರಂಗರಾಜ್ ಜಿ., ಸ್ಥಳ ಶ್ರೀ ವಾಸುದೇವಾಚಾರ್ಯ ಭವನ ಜೆಎಲ್‌ಬಿರಸ್ತೆ, ಸಮಯ: ಸಂಜೆ 7ಕ್ಕೆ

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಮುಕ್ತ ವಿಶ್ವವಿದ್ಯಾನಿಲಯ ಮತ್ತು ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಲಯನ್ಸ್ ಕ್ಲಬ್ ಆಫ್ ಮೈಸೂರು –ಬಾಂಧವ್ಯ, ಸೇಂಟ್ ಜೋಸೆಫ್ ಆಸ್ಪತ್ರೆ ಮೈಸೂರು ಇವರ ಸಹಯೋಗದಲ್ಲಿ ಜನಾರೋಗ್ಯ ಸೇವಾ ಭಾಗವಾಗಿ ಮೇ 9ರ ಬೆಳಗ್ಗೆ 11ರಿಂದ ಮಧ್ಯಾಹ್ನ 2ರ ತನಕ ಮುಕ್ತ ವಿವಿ ಆವರಣದಲ್ಲಿ ಉಚಿತ ರಕ್ತದಾನ ಶಿಬಿರ, ಉಪಸ್ಥಿತಿ: ಮುಕ್ತ ವಿವಿ ಕುಲಪತಿ ಪ್ರೊ.ಎಸ್. ವಿದ್ಯಾಶಂಕರ್, ಕುಲಸಚಿವ ಪ್ರೊ. ಆರ್. ರಾಜಣ್ಣ, ನೋಡಲ್ ಅಧಿಕಾರಿ ಡಾ. ನಿರಂಜನ್‌ರಾಜ್ ಎಸ್

ಮೈಸೂರು ಆಕಾಶವಾಣಿ




ಬೆಳಗ್ಗೆ: 6.20 ಗೀತಾರಾಧನ, 6.35 ಹಾಗೂ **ಸಂಜೆ 5ಕ್ಕೆ**: ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ಸಂಗ್ರಾಮದ ಸ್ಮೃತಿಗಳು ಮೈಸೂರು ಸಂಸ್ಥಾನದ ಹೋರಾಟದ ನೆನಪುಗಳ ಮಾಲೆಪ್ರಸ್ತುತಿ: ದಿವಾಕರ್ ಹೆಗಡೆ 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಗಾಯನ: ಎ.ಎನ್. ಶೀಲಾ, ದೀಪಿಕಾ ಪಾಂಡುರಂಗಿ, ವ್ಯಾಖ್ಯಾನ:–ಡಾ.ಮ.ರಾಮಕೃಷ್ಣ, 7.45 ನಿತ್ಯ ವಿಜ್ಞಾನ–ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿ ಮಾರ್ಗದರ್ಶನ, ತೋಟಗಾರಿಕೆ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ವಿಷ್ಣುವರ್ಧನ್ ಅವರೊಂದಿಗೆ ಮಾತುಕತೆ, 9.35 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳುವಳಿಯ ಪಯಣ ಆಕಾಶವಾಣಿಯೊಂದಿಗೆ" 10.00 ಲಯಸಂಭ್ರಮ ತಾಳ, ಲಯ, ರಸಾಸ್ವಾದ, ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 12.05 ವನಿತಾ ವಿಹಾರ–ಅಮ್ಮ ಎಂದರೆ –ವಿಶ್ವ ಮಾತೆಯರ ದಿನದಂದು ವಿಶೇಷ ಕಾರ್ಯಕ್ರಮ–ಪ್ರಸ್ತುತಿ–ಮಂಜುಳಾ ಪುರಾಣಿಕ್ 12.30 ಭಕ್ತಿ ಗೀತೆಗಳು–ಡಾ.ಸ್ನೇಹಶ್ರೀ 12.45 ನಮ್ಮ ಆರೋಗ್ಯ ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್ ನಿರ್ವಹಣೆ ಮತ್ತು ಪರಿಹಾರ" ಕುರಿತು ಡಾ.ಜಯಶ್ರೀ ಸಿ.ಶಾನ್ ಬಾಲ್ ಅವರೊಂದಿಗೆ ಮಾತುಕತೆ 1.20 ಭಾವ ಗೀತೆಗಳು–ಡಾ.ಸ್ನೇಹಶ್ರೀ 3.00 ಟಿ.ಆರ್.ಮಹಾಲಿಂಗಂ–ವೇಣುವಾದನ 4.00 ಮಹಿಳಾರಂಗ–"ಡಾಕ್ಟರ್ ಸಮಯ" ಹದಿಹರೆಯದ ಹೆಣ್ಣುಮಕ್ಕಳನ್ನು ತಾಯಿಯಾಗಿ ಅರ್ಥ ಮಾಡಿಕೊಳ್ಳುವುದು ಹೇಗೆ? ಡಾ.ಸುನೀತಾ ಸಿದ್ದೇಶ್‌ರೊಂದಿಗೆ ನೇರ ಫೋನ್‌ಇನ್ ಕಾರ್ಯಕ್ರಮ, 4.30 ಝೇಂಕಾರ–ಮಕ್ಕಳ ಗೀತಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಪಾಪೇಗೌಡರೊಡನೆ ಮಾತುಕತೆ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ 10.30ಸವಿನೆನಪು

ಮೈಸೂರು ಮಿತ್ರ

ರಾಜಕೀಯ ಸಾಹಿತ್ಯ ಪ್ರೋತ್ಸಾಹಿಸಲು 50 ಲಕ್ಷ ಅನುದಾನ ಮೀಸಲು

ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್

ಮೈಸೂರು, ಮೇ 8(ಎಸ್‌ಬಿಡಿ)– ರಾಜಕೀಯ ಸಾಹಿತ್ಯ ಪ್ರೋತ್ಸಾಹಿಸುವ ಉದ್ದೇಶಕ್ಕೆ 50 ಲಕ್ಷ ರೂ.ಗಳನ್ನು ತಮ್ಮ ಶಾಸಕರ ಅನುದಾನದಲ್ಲಿ ಮೀಸಲಿಡುವುದಾಗಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಮಾನಸಗಂಗೋತ್ರಿ ರಾಣಿಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ' ಸಮಾರಂಭದಲ್ಲಿ ಅವರು ಮಾತನಾಡಿ, ರಾಜಕಾರಣ, ರಾಜಕಾರಣಿ ಹಾಗೂ ರಾಜಕೀಯವನ್ನು ಮೈಲಿಗೆಯಂತೆ ನಕಾರಾತ್ಮಕವಾಗಿ ಕಾಣುವುದು ಸಾಹಿತ್ಯದ ಮೂಲಕವಾದರೂ ತೊಲಗಬೇಕೆಂದು ಆಶಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಲಿತ ಸಾಹಿತ್ಯ, ಶರಣ ಸಾಹಿತ್ಯ ಸೇರಿದಂತೆ ಎಲ್ಲಾ ಪ್ರಾಕಾರವನ್ನೂ ಕಾಣಬಹುದು. ಆದರೆ ರಾಜಕೀಯ ಸಾಹಿತ್ಯ ಗೋಷ್ಠಿಯನ್ನು ಏಕೆ ಏರ್ಪಡಿಸುವುದಿಲ್ಲ?. ರಾಜಕೀಯ ಸಾಹಿತ್ಯ ಹೆಚ್ಚಾಗಬೇಕು. ಈ ಮೂಲಕವಾದರೂ ರಾಜಕೀಯವನ್ನು ಮೈಲಿಗೆಯಾಗಿ ಕಾಣುವುದು ತೊಲಗಬೇಕು. ರಾಜಕಾರಣ, ರಾಜಕಾರಣಿ, ರಾಜಕೀಯವನ್ನು ಸಕಾರಾತ್ಮಕವಾಗಿ ನೋಡಿದಾಗ ಮಾತ್ರ ಅದು ಜನತಂತ್ರ ವ್ಯವಸ್ಥೆಗೆ ಪೂರಕವಾಗಿರುತ್ತದೆ. ಇದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಮಹೇಶ್ ಜೋಶಿ ಅವರು ಗಂಭೀರವಾಗಿ ಪರಿಗಣಿಸಬೇಕು. ಸರ್ಕಾರ ನೀಡುವ ಹಣದಲ್ಲಿ 50 ಲಕ್ಷ ರೂ.ಗಳನ್ನು ಮೀಸಲಿಟ್ಟು, ಗ್ರಾಪಂ ಸದಸ್ಯರಾದಿಯಾಗಿ ಯಾರೇ ಪುಸ್ತಕ ಬರೆದರು ನಾವೇ ಪ್ರಕಟಿಸಿ, ಜನರಿಗೆ ವಿತರಿಸಲಾಗುವುದು ಎಂದು ತಿಳಿಸಿದರು.

ನನ್ನ ತಾತ, ತಂದೆ, ಅಜ್ಜಿ, ಅಮ್ಮ ಯಾರಿಗೂ ಅಕ್ಷರ ಗೊತ್ತಿರಲಿಲ್ಲ. ಆದರೆ ಕುಟುಂಬದಲ್ಲಿ ನಾನು ಮೊದಲಿಗೆ ಸರ್ಕಾರ ಮತ್ತು ಸಮಾಜದ ಸಹಯೋಗದಿಂದ ಅಕ್ಷರ ಸ್ವೀಕಾರ ಮಾಡಿ ಅಕ್ಷರ ಸಂಸ್ಕೃತಿಗೆ ಪಾದಾರ್ಪಣೆ ಮಾಡಿದೆ. ಪೋಷಕರಲ್ಲಿ ವಿದ್ಯೆಯಿಲ್ಲದಿದ್ದರೂ ವಿವೇಕವಿತ್ತು. ಅದರಿಂದಲೇ ನಾನು ವಕೀಲನಾಗಿ, ಶಾಸಕನಾಗಿ, ಸಚಿವನಾದೆ. ವೀರಪ್ಪಮೊಯ್ಲಿ ಅವರು ಎಲ್ಲ ರೀತಿಯಲ್ಲಿ ಬೆಳೆಯಲು ನನಗೆ ಸಹಕಾರ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಸಚಿವನಾಗಿದ್ದಾಗ ಐಎಎಸ್ ಅಧಿಕಾರಿಗಳು ಕನ್ನಡ ಕಲಿತಿಲ್ಲ ಎಂದು ಕುಟುಕಿದ್ದೆ. ನಂತರ ನನಗೆ ಅರಣ್ಯ ಇಲಾಖೆಗೆ ಪ್ರಮೋಷನ್ ನೀಡಿದರು. 'ವಿಶ್ವನಾಥ್‌ರನ್ನು ಕನ್ನಡದಿಂದ ಕಾಡಿಗಟ್ಟಿದರು' ಎಂದು ಮಾಧ್ಯಮದವರು ಬರೆದರು. ಸೂಕ್ಷ್ಮಮತಿ ವೀರಪ್ಪ ಮೊಯ್ಲಿ ಅವರು ಸಮಾರಂಭದಲ್ಲಿ ನಾನು ಪ್ರಾಸಂಗಿಕವಾಗಿ ಹೇಳಿದ್ದನ್ನು ಗಂಭೀರವಾಗಿ ಪರಿಗಣಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಭಿವೃದ್ಧಿಗೆ ಕ್ರಮ ವಹಿಸಿದ್ದರು ಎಂದು ವಿಶ್ವನಾಥ್ ಅನೇಕ ನೆನಪುಗಳ ಮೆಲಕು ಹಾಕಿದ್ದಲ್ಲದೆ, 75ರ ಸಂಭ್ರಮ ಕಾರ್ಯಕ್ರಮಕ್ಕೆ ಕಾರಣರಾದ ಎಲ್ಲರಿಗೂ ಧನ್ಯವಾದ ತಿಳಿಸಿದರು.

ಮಹೇಶ್ ಜೋಶಿ ಸಹಮತ: ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ರಾಜಕೀಯ ಹಾಗೂ ಪಕ್ಷಗಳು ಬಹಳ ಮುಖ್ಯ. ರಾಜಕೀಯ ಎಂಬ ನೀರಿನ ಮೇಲೆ ಸಾಹಿತ್ಯ ಹಾಗೂ ಮಾಧ್ಯಮ ದೋಣಿಯಂತೆ ತೇಲುತ್ತಿರಬೇಕು. ಆದರೆ ದೋಣಿಯೊಳಗೆ ನೀರು ಸೇರಬಾರದೆಂಬ ಸೂಕ್ಷ್ಮತೆಯೊಂದಿಗೆ ಮುನ್ನಡೆಯಬೇಕಿದೆ. ಹಾವೇರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ರಾಜಕೀಯ, ವೈದ್ಯಕೀಯ, ಕ್ರೀಡೆ, ಕಾನೂನು, ಪೊಲೀಸ್, ಯಕ್ಷಗಾನ, ವಿಜ್ಞಾನ ಸಾಹಿತ್ಯಕ್ಕೂ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಚಿಂತನೆ ನಡೆಸಲಾಗಿದೆ. ರಾಜ್ಯದಲ್ಲಿ 'ರಾಜಕೀಯ ವಿಶ್ವವಿದ್ಯಾನಿಲಯ' ಸ್ಥಾಪಿಸಬೇಕೆಂಬ ಆಗ್ರಹಕ್ಕೆ ನನ್ನ ಸಹಮತವೂ ಇದೆ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳಿಗೆ ಸಾಹಿತ್ಯ ಪರಿಷತ್ ಪರವಾಗಿ ಪತ್ರ ಬರೆದು ಮನವಿ ಮಾಡುತ್ತೇನೆ ಎಂದು ತಿಳಿಸಿದರು.

ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ

ವಿಶ್ವನಾಥ್ ಅವರದ್ದು ಬಹುಮುಖ ವ್ಯಕ್ತಿತ್ವ

ಮಾಧ್ಯಮ ಮೈತ್ರಿಯಾನಕ್ಕೆ ಚಾಲನೆ ನೀಡಿ ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಅಭಿಮತ

ಮೈಸೂರು, ಮೇ 8(ಆರ್‌ಕೆಬಿ)– ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಅವರದ್ದು ಬಹುಮುಖ ವ್ಯಕ್ತಿತ್ವ. ಅವರು ರಾಜಕಾರಣಿ ಅಷ್ಟೇ ಅಲ್ಲ, ಸಾಹಿತಿ, ಪತ್ರಕರ್ತ ವಿಮರ್ಶಕ, ಸಂಘಟನೆಗಾರ, ಸೃಜನಶೀಲ ವ್ಯಕ್ತಿತ್ವ ಉಳ್ಳವರು. ರಾಜ್ಯಕ್ಕೆ ಪ್ರಬುದ್ಧ ದಿಕ್ಕನ್ನು ತೋರಿಸಿಕೊಟ್ಟವರು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದರು.

ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಜಂಟಿಯಾಗಿ ಆಯೋಜಿಸಿದ್ದ 'ಅಡಗೂರು ಹೆಚ್. ವಿಶ್ವನಾಥ್ 75ರ ಸಂಭ್ರಮ' ಕಾರ್ಯಕ್ರಮದಲ್ಲಿ 'ಮಾಧ್ಯಮ ಮೈತ್ರಿಯಾನ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅವರು ಯಾವುದೇ ಪಕ್ಷದಲ್ಲಿರಲಿ ಸ್ವಪಕ್ಷೀಯರ ವಿರುದ್ಧವೇ ಗಟ್ಟಿ ಧ್ವನಿ ಎತ್ತುವ ಮತ್ತು ಎತ್ತಿದ ರಾಜಕಾರಣಿ. ಕಾಂಗ್ರೆಸ್ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ರಾಜೀನಾಮೆ ಕೊಟ್ಟ ಯಾರಾದರೂ ರಾಜಕಾರಣಿ ಇದ್ದರೆ ಅದು ವಿಶ್ವನಾಥ್ ಮಾತ್ರ ಎಂದು ಹೇಳಿದರು.

ವಿಶ್ವನಾಥ್ ಲೆಕ್ಕಾಚಾರದಡಿ ರಾಜಕಾರಣ ಮಾಡುವವರಲ್ಲ. ಯಾವುದೇ ವಿಚಾರಕ್ಕೆ ತಕ್ಷಣಕ್ಕೆ ವರ್ತಮಾನದ ಪ್ರತಿಕ್ರಿಯೆ ನೀಡುವ ಸಭ್ಯ ರಾಜಕಾರಣಿ. ಸುದ್ದಿಗಳ ವಿಚಾರಕ್ಕೆ ಸಂಬಂಧಿಸಿದಂತೆ ವಿಶ್ವನಾಥ್ ವಿಧಾನ ಸೌಧಕ್ಕೆ ಬರುತ್ತಾರೆಂದರೆ ಮಾಧ್ಯಮಗಳು ಅವರಿಗಾಗಿ ಕಾತುರದಿಂದ ಕಾಯುತ್ತಿರುತ್ತವೆ. ಅಂತಹ ವಿಶ್ವನಾಥ್ ಅವರ ಬಗ್ಗೆ ಇಷ್ಟೇ ಮಾತನಾಡಬೇಕು ಎಂದು ವಿಚಾರಗಳನ್ನು ಹಿಡಿದಿಟ್ಟುಕೊಳ್ಳುವುದು ಕಷ್ಟ ಎಂದರು.

ಯಾರಾದರೂ ಅವರ ಹೃದಯಕ್ಕೆ ಒಮ್ಮೆ ಆಪ್ತರಾದರೆ ಸಾಕು ಅವರನ್ನು ಬಿಟ್ಟುಕೊಡುವುದಿಲ್ಲ. ವರ್ಣರಂಜಿತ ವ್ಯಕ್ತಿತ್ವ ಅವರದ್ದು. ಅತಿ ಹೆಚ್ಚು ಸುದ್ದಿಗೆ ಪಾತ್ರರಾದವರು ಅವರೇ. ವಿಶ್ವನಾಥ್ ಅವರನ್ನು ಸಚಿವರನ್ನಾಗಿ ಮಾಡಿದರೆ ನಮ್ಮ ಮೇಲೆ ಸವಾರಿ ಮಾಡಬಹುದು ಎಂಬ ಕಾರಣಕ್ಕೋ ಏನೋ ಅವರನ್ನು ಜೆಡಿಎಸ್ ಅಧ್ಯಕ್ಷರನ್ನಾಗಿ ಮಾಡಲಾಯಿತು ಎಂದು ಶಿವಾನಂದ ತಗಡೂರು ಹೇಳಿದರು. ವಿಶ್ವನಾಥ ಅವರ ಮಹತ್ವದ ಬಹು ನಿರೀಕ್ಷಿತ 'ಬಾಂಬೆ ಡೇಸ್' ಕೃತಿ ಯಾವಾಗ ಬರುತ್ತದೆಂದು ಎಲ್ಲರೂ ಕಾತರದಿಂದ ಕಾಯುತ್ತಿದ್ದೇವೆ ಎಂದು ತಿಳಿಸಿದರು.

ಪತ್ರಿಕಾಗೋಷ್ಠಿ ಮಾಡುವುದನ್ನು ಹೇಳಿಕೊಟ್ಟವರೇ ಪತ್ರಕರ್ತರು: ವಿಶ್ವನಾಥ್



ಮೈಸೂರಿನಲ್ಲಿ ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮದಲ್ಲಿ ಮಾಧ್ಯಮ ಮೈತ್ರಿಯಾನ ಕಾರ್ಯಕ್ರಮವನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಉದ್ಘಾಟಿಸಿದರು. ಚಿತ್ರದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತರಾದ ಡಿ.ಉಮಾಪತಿ, ರವೀಂದ್ರ ರೇಷ್ಮೆ, ಬಿ.ಎಂ.ಹನೀಫ್, ಹುಣಸವಾಡಿ ರಾಜನ್, ಕೆ.ಶಿವಕುಮಾರ್, ಟಿ.ಗುರುರಾಜ್ ಇನ್ನಿತರರನ್ನು ಕಾಣಬಹುದು.

ಶಾಸಕರೊಬ್ಬರ ಪುತ್ರ ಪ್ರತಿನಿತ್ಯ ತಮ್ಮ ಕಾರನ್ನು ತೊಳೆಯುತ್ತಿದ್ದುದನ್ನು ಕಂಡು ವಿಶ್ವನಾಥ್ ಕೆಲವೊಮ್ಮೆ ನನ್ನ ಕಾರು ಏಕೆ ತೊಳೆಯುತ್ತಿದ್ದೀಯ, ಯಾರು ನೀನು ಎಂದು ಕೇಳಿದ ಅವರಿಗೆ ಆ ಯುವಕ ತಾನು ಶಾಸಕರೊಬ್ಬರ ಪುತ್ರ ಎಂದು ತಿಳಿದಾಗ ತೀರಾ ಬೇಸರಪಟ್ಟುಕೊಂಡರು. ತಕ್ಷಣವೇ ಮುಖ್ಯಮಂತ್ರಿ ದೇವರಾಜ ಅರಸು ಅವರ ಗಮನ ಸೆಳೆದು ಶಾಸಕರಿಗೆ ಪಿಂಚಣಿ ಸೌಲಭ್ಯ ಕಲ್ಪಿಸಲು ಸಲಹೆ ನೀಡಿದರು. ಇಂದು ಶಾಸಕರು, ಮಂತ್ರಿಗಳಾದವರು ಪಿಂಚಣಿ ಪಡೆಯುತ್ತಿದ್ದಾರೆಂದರೆ ಅದಕ್ಕೆ ವಿಶ್ವನಾಥ್ ಅವರು ಕಾರಣ ಎಂಬುದನ್ನು ಶಾಸಕರು ನೆನಪಿಸಿಕೊಳ್ಳಬೇಕು.

- ಶಿವಾನಂದ ತಗಡೂರು,
ಅಧ್ಯಕ್ಷ, ಕೆಯುಡಬ್ಲ್ಯುಜೆ

ಮೈಸೂರು, ಮೇ 8(ಆರ್‌ಕೆಬಿ)– 1970ರಲ್ಲಿ ನನಗೆ ಪತ್ರಿಕಾಗೋಷ್ಠಿ ಮಾಡುವುದನ್ನು ಹೇಳಿಕೊಟ್ಟವರೇ ಪತ್ರಕರ್ತರು. ಅಂದಿನ ಕಾಲಘಟ್ಟದಲ್ಲಿ ಎನ್.ಅರ್ಜುನದೇವ, ಎಸ್.ಪಟ್ಟಾಭಿರಾಮನ್, ಹ.ಲ.ಶ್ರೀಕಂಠಮೂರ್ತಿ, ಅರುಣ ರಾಮಣ್ಣ ಇನ್ನಿತರರು ನನಗೆ ಪತ್ರಿಕಾಗೋಷ್ಠಿಗಳನ್ನು ಹೇಗೆ ನಡೆಸಬೇಕು. ಹೇಗೆ ಮಾತನಾಡಬೇಕು ಎಂದು ಹೇಳಿಕೊಟ್ಟರು. ನಾನಿಂದು ನಾಡಿನಲ್ಲಿ ಹೀಗೆ ಬೆಳೆಸಿದ್ದೇ ಮಾಧ್ಯಮಗಳು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ತಿಳಿಸಿದರು.

ಮಾಧ್ಯಮ ಮೈತ್ರಿಯಾನದಲ್ಲಿ ತಮ್ಮ ಮನದಾಳದ ಮಾತುಗಳನ್ನಾಡಿದ ಅವರು, 50 ವರ್ಷಗಳ ಕಾಲದಿಂದ ಮಾಧ್ಯಮದ ಜೊತೆಗೇ ಬಂದಿದ್ದೇನೆ. 75ನೇ ವರ್ಷದ ಸಂಭ್ರಮದಲ್ಲಿ ಭಾಗವಹಿಸಿದ್ದೇನೆ. ಯಾರಿಗೆ ಇಂಥ ಅವಕಾಶ ಸಿಗಲು ಸಾಧ್ಯ ಎಂದು ತಮಗೆ ಜಿಲ್ಲಾ ಪತ್ರಕರ್ತರ ಸಂಘ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸಿಕ್ಕಿದ ಗೌರವ ಕಂಡು ಸಂತಸ ವ್ಯಕ್ತಪಡಿಸಿದರು.

ಪತ್ರಿಕಾಗೋಷ್ಠಿ ನಡೆಸುವುದನ್ನು ಪತ್ರಕರ್ತರ ಕಲಿಸಿಕೊಟ್ಟರೆ, ಡಿ.ದೇವರಾಜ ಅರಸು ಮತ್ತು ಬಸವಲಿಂಗಪ್ಪ ಇನ್ನಿತರು ಜನರೊಂದಿಗೆ ಬೆರೆತು ಮಾತನಾಡುವುದು, ಅವರು ಹೇಳುವುದನ್ನು ಕೇಳು ಎಂದು ಹೇಳಿಕೊಟ್ಟರು. ದೊಡ್ಡವರು ನನಗೆ ಹೇಳಿಕೊಟ್ಟಿದ್ದನ್ನು ಇಂದಿಗೂ ಪಾಲಿಸುತ್ತಿದ್ದೇನೆ ಎಂದು ವಿಶ್ವನಾಥ್ ತಿಳಿಸಿದರು.

1970 ಅವಧಿಯಲ್ಲಿ ವೀರೇಂದ್ರ ಪಾಟೀಲ್ ಮುಖ್ಯಮಂತ್ರಿಯಾಗಿದ್ದ ಸಮಯ, ಆಗ ವಿದ್ಯಾರ್ಥಿ ಚಳುವಳಿ ಗಟ್ಟಿಯಾಗಿತ್ತು ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಚಳುವಳಿಯಿಂದಾಗಿ ಸರ್ಕಾರವೇ ಪತನವಾಯಿತು ಎಂದರು.

1980ರಲ್ಲಿ ಮುಖ್ಯಮಂತ್ರಿಯಾಗಿದ್ದ ಆರ್.ಗುಂಡೂರಾವ್ ಅವರು ಎಷ್ಟರಮಟ್ಟಿಗೆ ಭವಿಷ್ಯ ಹೇಳಿದ್ದರೆಂದರೆ, ಪತ್ರಿಕೆಯವರನ್ನು ಸಮುದ್ರಕ್ಕೆ ಎಸೆಯಿರಿ ಎಂದು ಗುಡುಗಿದ್ದರು. 45 ವರ್ಷದ ಹಿಂದೆಯೇ ಅವರು ಸತ್ಯ ಹೇಳಿದ್ದರು. ನಂತರ ಸರ್ಕಾರಕ್ಕೆ ನೇರವಾಗಿ ಟೀಕಿಸುವ ಪತ್ರಿಕೆಗಳು ಬಂದವು ಎಂದು ತಿಳಿಸಿದರು.

ಸುರಕ್ಷಾ ನಿಧಿಗೆ 75,000; ಪತ್ರಿಕಾ ಭವನಕ್ಕೆ 10 ಲಕ್ಷ: ಇದೇ ವೇಳೆ ವಿಶ್ವನಾಥ ಅವರು ಜಿಲ್ಲಾ ಪತ್ರಕರ್ತರ ಸಂಘದ ಪತ್ರಕರ್ತರ ಸುರಕ್ಷಾ ನಿಧಿಗೆ 75,000 ರೂ.ಗಳನ್ನು ತಮ್ಮ 75ರ ಸಂಭ್ರಮದ ನೆನಪಿನಾರ್ಥ ನೀಡುವುದಾಗಿ ತಿಳಿಸಿದರು. ಸಂಘವು ನಿರ್ಮಿಸಲು ಉದ್ದೇಶಿಸಿರುವ ಕಟ್ಟಡಕ್ಕೆ ತಮ್ಮ ವಿವೇಚನಾ ನಿಧಿಯಿಂದ 10 ಲಕ್ಷ ರೂ. ನೀಡುವುದಾಗಿಯೂ ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಯುವ ಕರ್ನಾಟಕ ಸಂಘಟನೆಯ ರಾಜ್ಯ ಕಾರ್ಯಾಧ್ಯಕ್ಷ ನಂದಾ ಕಟ್ಟಿಮನಿ ಅವರು ವಿಶ್ವನಾಥ್ ಅವರ 75ರ ಸಂಭ್ರಮದ ನೆನಪಿಗಾಗಿ ತಮಗೆ ನೀಡಿದ್ದ ಅಂಬುಲೆನ್ಸ್ ಅನ್ನು ಅವರು ಕೆ.ಆರ್.ನಗರದ ವೈದ್ಯ ಮೆಹಬೂಬ್ ಖಾನ್ ಅವರಿಗೆ ನೀಡುವುದಾಗಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಅವರು 'ಮಾಧ್ಯಮ ಮೈತ್ರಿಯಾನ; ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಮಾಧ್ಯಮ ಮೈತ್ರಿಯಾನ ಕುರಿತು ಹಿರಿಯ ಪತ್ರಕರ್ತರಾದ ಡಿ.ಉಮಾಪತಿ, ರವೀಂದ್ರ ರೇಷ್ಮೆ, ಬಿ.ಎಂ.ಹನೀಫ್, ಹುಣಸವಾಡಿ ರಾಜನ್, ಕೆ.ಶಿವಕುಮಾರ್ ಮಾತನಾಡಿದರು. ಪತ್ರಕರ್ತ ಟಿ ಗುರುರಾಜ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪತ್ರಕರ್ತರ ಸಂಘದ ಪದಾಧಿಕಾರಿಗಳಾದ ಎಂ.ಸುಬ್ರಹ್ಮಣ್ಯ, ಧರ್ಮಾಪುರ ನಾರಾಯಣ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ವೈ.ಡಿ.ರಾಜಣ್ಣ, ರಾಜಶೇಖರ ಕದಂಬ, ಕನ್ನಡ ಸಾಹಿತ್ಯ ಕಲಾ ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಆಳುವವರು ಸರ್ವಧರ್ಮ ಸಹಿಷ್ಣುಗಳಾಗಿದ್ದಾಗ ಮಾತ್ರ ಯಶಸ್ವಿ ಆಡಳಿತ ನಡೆಸಲು ಸಾಧ್ಯ

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅಭಿಮತ



ಮೈಸೂರಿನ ಮಾನಸಗಂಗೋತ್ರಿ ರಾಣಿಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ನಡೆದ 'ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ' ಸಮಾರಂಭದಲ್ಲಿ ವಿಶ್ವನಾಥ್ ಹಾಗೂ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರನ್ನು ಅಭಿನಂದಿಸಲಾಯಿತು.

ನಾನು ಸಿಎಂ ಆಗಲು ಇವರೂ ಕಾರಣ

ನಾನು ಮುಖ್ಯಮಂತ್ರಿ ಆಗಲು ಶ್ರೀನಿವಾಸ ಪ್ರಸಾದ್, ಎ.ಹೆಚ್.ವಿಶ್ವನಾಥ್, ಹೆಚ್.ಎಂ.ರೇವಣ್ಣ ಅವರು ಪ್ರಮುಖ ಪಾತ್ರ ವಹಿಸಿದ್ದರು. ಆಗ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ವಿಶ್ವನಾಥ್ ಅವರನ್ನು ಅರಣ್ಯ ಇಲಾಖೆ ಸಚಿವರನ್ನಾಗಿ ಮಾಡಿದೆ. ನನ್ನ ಲೆಕ್ಕದಲ್ಲಿ ಅದು ಬಡ್ತಿ ವೀರಪ್ಪನ್ ಹಾವಳಿ ಹೆಚ್ಚಾಗಿದ್ದರಿಂದ ಅದನ್ನು ತಡೆಯಲು ವಿಶ್ವನಾಥ್ ಅವರೇ ಸರಿ ಎನ್ನುವುದು ಮುಖ್ಯ ಉದ್ದೇಶವಾಗಿತ್ತು. ನನ್ನ ಪ್ರಯೋಗ ಯಶಸ್ವಿಯಾಗಿತ್ತು. ಇಲಾಖೆಯನ್ನು ಸಮರ್ಥವಾಗಿ ನಿಭಾಯಿಸಿ, 450ರಷ್ಟಿದ್ದ ವೀರಪ್ಪನ್ ಸಹಚರರನ್ನು ನಾಲ್ಕೈದು ಜನರಿಗೆ ಇಳಿಕೆ ಮಾಡಿದ್ದರು.

-ಡಾ.ಎಂ.ವೀರಪ್ಪ ಮೊಯ್ಲಿ,
ಮಾಜಿ ಮುಖ್ಯಮಂತ್ರಿ

ಮೈಸೂರು, ಮೇ 8(ಎಸ್‌ಬಿಡಿ)– ಯಾವಾಗಲೂ ಆಳುವವರು ಸರ್ವಧರ್ಮ ಸಹಿಷ್ಣುಗಳಾಗಿರಲೇಬೇಕು ಎಂದು ಮಾಜಿ ಮುಖ್ಯಮಂತ್ರಿ ಡಾ.ಎಂ.ವೀರಪ್ಪಮೊಯ್ಲಿ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಮಾನಸಗಂಗೋತ್ರಿ ರಾಣಿಬಹದ್ದೂರ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ 'ಅಡಗೂರು ಹೆಚ್.ವಿಶ್ವನಾಥ್ 75ರ ಸಂಭ್ರಮ' ಸಮಾರಂಭದ ಭಾಗವಾದ 'ವಿಶ್ವಾಕ್ಷರ ಪಯಣ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕ್ರಿ.ಶ.2ರಿಂದ 15ರ ಅವಧಿಯಲ್ಲಿ ಆಳ್ವಿಕೆ ಮಾಡಿದ ರಾಜರುಗಳಲ್ಲಿ ಬಹುತೇಕರು ಜೈನ ಧರ್ಮೀಯರಾಗಿದ್ದರು. ಅವರು ಸರ್ವಧರ್ಮ ಸಹಿಷ್ಣುಗಳಾಗಿದ್ದರಿಂದ ಯಶಸ್ವಿಯಾಗಿ ಆಡಳಿತ ನಡೆಸಲು ಸಾಧ್ಯವಾಯಿತು. ಆಳುವವರು ಯಾವಾಗಲೂ ಸರ್ವಧರ್ಮ ಸಹಿಷ್ಣು ಆಗಿರಲೇಬೇಕು. ಇಲ್ಲವಾದರೆ ದೇಶ ಅಥವಾ ರಾಜ್ಯವನ್ನು ಆಳಲು ಸಾಧ್ಯವಿಲ್ಲ. ಸರ್ವೋದಯ, ಸಮನ್ವಯ ಹಾಗೂ ಸರ್ವಧರ್ಮ ಜಾಗೃತಿ ಬಹಳ ಮುಖ್ಯ. ಬಹು ಸಂಸ್ಕೃತಿಗೆ ಧಕ್ಕೆಯಾದರೆ ಪ್ರಜಾಪ್ರಭುತ್ವದ ಬುನಾದಿ ಕಂಪಿಸುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.


ಕಾವ್ಯ, ಕವನ, ಪ್ರಬಂಧ, ಕತೆ ಹೀಗೆ ಯಾವ ಬಗೆಯ ಸಾಹಿತ್ಯವಾದರೂ ರಾಷ್ಟ್ರೀಯ, ಸಾಮಾಜಿಕ, ರಾಜಕೀಯ ಸಮಸ್ಯೆಗಳಿಗೆ ಸ್ಪಂದಿಸಬೇಕು. ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನದ ಆಶಯವನ್ನು ಪ್ರತಿನಿಧಿಸಬೇಕು. ಹೊಸತನ ಕಂಡುಕೊಳ್ಳಲು ಅನ್ವೇಷಣೆಯಾಗಬೇಕು. ಕವಲುಗಳು ಸೇರದಿದ್ದರೆ ಮೂಲ ನದಿಯೇ ಬತ್ತಿ ಹೋಗುತ್ತದೆ. ಹಾಗೆಯೇ ಹೊಸತನವಿಲ್ಲದಿದ್ದರೆ ಸಾಹಿತ್ಯವೂ ಅಳಿಯುತ್ತದೆ ಎಂದರು.

ಲೋಕ ಪ್ರಸಿದ್ಧ 'ಹಳ್ಳಿ ಹಕ್ಕಿ ಹಾಡು' ಪುಸ್ತಕದಲ್ಲಿ ವಿಶ್ವನಾಥ್ ಅವರು ತಮ್ಮ ಊರಿನ ವಿಚಾರವನ್ನು ಉದಾತ್ತವಾಗಿ ಬರೆದಿದ್ದಾರೆ. ಡಿ.ದೇವರಾಜ ಅರಸು ಅವರ ಬಗ್ಗೆಯೂ ವಿವರವಾಗಿ ಹೇಳಿದ್ದಾರೆ. ಸಂಗತಿಯೊಂದನ್ನು ಉದಾಹರಿಸಿ ಎಲ್ಲಾ ವಿಷಯಗಳನ್ನೂ ರಾಜಕಾರಣ ಮಾಡಬಾರದು, ಹಾಗೆ ಮಾಡಿದರೆ ಅದು ಜನದ್ರೋಹ ಎಂದು ತಿಳಿಸಿದ್ದಾರೆ. ಅರಸು ಅವರಿಂದ ರಾಜಕೀಯ ಸಿದ್ಧಾಂತ ಕಲಿತಿರುವ ವಿಶ್ವನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ವತಂತ್ರವಾಗಿ ಮುನ್ನೆಡೆಸಿ ಮಾದರಿಯಾಗಿದ್ದರು. ಸಹಕಾರಿ ಸಚಿವರಾಗಿದ್ದಾಗ ಜಾರಿಗೆ ತಂದ ರೈತ ಸಹಕಾರಿ ಆರೋಗ್ಯ ವಿಮಾ ಯೋಜನೆ ದೇಶವ್ಯಾಪಿ ಯಶಸ್ವಿಯಾಗಿತ್ತು ಎಂದು ತಿಳಿಸಿದರು.

ಪಕ್ಷನಿಷ್ಠೆಯನ್ನು ಗಂಭೀರವಾಗಿ ಚುನಾವಣಾ ವಿಷಯವಾಗಿ ಪರಿಗಣಿಸಬೇಕು. ಅರಳಿಸುವುದು ರಾಷ್ಟ್ರಾಭಿಮಾನ, ಕೆರಳಿಸುವುದು ರಾಷ್ಟ್ರದ್ರೋಹ. ಈ ಸಂದರ್ಭದಲ್ಲಿ 'ಕ್ಯಾಶ್ ಅಂಡ್ ಕ್ಯಾರಿ ಮತ್ತು ಕಾಸ್ಟ್' ಮತದಾರರ ಮೇಲೆ ಪ್ರಭಾವ ಬೀರುತ್ತವೆ. ಇಂತಹ ಹಲವು ವಿಚಾರಗಳನ್ನು ವಿಶ್ವನಾಥ್, 'ಮತಸಂತೆ' ಕೃತಿಯಲ್ಲಿ ವ್ಯಕ್ತಪಡಿಸಿದ್ದಾರೆ. ಉಳುವವನೇ ಭೂಮಿಯ ಒಡೆಯ, 20 ಅಂಶಗಳ ಆರ್ಥಿಕ ಕಾರ್ಯಕ್ರಮ ಸೇರಿದಂತೆ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ರಾಜ್ಯದಲ್ಲಾದ ಸುಧಾರಣೆ, ಬದಲಾವಣೆಯನ್ನು 'ಆಪತ್‌ಸ್ಥಿತಿಯ ಆಲಾಪಗಳು' ಪುಸ್ತಕದಲ್ಲಿ ದಾಖಲಿಸಿದ್ದಾರೆ. ಸಾಧಕ ಛಲವಾದಿ ವಿಶ್ವನಾಥ್ ಅವರ ಪ್ರತಿಭೆ ವಿಶ್ವವ್ಯಾಪಿ ಹರಡಲಿ. ಯಾವ ಪಕ್ಷದಲ್ಲಿದ್ದರೂ ದೋಷ ಕಂಡರೆ ಅದನ್ನು ಎತ್ತಿ ತೋರಿಸುವ ಧೈರ್ಯ ಇವರಿಗೆ ಹೆಚ್ಚಿದೆ. ಯುವ ರಾಜಕಾರಣಿಗಳು ಅನುಸರಿಸಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಡಾ.ಸಿ.ಎಸ್.ದ್ವಾರಕಾನಾಥ್ 'ಆಪತ್‌ಸ್ಥಿತಿಯ ಆಲಾಪಗಳು', ಡಾ.ಬಂಜಗೆರೆ ಜಯಪ್ರಕಾಶ್ 'ಹಳ್ಳಿಹಕ್ಕಿಯ ಹಾಡು', ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) 'ಮತಸಂತೆ', ವಸುಧೇಂದ್ರ 'ದಿ ಟಾಕಿಂಗ್ ಶಾಪ್' ಹಾಗೂ ಡಾ.ಶುಭದಾಪ್ರಸಾದ್ 'ಅಥೆನ್ಸಿನ ರಾಜ್ಯಾಡಳಿತ' ಪುಸ್ತಕ ಕುರಿತು ಮಾತನಾಡಿ, ಅಡಗೂರು ಹೆಚ್.ವಿಶ್ವನಾಥ್ ಅವರ ಸೂಕ್ಷ್ಮತೆ, ಸಾಮಾಜಿಕ ಬದ್ಧತೆ, ಸಾಹಿತ್ಯ ಪ್ರತಿಭೆಯನ್ನು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್, ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಮಹೇಶ್ ಜೋಶಿ, ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ ಹಾಗೂ ಎಂ.ಚಂದ್ರಶೇಖರ್, ರಂಗಕರ್ಮಿ ರಾಜಶೇಖರ ಕದಂಬ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಗೋಕುಲಂ ಕೆಂಪೀರೇಗೌಡರ ಉದ್ಯಾನವನದಲ್ಲಿ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಿಸಲಾಯಿತು. ಬಿಜೆಪಿ ಮುಖಂಡ ಎಲ್.ಚೌಡಪ್ಪ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಆಟೋ ರಾ.ಸಿದ್ಧರಾಮು, ಯತೀಶ್, ಚಿರಂತ್, ಹೆಚ್.ಸಿ.ಮೃತ್ಯುಂಜಯ, ಬಿ.ಕುಮಾರ್, ಮಹದೇವಣ್ಣ, ಸಿದ್ಧರಾಜು, ಮಾದಪ್ಪ, ಎಂ.ಶಿವಪ್ರಕಾಶ್, ಶ್ರೀನಿವಾಸಗೌಡ, ರವಿ ಚಾಮ, ಸತೀಶ್, ಸುರೇಂದ್ರ, ಶಿವಕುಮಾರ್, ಜಾವಾ ಕೃಷ್ಣಪ್ಪ ಮತ್ತಿತರರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನಮ್ಮ ಮನೆ ಓಪನಿಂಗ್‌ಗೆ ಯಾಕೆ ಬರಲಿಲ್ಲ.

ರಂಗ : ಬರಬೇಕು ಅಂತ ಇದ್ದೆ ಆದರೆ ಯಾವ ಕಲ್ಯಾಣ ಮಂಟಪದಲ್ಲಿದೆ ಅಂತ ಗೊತ್ತಿರ್ಲಿಲ್ಲ ಅದಕ್ಕೆ ಬರಲಿಲ್ಲ.

ಮೈಸೂರು ಮಿತ್ರ

ಸೋಮವಾರ, 9 ಮೇ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೀವು ವಾಸಿಸುತ್ತಿರುವ ದೇಶಕ್ಕೆ ಹಾಗೂ ಸಮಾಜಕ್ಕೆ ಎಂದಿಗೂ ದ್ರೋಹ ಮಾಡಬೇಡಿ

– ಡಾ. ಬಿ.ಆರ್.ಅಂಬೇಡ್ಕರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಆಡೋದು ಮಡಿ ಉಂಬೋದು ಮೈಲಿಗೆ.

ನಿಮ್ಮ ಪತ್ರಗಳು

ಹಾಳಾಗಿರುವ ರಾಜಕಾಲುವೆ ಸ್ಲ್ಯಾಬ್ ಸರಿಪಡಿಸಿ

ಮಾನ್ಯರೇ



ಮೈಸೂರಿನ ಡಿ. ಸುಬ್ಬಯ್ಯ ರಸ್ತೆ ಸಮೀಪದ ಕಾಲೇಜು ರಸ್ತೆಯಲ್ಲಿ ಒಳಚರಂಡಿ ಪೈಪ್‌ಲೈನ್ ಅಳವಡಿಕೆ ನಂತರ ಹಾಳಾಗಿದ್ದ ರಸ್ತೆಯ ದುರಸ್ತಿಗಾಗಿ ಕಾರ್ಯನಿರ್ವಹಿಸುತ್ತಿದ್ದ ಜೆಸಿಬಿ ಚಾಲಕರು ಪಕ್ಕದ ರಾಜ ಕಾಲುವೆಯ ಸ್ಲ್ಯಾಬ್ ಮೇಲೆ ಜೆಸಿಬಿ ಹತ್ತಿಸಿದ್ದರಿಂದ ರಾಜ ಕಾಲುವೆಗೆ ಅಳವಡಿಸಿದ್ದ ಸ್ಲ್ಯಾಬ್ ಒಡೆದು ಹೋಗಿದೆ. ಈ ಮಾರ್ಗದಲ್ಲಿ ಸಣ್ಣ ಮಕ್ಕಳು ಹಾಗೂ ದನ-ಕರುಗಳು ಸಂಚರಿಸುತ್ತಿದ್ದು, ರಾತ್ರಿ ವೇಳೆ ಆಕಸ್ಮಿಕವಾಗಿ ಬಿದ್ದರೆ ಜೀವ ಹಾನಿಯಾಗುವುದು ಖಚಿತ.

ರಸ್ತೆ ದುರಸ್ತಿ ಕಾಮಗಾರಿ ಗುತ್ತಿಗೆ ಪಡೆದವರು ಜೆಸಿಬಿಯಿಂದ ರಾಜ ಕಾಲುವೆ ಸ್ಲ್ಯಾಬ್ ಮುರಿದು ಅಪಾಯಕ್ಕೆ ಆಹ್ವಾನ ನೀಡುತ್ತಿರುವ ಕುರಿತು ಸಾರ್ವಜನಿಕರು ಈ ಭಾಗದ ಕಾರ್ಪೊರೇಟರ್ ಗಮನಕ್ಕೆ ತಂದರೂ ಈವರೆಗೂ ಅವರು ಗಮನಹರಿಸಿಲ್ಲ. ಸಂಬಂಧಪಟ್ಟವರು ಕೂಡಲೇ ಹಾಳಾಗಿರುವ ಸ್ಲ್ಯಾಬ್ ತೆರವುಗೊಳಿಸಿ ಹೊಸ ಸ್ಲ್ಯಾಬ್ ಅಳವಡಿಸುವ ಮೂಲಕ ಅನಾಹುತವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕಾಗಿದೆ.

– ಶರತ್, ಮೈಸೂರು

ಹಗರಣಗಳ ಸುಳಿಯಲ್ಲಿ ಬೊಮ್ಮಾಯಿ ಸರ್ಕಾರ

ಮಾನ್ಯರೇ

ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡು ಕೆಲವೇ ತಿಂಗಳು ಕಳೆದಿರುವ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ದಿನಕ್ಕೊಂದು ಎನ್ನುವ ರೀತಿಯಲ್ಲಿ ಹಗರಣಗಳ ಸುಳಿಯಲ್ಲಿ ಸಿಲುಕಿಕೊಳ್ಳುತ್ತಿರುವುದು ಆತಂಕಕಾರಿಯಾದ ವಿಚಾರವಾಗಿದೆ.

ಪಿಎಸ್‌ಐ ನೇಮಕಾತಿ ಹಗರಣ, ಸಹಾಯಕ ಪ್ರಾಧ್ಯಾಪಕರ ನೇಮಕಾತಿ ಹಗರಣ ಸೇರಿದಂತೆ ಹಲವಾರು ಹಗರಣಗಳು ರಾಜ್ಯ ಸರ್ಕಾರವನ್ನು ಹೈರಾಣವಾಗಿಸಿದೆ

ಪಿಎಸ್‌ಐ ನೇಮಕಾತಿ ಹಗರಣದಲ್ಲಿ ಹಲವಾರು ಪೋಲಿಸರು ಹಾಗೂ ಅಧಿಕಾರಿಗಳೇ ಶಾಮೀಲಾಗಿದ್ದು ಅವರ ಪೈಕಿ ಕೆಲವರನ್ನು ಬಂಧಿಸಲಾಗಿದೆ. ಇದು ಬೇಲಿಯೇ ಎದ್ದು ಹೊಲವನ್ನು ಮೇಯ್ದಂತಿದೆ. ಈ ಹಗರಣದಲ್ಲಿ ಪ್ರಭಾವಿ ಸಚಿವರೊಬ್ಬರ ಹೆಸರು ಸಹ ಕೇಳಿ ಬರುತ್ತಿದೆ. ಈ ಹಗರಣದಲ್ಲಿ ಕೆಲವು ಕಾಂಗ್ರೆಸ್ ನಾಯಕರು ಸಹ ಷಾಮೀಲಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಇದರ ತನಿಖೆಯನ್ನು ಸಿಐಡಿಗೆ ವಹಿಸಿರುವ ಸರ್ಕಾರ, ಮುಜುಗರದಿಂದ ಪಾರಾಗಲು ಯತ್ನಿಸುತ್ತಿದ್ದರೂ, ಈ ಹಗರಣದಲ್ಲಿ ದೊಡ್ಡ ದೊಡ್ಡ ತಿಮಿಂಗಿಲಗಳು ಭಾಗಿಯಾಗಿರುವ ಶಂಕೆ ವ್ಯಕ್ತವಾಗಿದೆ. ಸಿಐಡಿ ರಾಜ್ಯ ಸರ್ಕಾರದ ಅಡಿಯಲ್ಲಿ ಕೆಲಸ ಮಾಡಬೇಕಾಗಿರುವುದರಿಂದ, ಈ ತನಿಖೆ ಯನ್ನು ನಿಷ್ಪಕ್ಷಪಾತವಾಗಿ ನಡೆಸಬೇಕೆಂದರೆ, ಇದನ್ನು ಸಿಬಿಐಗೆ ವಹಿಸುವುದು ಸೂಕ್ತ. ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು, ರಾಜ್ಯ ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ ಹೊರಿಸಿ, ಪ್ರಧಾನಮಂತ್ರಿಗಳಿಗೆ ಪತ್ರ ಬರೆದಿದ್ದರು. ರಾಜ್ಯದ ಮಠಾಧೀಶರೊಬ್ಬರು, ಸರ್ಕಾರದ ಅನುದಾನ ಬಿಡುಗಡೆ ಮಾಡಲು 30% ಕಮಿಷನ್ ನೀಡಬೇಕು ಎಂಬ ಆರೋಪ ಮಾಡಿದ್ದರು. ಇತ್ತೀಚೆಗೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಾಂಬ್ ಸಿಡಿಸಿ, 2,500 ಕೋಟಿ ರೂಪಾಯಿಗಳನ್ನು ನೀಡಿದರೆ, ಸಿಎಂ, 100 ಕೋಟಿ ಕೊಟ್ಟರೆ ಮಂತ್ರಿ ಮಾಡುವ ಆಮಿಷವನ್ನು ತಮಗೆ ಒಡ್ಡಿದ್ದರು ಎಂದು ಹೇಳಿದ್ದಾರೆ. ಬಿಜೆಪಿ ಎಂಎಲ್‌ಸಿ ವಿಶ್ವನಾಥ್ ಸಹ ರಾಜ್ಯ ಸರ್ಕಾರದಲ್ಲಿ ನಡೆಯುತ್ತಿರುವ ಲಂಚದ ಹಾವಳಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬಿಜೆಪಿಯಲ್ಲಿರುವ ಅತೃಪ್ತರು ಸಹ ತಮ್ಮದೇ ಪಕ್ಷದ ವಿರುದ್ಧ ಕಿಡಿ ಕಾರುತ್ತಿದ್ದಾರೆ.

ರಾಜ್ಯ ಸರ್ಕಾರ ಈಗ ಹಗರಣಗಳ ಬಲೆಯಲ್ಲಿ ಸಿಲುಕಿಕೊಂಡಿದೆ. ಇದರ ನೇರ ಪರಿಣಾಮವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೊರಬೇಕಾಗಿದೆ. ಪಕ್ಷದ ವರ್ಚಸ್ಸು ಕೂಡ ಹಾಳಾಗುತ್ತಿದೆ. ಹೆಚ್ಚೆಂದರೆ, ಈ ಹಿಂದಿನ ಸರ್ಕಾರಗಳಲ್ಲೂ ಸಹ ಇಂತಹ ಹಗರಣಗಳು ನಡೆದಿದ್ದವು ಎಂಬ ಸಮಜಾಯಿಷಿ ನೀಡಿ ಬೊಮ್ಮಾಯಿ ನುಣುಚಿಕೊಳ್ಳುತ್ತಿದ್ದಾರೆ. ರಾಜ್ಯ ಸರ್ಕಾರ ಈಗಲಾದರೂ ಈ ಎಲ್ಲಾ ಹಗರಣಗಳ ಬಗ್ಗೆ ನಿಷ್ಪಕ್ಷಪಾತವಾದ ನ್ಯಾಯಾಂಗ ತನಿಖೆ ನಡೆಸಿ, ಯಾವುದೇ ಮುಲಾಜಿಲ್ಲದೇ ತಪ್ಪಿತಸ್ಥರನ್ನು ಕಾನೂನಿನ ಕೈಗೆ ಒಪ್ಪಿಸಬೇಕಾಗಿದೆ. ಇದು ಮುಖ್ಯಮಂತ್ರಿಯಾಗಿ ಅವರ ಕಾನೂನಾತ್ಮಕ ಹಾಗೂ ನೈತಿಕ ಜವಾಬ್ದಾರಿ ಕೂಡ.

– ಡಾ. ಕೆ.ವಿ.ವಾಸು, ಮೈಸೂರು

ಅಸಮರ್ಪಕ ಚರಂಡಿ ಕಾಮಗಾರಿಯಿಂದ ತೊಂದರೆ

ಮಾನ್ಯರೆ,



ಮೈಸೂರಿನ ವಿದ್ಯಾರಣ್ಯಪುರಂ 4ನೇ ಮುಖ್ಯ ರಸ್ತೆ 2ನೇ ಅಡ್ಡರಸ್ತೆಯಲ್ಲಿ ಮಳೆ ನೀರು ಹರಿದು ಹೋಗಲು ನಿರ್ಮಿಸುತ್ತಿರುವ ಚರಂಡಿ ಕಾಮಗಾರಿಯು ಅವ್ಯವಸ್ಥಿತವಾಗಿದ್ದು, ಉದ್ದೇಶಿತ ಫಲ ಈಡೇರದು. ಮಳೆ ನೀರು ಹರಿದು ಹೋಗದೆ ನಿಂತು ಅದರ ಮೇಲೆ ಸೊಳ್ಳೆಗಳು ಉತ್ಪತ್ತಿಯಾಗುತ್ತಿದೆ ಹಾಗೂ ದುರ್ವಾಸನೆಯಿಂದ ಕೂಡಿದೆ. ಇದರಿಂದ ರಸ್ತೆಯ ನಿವಾಸಿಗಳಿಗೆ ಬಹಳ ಅನಾನುಕೂಲ ಆಗಿರುತ್ತದೆ. ಇಷ್ಟಾದರೂ ಕಾರ್ಪೊರೇಟರ್ ಆಗಲಿ ಗುತ್ತಿಗೆದಾರರಾಗಲಿ ನಿವಾಸಿಗಳ ಕುಂದು ಕೊರತೆಗಳನ್ನು ಆಲಿಸದೆ ಕಾಮಗಾರಿ ಪೂರ್ಣಗೊಳಿಸಲು ಮುಂದಾಗಿದ್ದಾರೆ. ಆದ್ದರಿಂದ ಈ ಕೂಡಲೇ ಮಳೆ ನೀರು ಹರಿದು ಹೋಗಲು ಅನುವು ಮಾಡಿ ನಂತರ ಚರಂಡಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿನಂತಿ.

–ಚಿತ್ರರಂಜನ್ ಅರಸ್



ಜಿ.ಎಲ್. ತ್ರಿಪುರಾಂತಕ

ಮೊ : 9686677284

ಸುಪ್ರಭ

ಬದುಕು ಮ್ಯಾಜಿಕ್ ಷೋ ಅಲ್ಲ; ರಿಯಾಲಿಟಿ ಷೋ ಆಗ್ಲಿ!



ಸಮಾಜದಲ್ಲಿ ಇಂದು ಜಾತಿ ಜಾಡ್ಯಕ್ಕಿಂತ ವರ್ಗ ಜಾಡ್ಯ ಅತಿಯಾಗಿದೆ. ಅಂದರೆ ಬಡ, ಮಧ್ಯಮ, ಸಿರಿವಂತ ಎಂಬ ವರ್ಗಗಳ ನಡುವೆ ಅಂತರ ಹೆಚ್ಚಾಗುತ್ತಿದೆ. ತಾವು ಬಡ, ಮಧ್ಯಮ ಎಂದು ತಿಳಿದರೆ ಎಲ್ಲಿ ಕ್ಲಾಸ್ ಜನ ನಮಗೆ ಒಂದು ರೀತಿಯ ಬಹಿಷ್ಕಾರ ಹಾಕಿಬಿಡುವರೋ ಅನ್ನುವ ಕಾರಣಕ್ಕೆ ಮಾಸ್ ಆದರೂ ಕ್ಲಾಸ್ ಎಂದು ಬಿಂಬಿಸಿಕೊಳ್ಳಲು ನೈಜತೆಯನ್ನೇ ಮುಚ್ಚಿಟ್ಟು, ಸಿರಿವಂತರಂತೆ ತೋರ್ಪಡಿಸಿಕೊಳ್ಳು ಹಂಬಲ ಈ ಜಮಾನದ ಜಾಯಮಾನ. ಅನೇಕರು ತಮ್ಮ ಹೆತ್ತವರ ಕುರಿತಾಗಿಯೇ ಹೇಳಿಕೊಳ್ಳಲು ಕೀಳರಿಮೆ ಅನುಭವಿಸುತ್ತಾರೆ. ಪ್ರಪಂಚದಲ್ಲಿ ಎಲ್ಲರೂ ಒಂದೇ ಸಮನೆ ಇರಲು ಸಾಧ್ಯವಿಲ್ಲ. ಎಲ್ಲರೂ ಸಿರಿವಂತರಾಗಿಯೇ ಇರಬೇಕಿಲ್ಲ. ಸಿರಿವಂತರಿಗೆ ಹೆಚ್ಚು ಸುಖ-ಸವಲತ್ತು ಇರಬಹುದು, ಆದರೆ ಅವರಿಗೆ ಇಲ್ಲದ ಸ್ವಾತಂತ್ರ್ಯ, ಆರೋಗ್ಯ ಅನೇಕ ಬಡ ಹಾಗೂ ಮಧ್ಯಮವರ್ಗದ ಅನೇಕರಿಗೆ ಇರುತ್ತದೆ. ಅದನ್ನು ಮನಗಂಡು ಬದುಕನ್ನು ರಸಮಯವಾಗಿಸಿಕೊಳ್ಳಬೇಕು. ಎಲ್ಲರೂ ವಿ.ಐ.ಪಿ.ಯಂತಯೇ ಬದುಕು ಅಗತ್ಯವಿಲ್ಲ.

'ನೋಡಿ ಸ್ವಾಮಿ ನಾವಿರೋದೆ ಹೀಗೆ' ಎಂದು ತಾವು ಇರುವಂತೆ ಜಗತ್ತಿಗೆ ತಮ್ಮನ್ನು ತೆರೆದಿಡುವ ಮನೋಭಾವ ಇಂದಿನ ದಿನಮಾನದಲ್ಲಿ ಬಹುಪಾಲು ಮಂದಿಗೆ ಇಲ್ಲ. ವಾಸ್ತವ ಮುಚ್ಚಿಟ್ಟು, ತಮ್ಮ ಲೆವೆಲ್ ಬೇರೆಯೇ ಇದೆ ಎಂದು ಬಿಂಬಿಸುವ ಡ್ರೆಸ್ ಕೋಡ್, ಬೈಕ್-ಕಾರು, ಟಿ.ವಿ.-ಮೊಬೈಲ್...... ಹೀಗೆ ಆರ್ಥಿಕ ಸ್ಥಿತಿಯನ್ನು ನಿರ್ಣಯಿಸುವ ವಸ್ತುಗಳಿಗೆ ಹೆಚ್ಚು ಆದ್ಯತೆ ನೀಡುವ ಮೂಲಕ ತಮ್ಮ ಸ್ಟೇಟಸ್ ಹೆಚ್ಚಿಸಿಕೊಳ್ಳುವ ಹಂಬಲ ಅನೇಕರಿಗಿದೆ. 'ಸಾಲ ಮಾಡಿಯಾದ್ರೂ ತುಪ್ಪ ತಿನ್ನು' ಎನ್ನುವ ಮಾತಿನಂತೆ ಅನೇಕರು ತಮ್ಮ ಸಾಮರ್ಥ್ಯ ಮೀರಿ ಬದುಕಲು ಯತ್ನಿಸುವುದು ಸಾಮಾನ್ಯವಾಗಿಬಿಟ್ಟಿದೆ. ತಮ್ಮ ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ, ದೈಹಿಕ ಸ್ಥಿತಿ ಎಲ್ಲವನ್ನು ಮರೆಮಾಚಿ ತಾವು 'ಏನೋ' ಎಂದು ತೋರಿಸಿಕೊಳ್ಳುವ ಧಾವಂತ. ಸಾಮಾಜಿಕವಾಗಿ ಸಾಮಾನ್ಯ ಸ್ಟೇಟಸ್ ಇದ್ದರೂ ಸಾಮಾಜಿಕ ಜಾಲತಾಣಗಳಲ್ಲಿ ಮೋಜು ಮಸ್ತಿಯ, ಕಾರು-ಬಾರಿನ ಚಿತ್ರಗಳನ್ನು ಹಾಕಿ 'ಸ್ಟೇಟಸ್ ಇದು' ಎಂದು ತೋರಿಸಿಕೊಳ್ಳುವ ಅಭೀಪ್ಸೆ ಹಲವರದು.

'ಹೇಗಿದ್ದ ಹೇಗಾದ ಗೊತ್ತಾ' ಎಂದು ಜನ ಮಾತಿನಾಡಿಕೊಳ್ಳುವ ಮಟ್ಟಿಗೆ ದಿಢೀರನೆ ಬದುಕಿನ ಶೈಲಿಯನ್ನು ಬದಲಿಸಿಕೊಳ್ಳಬೇಕೆಂಬ ಆಕಾಂಕ್ಷೆ ಅನೇಕರದು. 'ಜೀವನ ಒಂದು ನಾಟಕದ ರಂಗಮಂಚ, ಅಲ್ಲಿ ಪುರುಷ, ಮಹಿಳೆಯರೆಲ್ಲರೂ ಕೇವಲ ಪಾತ್ರಧಾರಿಗಳು' ಎಂದು ಖ್ಯಾತ ಆಂಗ್ಲ ನಾಟಕಕಾರ ಷೇಕ್ಸ್‌ಪಿಯರ್ ತಮ್ಮ 'ಆಸ್ ಯು ಲೈಕ್ ಇಟ್' ಎಂಬ ನಾಟಕದಲ್ಲಿ ಹೇಳಿರುವ ಮಾತಿನಂತೆ ಬದುಕೆಂಬ ನಾಟಕದಲ್ಲಿ ಬಣ್ಣದ ಬದುಕನ್ನು ಬಿಂಬಿಸುತ್ತಿರುವುದು ಮಾತ್ರ ವಿಪರ್ಯಾಸ. ಬದುಕನ್ನು ಒಂದು ಷೋ ಎಂದು ಭಾವಿಸಿದರೆ, ಅದು ರಿಯಾಲಿಟಿ ಷೋ ಆಗಬೇಕೆ ವಿನಃ ಮ್ಯಾಜಿಕ್ ಷೋ ಆಗಬಾರದು. ಇಂದಿನ ಟಿ.ವಿ.ಯಲ್ಲಿನ ರಿಯಾಲಿಟಿ ಷೋಗಳಲ್ಲಿ ರಿಯಾಲಿಟಿ ಅಷ್ಟಾಗಿ ಇರುವುದಿಲ್ಲ. ಆ ಥರದ ರಿಯಾಲಿಟಿ ಷೋ ಅಲ್ಲ, ಇರುವುದು ಇರುವಂತೆಯೇ ಇರುವ ಪರಿ. ಮನುಷ್ಯನಿಗೆ ಮಹತ್ವಾಕಾಂಕ್ಷೆ ಇರುವುದು ಸಹಜ. ಆದರೆ ಅದಕ್ಕೆ ತಕ್ಕಹಾಗೆ ಪರಿಶ್ರಮ ಹಾಕಿ ದುಡಿದು ಸಂಪಾದಿಸಿ, ತನ್ನ ಸಂಪಾದನೆಯಲ್ಲಿ ಶೋಕಿ ಮಾಡಿ ತನ್ನ ಸ್ಥಾನಮಾನ ಹೆಚ್ಚಿಸಿಕೊಳ್ಳಲಿ, ಆದರೆ 'ಯಾರದೋ ದುಡ್ಡು, ಯಲ್ಲಮ್ಮನ ಜಾತ್ರೆ' ಎನ್ನುವ ರೀತಿಯಲ್ಲಿ ಕಷ್ಟಪಟ್ಟು ದುಡಿದು ಉಳಿಸಿದ ಅಪ್ಪ-ಅಮ್ಮನ ಹಣ ವ್ಯರ್ಥ ಮಾಡುವ ಮ್ಯಾಜಿಕ್ ಷೋ ಅನ್ನು ಯಾರೂ ಮಾಡಬಾರದು.

ಜೀವನದಲ್ಲಿ ಮೇಲೇರಲು ಅನೇಕ ಮಾರ್ಗಗಳಿರುತ್ತವೆ. ಕೆಲವರು ಅದೃಷ್ಟದ ಬಲದಿಂದ ಮೇಲೆ ಬಂದಿರಬಹುದು, ಹಿಂದಿನ ತಲೆಮಾರಿನವರು ಆಸ್ತಿ ಮಾಡಿಟ್ಟಿರಬಹುದು, ಅವರುಗಳು ಐಷಾರಾಮದ ಬದುಕನ್ನು ನಡೆಸುತ್ತಿದ್ದಾರೆ, ನಾನೇಕೆ ನಡೆಸಬಾರದು? ಎಂದು ಪ್ರಶ್ನಿಸಿಕೊಂಡು ಇಲ್ಲಸಲ್ಲದ ಸಂಗತಿಗಳಿಗೆ ಹಣ ವ್ಯಯ ಮಾಡಿ 'ಹರ್ಷದ ಕೂಳಿಗೆ ವರ್ಷದ ಕೂಳು ಕಳೆದುಕೊಂಡರು' ಎನ್ನುವ ಹಾಗೆ ಹೊರಗೆ ಶೋಕಿ ಮಾಡಿ, ಮನೆ ಒಳಗೆ ಎರಡು ಹೊತ್ತು ಅನ್ನಕ್ಕೆ ಕಷ್ಟ ಪಡುವಂತೆ ಆಗಬಾರದು. ಬದುಕಿನಲ್ಲಿ ಮೇಲೇರುವ ಮುನ್ನ ಹಲವು ಬಾರಿ ಯೋಚಿಸಬೇಕು. ಯಾವುದೇ ವಸ್ತು, ವಾಹನ ಕೊಳ್ಳಬೇಕಾದರೆ ಹತ್ತು ಬಾರಿ ಯೋಚಿಸಿ, ಒಂದು ಬಾರಿ ನಿರ್ಧರಿಸಿ ಖರೀದಿಸಬೇಕು. ಆದರೆ ಇಂದಿನ ಯುವ ಸಮೂಹದ ಮನೋಭಾವ ಹೇಗಿದೆ ಎಂದರೆ ಒಂದು ಬಾರಿ ನಿರ್ಧರಿಸಿ, ಅವಸರದಲ್ಲಿ ಖರೀದಿಸಿ, ನಂತರ ಹತ್ತು ಬಾರಿ ಯೋಚಿಸುವಂತ ಪರಿಸ್ಥಿತಿ ಉಂಟಾಗಿದೆ. ನನ್ನ ಬದುಕಿಗೆ ಅವಶ್ಯಕ ವಸ್ತುಗಳು ಯಾವುವು? ಎನ್ನುವ ಪಟ್ಟಿ ಮಾಡದೆ, ಸಂಬಂಧಿಕರೊಬ್ಬರು ಕಾರನ್ನು ಕೊಂಡರು, ಸ್ನೇಹಿತನೊಬ್ಬ ಬೈಕ್ ಕೊಂಡುಕೊಂಡ, ನಾನು ಅವರಿಗಿಂತ ಏನು ಕಡಿಮೆ?, ನಾನು ಅವರ ಸಮಕ್ಕೆ ಇದ್ದೇನೆ ಎಂದು ತೋರಿಸಿಕೊಳ್ಳಲು ಅವಶ್ಯವಿಲ್ಲದಿದ್ದರೂ ಅವುಗಳನ್ನು ಕೊಂಡು ನಂತರ ಅವುಗಳಿಗೆ ಮಾಡಿದ ಸಾಲ ತೀರಿಸಲಾಗದೆ, ನಿರ್ವಹಣೆ ಮಾಡಲಾಗದೆ ಪಶ್ಚಾತ್ತಾಪ ಪಟ್ಟು ಮೈ ಪರಚಿಕೊಳ್ಳುವ ಮಂದಿಗೆ ಲೆಕ್ಕವಿಲ್ಲ. ತೋರಿಕೆ ಬದುಕಿನಿಂದ ತುರಿಕೆ ತಪ್ಪಿದ್ದಲ್ಲ.

ಧಾರ್ಮಿಕ ಸಂಸ್ಥೆಯೊಂದರಲ್ಲಿ ಸಂಗೀತ ಕಾರ್ಯಕ್ರಮ ನಡೆಯುತ್ತಿತ್ತು ಅಲ್ಲಿಗೆ ಒಬ್ಬರು ಸನ್ಯಾಸಿ ಬರುತ್ತಾರೆ. ಅವರು ತಮ್ಮ ಪ್ರವಚನಗಳಿಂದ ಖ್ಯಾತಿ ಗಳಿಸಿದವರಾಗಿರುತ್ತಾರೆ. ಅವರು ಕಾರ್ಯಕ್ರಮ ವೀಕ್ಷಿಸಲು ಬಂದಾಗ ಆ ಸಭಾಂಗಣದ ನೆಲದಲ್ಲಿ ಕೂರಲು ಜಮಖಾನಗಳನ್ನು ಹಾಕಿರುತ್ತಾರೆ, ಹಾಗೆಯೆ ಮುಖ್ಯವಾದವರಿಗೆ ಕೆಲವು ಕುರ್ಚಿಗಳನ್ನು ಹಾಕಿರುತ್ತಾರೆ. ಆಯೋಜಕರು ಕುರ್ಚಿ ಮೇಲೆ ಕೂರುವಂತೆ ಎಷ್ಟೇ ಹೇಳಿದರೂ ಆ ಸನ್ಯಾಸಿ ಬಂದು ನೇರವಾಗಿ ಜಮಖಾನದ ಮೇಲೆ ಕೂರುತ್ತಾರೆ. ನಂತರ ಅವರು ತಮಾಷೆ ಮಾಡುವಂತೆ ಹೇಳುತ್ತಾರೆ 'ಮೇಲೆ ಕುಳಿತರೆ ಬೀಳುವ ಭಯ ಇರುತ್ತದೆ, ಆದರೆ ನೆಲದ ಮೇಲೆ ಕುಳಿತರೆ ಆ ಭಯವೇ ಇರುವುದಿಲ್ಲ' ಎಂದು. ಈ ಮಾತುಗಳ ತಮಾಷೆಯ ಮಾತುಗಳೇ ಆದರೂ ಈ ಮಾತಿನಲ್ಲಿ ಬಹಳ ಅರ್ಥವಿದೆ. ಮನುಷ್ಯ ಮೇಲೇರುವ ಮುನ್ನ ಹಲವು ಬಾರಿ ಯೋಚಿಸಬೇಕು. ಅಚಾನಕ್ಕಾಗಿ ಮೇಲೇರಿದರೆ ಒಂದಲ್ಲಾ ಒಂದು ದಿನ ಕೆಳಗೆ ಬಿದ್ದುಬಿಟ್ಟರೆ ಎಂಬ ಭಯ ಕಾಡುತ್ತಿರುತ್ತದೆ. ಆದ್ದರಿಂದ ಮೇಲೇರುವ ಮುನ್ನ ಸಕಲವನ್ನು ಸುಭದ್ರ ಸ್ಥಿತಿಯಲ್ಲಿ ಇಟ್ಟುಕೊಂಡು ಮೇಲೆ ಏರಬೇಕು.

ಬದುಕು ಎಂದರೆ ಸಮಾಜದಲ್ಲಿ ಎಲ್ಲರೊಟ್ಟಿಗೆ ಬೆರೆತು ಬದುಕುವ ವಿಧಾನವಾಗಬೇಕು. ಸ್ಪರ್ಧೆಗೆ ಬಿದ್ದವರಂತೆ ಗಳಿಸಿ, ಅನ್ಯರ ಕಣ್ಣು ಕುಕ್ಕುವಂತೆ ಬದುಕುವುದು ನಿಜ ಬದುಕಲ್ಲ. ಬೇರೆಯವರ ಮೆಚ್ಚಿಸಲು ಬದುಕುವುದು ಅಪಾಯದ ಸಂಗತಿ. ಏಕೆಂದರೆ ಬೇರೆಯವರು ಯಾವಗೆ ಮೆಚ್ಚುವುದನ್ನು ನಿಲ್ಲಿಸುತ್ತಾರೋ ಗೊತ್ತಿರುವುದಿಲ್ಲ. ಆದ್ದರಿಂದ ನಮ್ಮ ಬದುಕು ನಮಗೆ ಮೆಚ್ಚುಗೆಯಾಗಬೇಕು. ಬೇರೆಯವರ ಪಾದರಕ್ಷೆ, ಬೇರೆಯವರ ಷರ್ಟು, ಪ್ಯಾಂಟು ಅಳತೆಯಲ್ಲಿ ನಮಗೆ ಸರಿಹೊಂದುವುದಿಲ್ಲ. ಅಂತಹುದರಲ್ಲಿ ಬೇರೆಯವರ ಬದುಕು ನಮಗೆ ಹೊಂದಿಕೆ ಆಗಲು ಸಾಧ್ಯವೇ? 'ಈ ಬದುಕು ನಮ್ಮದು' ಎಂದು ಬದುಕಬೇಕು. ಅನುಕರಣೆಯ ಬದುಕಿನಲ್ಲಿ ಸ್ವಂತಿಕೆ ಇರುವುದಿಲ್ಲ. ಗಂಜಿ ಕುಡಿದು ಬದುಕಿದರೂ ಆ ಗಂಜಿ ನಮ್ಮದಾಗಿರಬೇಕು. ಮೃಷ್ಟಾನ್ನ ಸಿಗುತ್ತದೆ ಎಂದ ಮಾತ್ರಕ್ಕೆ ನಮ್ಮದಲ್ಲದ ಅನ್ನಕ್ಕೆ ಬಯಸಬಾರದು.

ಸಮಾಜದಲ್ಲಿ ಇಂದು ಜಾತಿ ಜಾಡ್ಯಕ್ಕಿಂತ ವರ್ಗ ಜಾಡ್ಯ ಅತಿಯಾಗಿದೆ. ಅಂದರೆ ಬಡ, ಮಧ್ಯಮ, ಸಿರಿವಂತ ಎಂಬ ವರ್ಗಗಳ ನಡುವೆ ಅಂತರ ಹೆಚ್ಚಾಗುತ್ತಿದೆ. ತಾವು ಬಡ, ಮಧ್ಯಮ ಎಂದು ತಿಳಿದರೆ ಎಲ್ಲಿ ಕ್ಲಾಸ್ ಜನ ನಮಗೆ ಒಂದು ರೀತಿಯ ಬಹಿಷ್ಕಾರ ಹಾಕಿಬಿಡುವರೋ ಅನ್ನುವ ಕಾರಣಕ್ಕೆ ಮಾಸ್ ಆದರೂ ಕ್ಲಾಸ್ ಎಂದು ಬಿಂಬಿಸಿಕೊಳ್ಳಲು ನೈಜತೆಯನ್ನೇ ಮುಚ್ಚಿಟ್ಟು, ಸಿರಿವಂತರಂತೆ ತೋರ್ಪಡಿಸಿಕೊಳ್ಳು ಹಂಬಲ ಈ ಜಮಾನದ ಜಾಯಮಾನ. ಅನೇಕರು ತಮ್ಮ ಹೆತ್ತವರ ಕುರಿತಾಗಿಯೇ ಹೇಳಿಕೊಳ್ಳಲು ಕೀಳರಿಮೆ ಅನುಭವಿಸುತ್ತಾರೆ. ಪ್ರಪಂಚದಲ್ಲಿ ಎಲ್ಲರೂ ಒಂದೇ ಸಮನೆ ಇರಲು ಸಾಧ್ಯವಿಲ್ಲ. ಎಲ್ಲರೂ ಸಿರಿವಂತರಾಗಿಯೇ ಇರಬೇಕಿಲ್ಲ. ಸಿರಿವಂತರಿಗೆ ಹೆಚ್ಚು ಸುಖ-ಸವಲತ್ತು ಇರಬಹುದು, ಆದರೆ ಅವರಿಗೆ ಇಲ್ಲದ ಸ್ವಾತಂತ್ರ್ಯ, ಆರೋಗ್ಯ ಅನೇಕ ಬಡ ಹಾಗೂ ಮಧ್ಯಮವರ್ಗದ ಅನೇಕರಿಗೆ ಇರುತ್ತದೆ. ಅದನ್ನು ಮನಗಂಡು ಬದುಕನ್ನು ರಸಮಯವಾಗಿಸಿಕೊಳ್ಳಬೇಕು. ಎಲ್ಲರೂ ವಿ.ಐ.ಪಿ.ಯಂತಯೇ ಬದುಕು ಅಗತ್ಯವಿಲ್ಲ.

ಐಷಾರಾಮ ಎಂಬ ಗೀಳು ಮನುಷ್ಯನನ್ನು ಅನೇಕ ಬಗೆಯಲ್ಲಿ ಪೇಚಿಗೆ ಸಿಲುಕಿಸುತ್ತದೆ. ಬದುಕು ಮೂರು ಗಂಟೆಯ ಸಿನೆಮಾ ನಾಟಕವಲ್ಲ, ಮೇಕಪ್ ಹಚ್ಚಿ, ಬಣ್ಣಬಣ್ಣದ ಬಟ್ಟೆ ಧರಿಸಿ ಅಭಿನಯಿಸಿ ಪ್ರೇಕ್ಷಕರ ಚಪ್ಪಾಳೆ ಗಿಟ್ಟಿಸಲು. ನೈಜ ಬದುಕಿನಲ್ಲಿ ಪ್ರೇಕ್ಷಕರು ವಿಭಿನ್ನವಾಗಿರುತ್ತಾರೆ. ಬಡತನವನ್ನು ಆಡಿಕೊಳ್ಳುವ ಮಂದಿ ಸಿರಿತನ ಬಂದಾಕ್ಷಣ ಸುಮ್ಮನೆ ಕೂರುವುದಿಲ್ಲ. ಅದನ್ನು ಆಡಿಕೊಳ್ಳದೇ ಬಿಡುವುದಿಲ್ಲ. ಆದ್ದರಿಂದ ಪಬ್ಲಿಕ್ ಡಿಮ್ಯಾಂಡ್‌ಗೆ ಅನುಸಾರವಾಗಿ ನಮ್ಮ ಬದುಕನ್ನು ನಡೆಸುವುದು ಒಳಿತಲ್ಲ.

ಬ್ರಾಂಡೆಡ್ ವಸ್ತುಗಳನ್ನು ಬಳಸಿದ ಮಾತ್ರಕ್ಕೆ ಬದುಕಿನ ಬ್ರಾಂಡ್ ಬದಲಾಗುವುದಿಲ್ಲ. ಯಾರಿಗೋಸ್ಕರವೋ ಬದುಕುವ ಬದಲು ನಮಗೋಸ್ಕರ ಬದುಕಿದರೆ ನೆಮ್ಮದಿ ಮನೆ ಮಾಡುತ್ತದೆ. ವಾಸ್ತವಕ್ಕೆ ಹತ್ತಿರವಾಗಿ ಬದುಕುವುದರಿಂದ ಯಾವಾಗಲೂ ನಟಿಸುವ ಅಗತ್ಯ ಬೀಳುವುದಿಲ್ಲ. ನಮ್ಮ ವರ್ಗ ಕಂಡು ದೊಡ್ಡ ಜನ ದೂರ ಹೋದರೆ ಹೋಗಲಿ, ನಮ್ಮ ಜೊತೆ ಬದುಕಿನ ಸುಂದರ ಕ್ಷಣಗಳನ್ನು ಹಂಚಿಕೊಳ್ಳುವವರು ಉಳಿದರೆ ಉಳಿಯಲಿ. ಯಾರೇ ನಮ್ಮೊಟ್ಟಿಗಿದ್ದರೂ ಸಾಯುವಾಗ ನಾವು ಒಬ್ಬರೇ ಸಾಯಬೇಕು. ಯೋಗ್ಯತೆ ಇರುವವರು ನಮ್ಮ ಬದುಕಿನ ದಿನಗಳನ್ನು ಹಂಚಿಕೊಂಡರೆ ಖುಷಿ ಪಡೋಣ, ಮಿಸ್ ಮಾಡಿಕೊಂಡರೆ ಅವರಿಗೆ ನಷ್ಟ ಎಂದು ಭಾವಿಸೋಣ. ದೊಡ್ಡ ಜನರ ಜೊತೆ ನನ್ನ ಒಡನಾಟ ಎಂದು ಬಿಂಬಿಸಿಕೊಳ್ಳುವ ಅಗತ್ಯವಿಲ್ಲ. ಎಷ್ಟೋ ದೊಡ್ಡ ಜನರು ನಮ್ಮ ಅಗತ್ಯ ಇರುವವರೆವಿಗೆ ನಮ್ಮನ್ನು ಬಳಸಿಕೊಂಡು ದೂರ ಮಾಡುವುದು ಉಂಟು. ಹಾಗಾಗಿ ಮೊದಲೇ ಅವರಿಂದ ಒಂದು ಆರೋಗ್ಯಕರ ಅಂತರ ಕಾಪಾಡಿಕೊಂಡರೆ ಗೊಂದಲ, ಗೋಜಲು, ಆತಂಕ, ಅನಿಶ್ಚಿತತೆ ಯಾವುದೂ ಇರುವುದಿಲ್ಲ. ಬದುಕು ನಿರಾಳವಾಗಿರುತ್ತದೆ.

ಬದುಕನ್ನು ಸಂಯಮದಿಂದ ಸಮಾಧಾನದಿಂದ ಕಳೆಯಲು ಎಷ್ಟು ಬೇಕು? ಯಾರು ಬೇಕು? ಎಂಬುದನ್ನು ನಾವು ಆಯ್ಕೆ ಮಾಡಿಕೊಳ್ಳುವುದು ಒಳಿತು. ನಮಗೆ ದಕ್ಕದವರಿಗೆ ಆಸೆ ಪಡುತ್ತಾ, ಅವರನ್ನು ಇಂಪ್ರೆಸ್ ಮಾಡಲು ಸದಾ ಯತ್ನಿಸುತ್ತಾ ನಮ್ಮ ಬದುಕಿನ ಹಣ, ಸಮಯವನ್ನು ವ್ಯರ್ಥ ಮಾಡಿಕೊಳ್ಳುವ ಅಗತ್ಯವಿಲ್ಲ. ಅವರಿಗಾಗಿ ನಾವು ಮ್ಯಾಜಿಕ್ ಮಾಡುವ ಅನಿವಾರ್ಯತೆಯೂ ಇಲ್ಲ. ತಮ್ಮ ಆರ್ಥಿಕ, ಸಾಮಾಜಿಕ ಸ್ಥಿತಿಗತಿಗೆ ತಕ್ಕ ಹಾಗೆ ಬದುಕುವುದು ಕ್ಷೇಮ. ನಮ್ಮ ವಾಸ್ತವ ಸ್ಥಿತಿ ಅರಿತು ನಮ್ಮೊಟ್ಟಿಗಿರುವವರೇ ನಿಜವಾದ ಬಂಧುಗಳು ಎಂದು ಅರಿಯೋಣ. ಮುಖವಾಡ ಧರಿಸಿ ಬದುಕುವ ಬದಲು ಬದುಕನ್ನು ರಿಯಲ್ ಆಗಿ ಅನುಭವಿಸಿ, ರಿಯಾಲಿಟಿ ಷೋ ಮಾಡೋಣ, ಇಷ್ಟಪಟ್ಟವರು ಇರಲಿ, ಕಷ್ಟ ಆದವರು ಹೋಗಲಿ ಎಂದು ಕೊಂಡರೆ ನಮ್ಮ ಬದುಕು ಅನನ್ಯ, ಅದ್ಭುತ, ಅಮೋಘ, ಅಪೂರ್ವ ಎನಿಸುತ್ತದೆ. ಏನಂತೀರಿ?

ಬೆಳ್ಳಿ ಕಿರಣ : ಬದುಕು ಮಾಯಾಬಜಾರ್ ಅಲ್ಲ, ಜನತಾ ಬಜಾರ್ ಎಂದು ತಿಳಿದಿರಲಿ.



ನಂಜನಗೂಡು ತಾಲೂಕಿನ ಹೆಡತಲೆ ಗ್ರಾಪಂನಲ್ಲಿ ಭಗೀರಥ ಜಯಂತಿ ಆಚರಿಸಲಾಯಿತು. ಇದೇ ವೇಳೆ ಭಗೀರಥರ ಭಾವಚಿತ್ರಕ್ಕೆ ಗ್ರಾಪಂ ಅಧ್ಯಕ್ಷೆ ಗೀತಾ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಸದಸ್ಯರಾದ ಕುಸುಮಾ, ಜೆ.ಮಹದೇವನಾಯಕ, ರಾಜು, ನಾಗಶೆಟ್ಟಿ, ಕೆಂಪಶೆಟ್ಟಿ, ಕಾರ್ಯದರ್ಶಿ ರಂಗಸ್ವಾಮಿ, ಲೆಕ್ಕಪರಿಶೋಧಕ ಮಹೇಶ್, ಉಪ್ಪಾರ ಜನಾಂಗದ ಯುವ ಮುಖಂಡ ರವಿ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.



ಮೂಗೂರು ಗ್ರಾಪಂನಲ್ಲಿ ಭಗೀರಥ ಜಯಂತಿ ಆಚರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಪಿಡಿಓ ಪೂರ್ಣಿಮಾ, ಲೆಕ್ಕ ಸಹಾಯಕ ಜವರೇಗೌಡ, ಚೇತನ್, ಸದಸ್ಯರಾದ ಮಹದೇವಮ್ಮ, ಜಿ.ಪಿ.ಪುಟ್ಟಮಾದಯ್ಯ, ಸಿಬ್ಬಂದಿ ಪುಟ್ಟಮಾದಯ್ಯ, ಶಶಿ ಕುಮಾರ್, ಗುರುಸ್ವಾಮಿ, ಶ್ರೀನಿವಾಸ, ಅರುಣ್, ಪುಟ್ಟಸ್ವಾಮಿ ಇತರರಿದ್ದರು.

ಎಸ್‌ಆರ್‌ಹೆಚ್ ವಿರುದ್ಧದ ಗ್ರೀನ್ ಪಂದ್ಯದಲ್ಲಿ ಆರ್‌ಸಿಬಿ ವಿನ್



ಮುಂಬೈ, ಮೇ 5– ಪರಿಸರ ಕಾಳಜಿಯೊಂದಿಗೆ ಹಸಿರು ಉಡುಗೆ ತೊಟ್ಟು ಅಂಗಣಕ್ಕೆ ಇಳಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ 67 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಕ್ರೀಡಾಂಗಣದಲ್ಲಿ ಭಾನುವಾರ ಸಂಜೆ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ನಾಯಕ ಡುಪ್ಲೆಸಿಸ್ ಹಾಗೂ ದಿನೇಶ್ ಕಾರ್ತಿಕ್ ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ವಿರಾಟ್ ಕೊಹ್ಲಿ ಮೊದಲ ಎಸೆತದಲ್ಲೇ ಜಗದೀಶ್ ಸುಚಿತ್‌ಗೆ ವಿಕೆಟ್ ಒಪ್ಪಿಸಿ ಅಭಿಮಾನಿಗಳಿಗೆ ನಿರಾಸೆ ಮೂಡಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ನಾಯಕ ಫಫ್ ಡುಪ್ಲೆಸಿಸ್ ಮತ್ತು ರಜತ್ ಪಾಟೀದಾರ್ ಶತಕದ (105) ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಆದರೆ 38 ಎಸೆತಗಳಲ್ಲಿ 48 ರನ್ ಗಳಿಸಿದ್ದ ರಜತ್ ಕೂಡ ಸುಚಿತ್‌ಗೆ ವಿಕೆಟ್ ಒಪ್ಪಿಸಿದರು. ಆದರೆ ಮತ್ತೊಂದೆಡೆ ಅಬ್ಬರಿಸಿದ ಡುಪ್ಲೆಸಿಸ್ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಅವರಿಗೆ ಉತ್ತಮ ಬೆಂಬಲ ನೀಡಿದ ಗ್ಲೆನ್ ಮ್ಯಾಕ್ಸ್‌ವೆಲ್ 2 ಸಿಕ್ಸರ್, 3 ಬೌಂಡರಿ ಒಳಗೊಂಡ 33 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ದಿನೇಶ್ ಕಾರ್ತಿಕ್ ಕೇವಲ 8 ಎಸೆತಗಳಲ್ಲಿ 4 ಸಿಕ್ಸರ್, 1 ಬೌಂಡರಿ ಒಳಗೊಂಡ ಬಿರುಸಿನ 30 ರನ್ ಗಳಿಸಿ ಅಜೇಯರಾಗಿ ಉಳಿದರೇ, ಡುಪ್ಲೆಸಿಸ್ 2 ಸಿಕ್ಸರ್, 8 ಬೌಂಡರಿ ಒಳಗೊಂಡ 73 ರನ್ ಗಳಿಸಿ ಅಜೇಯರಾಗಿ ಉಳಿದರು. ಎಸ್‌ಆರ್‌ಹೆಚ್ ಪರ ಜಗದೀಶ್ ಸುಚಿತ್ 2, ಕಾರ್ತಿಕ್ ತ್ಯಾಗಿ 1 ವಿಕೆಟ್ ಕಬಳಿಸಿದರು.

193 ರನ್‌ಗಳ ಗುರಿ ಬೆನ್ನತ್ತಿದ ಹೈದರಾಬಾದ್ ವಾನಿಂದು ಹಸರಂಗ ಅವರ ಸ್ಪಿನ್ ಮೋಡಿಗೆ ತತ್ತರಿಸಿ 19.2 ಓವರ್‌ಗಳಲ್ಲಿ 125 ರನ್‌ಗೆ ಆಲೌಟಾಯಿತು. ಇನ್ನಿಂಗ್ಸ್ ಆರಂಭದಲ್ಲೇ ಆರಂಭಿಕರಾದ ನಾಯಕ ಕೇನ್ ವಿಲಿಯಮ್ಸನ್ ಹಾಗೂ ಅಭಿಷೇಕ್ ಶರ್ಮಾ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ ಒಂದಾದ ರಾಹುಲ್ ತ್ರಿಪಾಠಿ ಹಾಗೂ ಐಡನ್ ಮಾರ್ಕ್ರಮ್ ಅರ್ಧಶತಕದ ಜೊತೆಯಾಟವಾಡಿದರು. ಈ ವೇಳೆ 21 ರನ್ ಗಳಿಸಿದ್ದ ಮಾರ್ಕ್ರಮ್ ವಿಕೆಟ್ ಒಪ್ಪಿಸಿದರು. ಮತ್ತೊಂದು ಬದಿಯಲ್ಲಿ ಏಕಾಂಗಿ ಹೋರಾಟ ನಡೆಸಿದ ರಾಹುಲ್ ತ್ರಿಪಾಠಿ 2 ಸಿಕ್ಸರ್, 6 ಬೌಂಡರಿ ಒಳಗೊಂಡ 58 ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ನಿಕೋಲಸ್ ಪೂರನ್ 19 ರನ್ ಗಳಿಸಿದರು. ಆರ್‌ಸಿಬಿ ಪರ ಇದೇ ಮೊದಲ ಬಾರಿಗೆ ವಾನಿಂದು ಹಸರಂಗ 5 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು. ಜೋಶ್ ಹ್ಯಾಸೆಲ್‌ವುಡ್ 2, ಗ್ಲೆನ್ ಮ್ಯಾಕ್ಸ್‌ವೆಲ್, ಹರ್ಷಲ್ ಪಟೇಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು. ವಾನಿಂದು ಹಸರಂಗ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಸಿಎಸ್‌ಕೆಗೆ ಭರ್ಜರಿ ಜಯ

ಮುಂಬೈ, ಮೇ 8– ಡೆವೊನ್ ಕಾನ್ವೆ ಅವರ ಅರ್ಧಶತಕದ ನೆರವಿನಿಂದ ಚೆನ್ನೈ ಸೂಪರ್ ಕಿಂಗ್ಸ್ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 91 ರನ್‌ಗಳ ಗೆಲುವು ದಾಖಲಿಸಿದೆ.



ಇಲ್ಲಿನ ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಡೆವೊನ್ ಕಾನ್ವೆ ಹಾಗೂ ಋತುರಾಜ್ ಗಾಯಕ್‌ವಾಡ್ ಶತಕದ ಜೊತೆಯಾಟದ ನೆರವಿನಿಂದ 6 ವಿಕೆಟ್ ನಷ್ಟಕ್ಕೆ 208 ರನ್ ಗಳಿಸಿತು. ತಂಡದ ಪರ ಡೆವೊನ್ ಕಾನ್ವೆ 5 ಸಿಕ್ಸರ್, 7 ಬೌಂಡರಿ ಒಳಗೊಂಡ 87, ಋತುರಾಜ್ ಗಾಯಕ್‌ವಾಡ್ 41, ಶಿವಂ ದುಬೆ 32, ಧೋನಿ 21 ರನ್ ಗಳಿಸಿದರು. ಡೆಲ್ಲಿ ಪರ ಅನ್ರಿಚ್ ನಾರ್ಟ್ಜೆ 3, ಖಲೀಲ್ ಅಹಮ್ಮದ್ 2, ಮಿಚೆಲ್ ಮಾರ್ಷ್ 1 ವಿಕೆಟ್ ಪಡೆದರು.

ಬಳಿಕ ಸಿಎಸ್‌ಕೆ ನೀಡಿದ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ 17.4 ಓವರ್‌ಗಳಲ್ಲಿ 117 ರನ್‌ಗಳಿಗೆ ತನ್ನೆಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತು. ತಂಡದ ಪರ ಮಿಚೆಲ್ ಮಾರ್ಷ್ 25, ನಾಯಕ ರಿಷಭ್ ಪಂತ್ 21, ಡೇವಿಡ್ ವಾರ್ನರ್ 19 ಹಾಗೂ ಶಾರ್ದೂಲ್ ಠಾಕೂರ್ 24 ರನ್ ಗಳಿಸಿದರು. ಇನ್ನುಳಿದಂತೆ ಶ್ರೀಕರ್ ಭರತ್ 8, ರೋವ್ಮನ್ ಪೊವೆಲ್ 3, ರಿಪಾಲ್ ಪಟೇಲ್ 6, ಅಕ್ಷರ್ ಪಟೇಲ್ 1, ಕುಲ್‌ದೀಪ್ ಯಾದವ್ 5 ರನ್ ಹಾಗೂ ಖಲೀಲ್ ಅಹ್ಮದ್ ಶೂನ್ಯಕ್ಕೆ ಔಟಾಗುವ ಮೂಲಕ ವೈಫಲ್ಯ ಅನುಭವಿಸಿದರು. ಸಿಎಸ್‌ಕೆ ಪರ ಮೋಡಿ ಮಾಡಿದ ಮೊಯಿನ್ ಅಲಿ 3, ಮುಖೇಶ್ ಚೌಧರಿ, ಡ್ವೇನ್ ಬ್ರಾವೊ ಹಾಗೂ ಸಿಮರ್‌ಜೀತ್ ಸಿಂಗ್ ತಲಾ ಎರಡು, ಮಹೀಶ್ ತೀಕ್ಷ್ಣ 1 ವಿಕೆಟ್ ಗಳಿಸಿದರು. ಡೆವೊನ್ ಕಾನ್ವೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

'ಭಾಮೆ' ಕಾದಂಬರಿ, 'ಸಣ್ಣ ಕಥೆಗಳು' ಕಥಾಸಂಕಲನ ಬಿಡುಗಡೆ



ಮೈಸೂರು, ಮೇ 8– ಪಿ.ಎಂ.ಮನೋಜ್ ಅವರ 'ಭಾಮೆ' ಕಾದಂಬರಿ ಹಾಗೂ 'ಸಣ್ಣ ಕಥೆಗಳು' ಕಥಾಸಂಕಲನ ನಗರದ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇತ್ತೀಚೆಗೆ ಬಿಡುಗಡೆಗೊಂಡಿತು.

ಹಿರಿಯ ಸಾಹಿತಿ ಕಣಿವೆಯ ಭಾರದ್ವಾಜ್ ಕೆ. ಆನಂದತೀರ್ಥ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿ, ಪುಸ್ತಕದ ಮೌಲ್ಯವನ್ನು ತೀರ್ಮಾನಿಸುವವರು ನಾವಲ್ಲ. ಲೇಖಕರು ಬರೆದಿದ್ದಾರೆ. ಆ ಪುಸ್ತಕ ಜನರ ಕೈಯ್ಯಲ್ಲಿದೆ. ಅವರೇ ಅದರ ಬಗ್ಗೆ ತೀರ್ಮಾನ ಮಾಡುತ್ತಾರೆ. ಯಾರೋ ನಾಲ್ಕು ಜನ ವಿಮರ್ಶಕರು ಅವರ ಮೂಗಿನ ನೇರಕ್ಕೋ ಅಥವಾ ಅವರ ತಿಳುವಳಿಕೆಯ ವ್ಯಾಪ್ತಿಯಲ್ಲೋ ಅದನ್ನ ವಿಮರ್ಶೆ ಮಾಡುತ್ತಾರೆ. ಆ ವಿಮರ್ಶೆಯೇ ದೊಡ್ಡ ಮಾನದಂಡ ಅಂತ ಅಂದುಕೊಳ್ಳಬೇಡಿ ಎಂದರು.

ನೀವು ಬರೀತಾ ಹೋಗಿ. ಬರೀಬೇಕು ಅನ್ನಿಸಿದ್ದನ್ನೆಲ್ಲಾ ಬರೀತಾ ಹೋಗಿ. ಮತ್ತೆ ಸಂಖ್ಯೆಗಳ ಬಗ್ಗೆ ಹೆಚ್ಚು ಗಮನ ಕೊಡೋಕೆ ಹೋಗಬೇಡಿ. ನಾನು ಹದಿನೆಂಟು ಪುಸ್ತಕ ಬರೀಬೇಕು, ಇಪ್ಪತ್ತು ಪುಸ್ತಕ ಬರೀಬೇಕು, ಐವತ್ತು ಪುಸ್ತಕ ಬರಿಬೇಕು ಅನ್ನುವ ಚಿಂತೆ ಬೇಡ. ಕೆಲವರು ಬೆರಳೆಣಿಕೆಯಷ್ಟು ಪುಸ್ತಕ ಮಾತ್ರ ಬರೆದಿರುತ್ತಾರೆ. ಅದರಲ್ಲೇ ಅವರನ್ನು ಇಡೀ ಪ್ರಪಂಚ ಗುರುತಿಸುತ್ತೆ. ಇನ್ನು ಕೆಲವರು ಐನೂರು ಆರುನೂರು ಪುಸ್ತಕ ಬರೆದಿದ್ದೀನಿ ಅನ್ನುತ್ತಾರೆ. ಯಾವ ಪುಸ್ತಕ ಅಂತ ಹೇಳಿ ಎಂದರೆ ಬರೆದವರಿಗೂ ಗೊತ್ತಿರಲ್ಲ, ಜನಕ್ಕೂ ಗೊತ್ತಿರಲ್ಲ. ನೀವು ಎಷ್ಟು ಬರೀತೀರಿ ಅನ್ನೋದು ಮುಖ್ಯ ಅಲ್ಲ. ಏನು ಬರೆದಿದ್ದೀರಿ ಅನ್ನೋದು ಮುಖ್ಯ ಆಗುತ್ತದೆ ಎಂದು ಲೇಖಕರಿಗೆ ಸಲಹೆ ನೀಡಿದರು. ಸಾಹಿತ್ಯಾಸಕ್ತರಾದ ಹೆಚ್.ಎಸ್.ತೇಜಸ್ ಅವರು ಕೃತಿಗಳು ಹಾಗೂ ಲೇಖಕರ ಪರಿಚಯವನ್ನು ಮಾಡಿದರು.

ಸಾಹಿತಿಗಳು ಹಾಗೂ ಪತ್ರಕರ್ತರಾದ ಪೂರಿಗಾಲಿ ಮರಡೇಶಮೂರ್ತಿ ಹಾಗೂ ಮನೋಜ್ ಅವರ ತಾಯಿ ಪಿ.ಸಿ.ಸರೋಜ ಕೂಡ ಮಾತನಾಡಿದರು. ಕೊಡಗಿನ ಕವಿಯತ್ರಿ ಕೃಪಾ ದೇವರಾಜ್, ಸಾಹಿತಿ ಜನ್ನತ್ ನೌಷದ್, ಪತ್ರಕರ್ತರಾದ ರಂಜಿತ್ ಕವಲಪಾರ, ಭರತ್, ರಾಮಚಂದ್ರರಾವ್ ಅವರುಗಳು ಲೇಖಕರು ಮತ್ತು ಅವರ ಬರವಣಿಗೆ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ವಂಶಿಕಾ ಹಾಗೂ ಯಶ್ವಿತ ಪ್ರಾರ್ಥಿಸಿದರು. ಕಾರ್ಯಕ್ರಮವನ್ನು ಕೀರ್ತನಾರಾಜು ನಿರೂಪಿಸಿದರು.

ರಾಜಕೀಯಕ್ಕೆ ಎಸ್.ಎಂ.ಕೃಷ್ಣ ಶೀಘ್ರ ವಿದಾಯ

ಶೀಘ್ರವೇ ನಿವೃತ್ತಿ ಘೋಷಣೆ ಎಂದ ಗುರುಚರಣ್

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಮೇ 8– ಮಂಡ್ಯ ಜಿಲ್ಲೆಯ ಹಿರಿಯ ಮುತ್ಸದ್ಧಿ ರಾಜಕಾರಣಿ, ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ದಶಕಗಳ ಕಾಲ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ತಮ್ಮ ಆರು ದಶಕಗಳ ಸುದೀರ್ಘ ರಾಜಕೀಯ ಜೀವನಕ್ಕೆ ಶೀಘ್ರದಲ್ಲೇ ನಿವೃತ್ತಿ ಘೋಷಿಸಲಿದ್ದಾರೆ.

ಈ ಬಗ್ಗೆ ಮೇ 1ರಂದು ತಮ್ಮ ಹುಟ್ಟುಹಬ್ಬದ ದಿನದಂದು ಸುಳಿವು ನೀಡಿದ್ದ ಕೃಷ್ಣ, ನಿನ್ನೆಯಷ್ಟೇ ಕೃಷ್ಣ ಅವರ ಅಣ್ಣನ ಮಗ, ಜಿಪಂ ಮಾಜಿ ಅಧ್ಯಕ್ಷ ಗುರುಚರಣ್ ಎಸ್.ಎಂ.ಕೃಷ್ಣ ಅವರು ತಮ್ಮ ಸುದೀರ್ಘ ರಾಜಕೀಯಕ್ಕೆ ಶೀಘ್ರವೇ ನಿವೃತ್ತಿ ತೆಗೆದುಕೊಳ್ಳಲಿದ್ದಾರೆ ಎಂದು ಸುದ್ದಿಗಾರರಿಗೆ ತಿಳಿಸಿದರು.

1962ರಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದಿಂದ ಮದ್ದೂರು ವಿಧಾನಸಭಾ ಕ್ಷೇತ್ರದಿಂದ ಅಂದಿನ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಹೆಚ್.ಕೆ.ವೀರಣ್ಣಗೌಡ ವಿರುದ್ಧ ಪ್ರಚಂಡ ಗೆಲುವು ದಾಖಲಿಸಿದ್ದ ಕೃಷ್ಣ, ಬಳಿಕ ಕಾಂಗ್ರೆಸ್ ಸೇರಿ ಹಂತ ಹಂತವಾಗಿ ಬೆಳೆಯುತ್ತಾ ಬಂದರು. ಕಳೆದ 2017ರಲ್ಲಿ ತಮ್ಮ ದಶಕಗಳ ಕಾಲದ ಕಾಂಗ್ರೆಸ್ ಪಕ್ಷದ ನಂಟನ್ನು ಕಡಿದುಕೊಂಡು ಬಿಜೆಪಿ ಸೇರಿದ್ದರು. ಆದರೆ ಬಿಜೆಪಿ ಸೇರಿದ ಐದೇ ವರ್ಷದಲ್ಲಿ ತಮ್ಮ ರಾಜಕೀಯ ನಿವೃತ್ತಿ ಪಡೆಯಲು ನಿರ್ಧರಿಸಿದ್ದಾರೆ.

ತಮ್ಮ ಸುದೀರ್ಘ 6 ದಶಕಗಳ ರಾಜಕೀಯಕ್ಕೆ ನಿವೃತ್ತಿ ಘೋಷಿಸಲು ಮುಂದಾಗಿರುವ ಕೃಷ್ಣ ಕಳೆದ ಐದು ವರ್ಷಗಳ ಹಿಂದೆ ಕಾಂಗ್ರೆಸ್ ತಮ್ಮನ್ನು ಸರಿಯಾಗಿ ನಡೆಸಿಕೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿ, ಬಿಜೆಪಿ ಸೇರಿದ್ದರು. ಬಿಜೆಪಿಯಲ್ಲಿ 2018ರ ಚುನಾವಣೆಯಲ್ಲಿ ಹಾಗೂ 2019ರ ಲೋಕಸಭಾ ಚುನಾವಣೆಯಲ್ಲಿ ಕೆಲ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ್ದ ಕೃಷ್ಣ ಅವರನ್ನು ಬಿಜೆಪಿ ಸರಿಯಾಗಿ ನಡೆಸಿಕೊಂಡಿಲ್ಲ ಎಂಬ ಆರೋಪ ಇದೆ.

ಬಿಜೆಪಿಯಲ್ಲಿ ಕೃಷ್ಣ ಅವರನ್ನು ಕಡೆಗಣಿಸಲಾಗಿದೆ. ಬಿಜೆಪಿ ಸೇರಿ 5 ವರ್ಷವಾದರೂ ಸರಿಯಾದ ಸ್ಥಾನಮಾನ ನೀಡಿಲ್ಲ. ಪಕ್ಷದ ನಾಯಕರ ಕಡೆಗಣನೆಯಿಂದ ಪಕ್ಷ ತೊರೆಯಲು ನಿರ್ಧರಿಸಿದ್ದಾರೆ ಮದ್ದೂರು ಸೇರಿದಂತೆ ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಅವರ



ಕೊಡುಗೆ ಸಾಕಷ್ಟಿದೆ. ಇಂದಿಗೂ ಜಿಲ್ಲೆಯ ಬಗ್ಗೆ ತುಂಬು ಅಭಿಮಾನ ಹೊಂದಿರುವ ಅವರನ್ನು ಅಗೌರವದಿಂದ ನಡೆಸಿಕೊಳ್ಳಲಾಗಿದ್ದು, ಬಿಜೆಪಿ ನಾಯಕರು ರಾಜ್ಯಕ್ಕೆ ಭೇಟಿ ನೀಡುವ ಅಥವಾ ಪಕ್ಷದ ಇತರೆ ಜಾಹೀರಾತು, ಫ್ಲೆಕ್ಸ್‌ಗಳಲ್ಲಿ ಕೃಷ್ಣ ಅವರ ಫೋಟೋಗಳನ್ನು ಕಡೆಗಣಿಸಲಾಗಿದ್ದು, ರಾಷ್ಟ್ರ ನಾಯಕನಿಗೆ ಬಿಜೆಪಿ ಅಪಮಾನಿಸಿದೆ ಎಂದು ಗುರುಚರಣ್ ಆರೋಪಿಸಿದ್ದಾರೆ.

ಈ ಎಲ್ಲಾ ಕಾರಣಗಳಿಂದ ಎಸ್.ಎಂ.ಕೃಷ್ಣ ನಿವೃತ್ತಿಯ ಚಿಂತನೆ ನಡೆಸಿದ್ದು, ಶೀಘ್ರವೇ ಈ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಲಿದ್ದಾರೆ ಎಂದು ಹೇಳಿದ್ದಾರೆ. ಜತೆಗೆ ಕೃಷ್ಣ ಅವರಿಗೆ ಈಗಾಗಲೇ 90 ವರ್ಷ ವಯಸ್ಸಾಗಿದ್ದು, ವಯಸ್ಸಿನ ಕಾರಣವೂ ಅವರ ನಿವೃತ್ತಿಗೆ ಮತ್ತೊಂದು ಅಂಶವಾಗಿದೆ.

ಇತ್ತೀಚೆಗೆ ತಮ್ಮ ಹುಟ್ಟುಹಬ್ಬದ ದಿನದಂದು ಸುದ್ದಿಗಾರರೊಂದಿಗೆ ಮಾತನಾಡುವಾಗ ಪ್ರಸ್ತುತ ರಾಜಕೀಯದ ಬಗ್ಗೆ ಪ್ರಶ್ನಿಸಿದಾಗ ನನಗೆ 90 ವರ್ಷ ವಯಸ್ಸಾಗಿದೆ. ನನಗೆ ವಿಶ್ರಾಂತಿ ಬೇಕೆನ್ನುವ ಮೂಲಕ ಪರೋಕ್ಷವಾಗಿ ಸಕ್ರೀಯ ರಾಜಕೀಯದಿಂದ ನಿವೃತ್ತಿಯ ಮಾತನಾಡಿದ್ದರು ಎಸ್.ಎಂ. ಕೃಷ್ಣ.

ಉತ್ತಮ ಆಡಳಿತಗಾರ ಕೃಷ್ಣ ಎಸ್.ಎಂ. ಕೃಷ್ಣ ರಾಜ್ಯದ ಸಿಎಂ ಆಗಿದ್ದಾಗ ಬರ, ಡಾ. ರಾಜ್ ಅಪಹರಣ, ವೀರಪ್ಪನ್ ಅಟ್ಟಹಾಸ, ಕಾವೇರಿ ಗಲಾಟೆ ಸೇರಿದಂತೆ ಅನೇಕ ಸಮಸ್ಯೆಗಳನ್ನು ದಿಟ್ಟವಾಗಿ ಎದುರಿಸಿದ್ದರು. ಬೆಂಗಳೂರನ್ನು ಐಟಿಸಿಟಿ ಮಾಡಿದ್ದು, ಮಂಡ್ಯದಲ್ಲಿ ಬೆಂಗಳೂರು– ಮೈಸೂರು ರಸ್ತೆ ಅಗಲೀಕರಣ, ಮನ್‌ಮೋಹನ್ ಸಿಂಗ್ ಸಂಪುಟದಲ್ಲಿ ವಿದೇಶಾಂಗ ಮಂತ್ರಿಯಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶಕ್ಕೆ ಹೆಸರು ತಂದ ಖ್ಯಾತಿ ಕೃಷ್ಣ ಅವರಿಗೆ ಸಲ್ಲುತ್ತದೆ.

ಒಟ್ಟಾರೆ ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಉತ್ತಮ ಆಡಳಿತದಿಂದ ಜನಮಾನಸ ಗೆದ್ದು, ರಾಜ್ಯದ ಅಭಿವೃದ್ಧಿಗೆ ಅನೇಕ ಕೊಡುಗೆಗಳನ್ನು ಕೊಟ್ಟ ಕೃಷ್ಣ ಅವರನ್ನು ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯದ ಜನ ಇಂದಿಗೂ ಸ್ಮರಿಸುತ್ತಾರೆ.

ಬಸವಣ್ಣನವರ ಆದರ್ಶ ಪಾಲಿಸಲು ಸಲಹೆ

ಶ್ರೀರಂಗಪಟ್ಟಣ, ಮೇ 8(ವಿನಯ್ ಕಾರೇಕುರ)– ನಾವೆಲ್ಲರೂ ಬಸವಣ್ಣನವರ ಆದರ್ಶವಾದ ತತ್ವಗಳನ್ನು ಪಾಲಿಸೋಣ ಎಂದು ಚಂದ್ರವನ ಆಶ್ರಮದ ಪೀಠಾಧ್ಯಕ್ಷ ಶ್ರೀ ತ್ರಿನೇತ್ರಮಹಂತ ಸ್ವಾಮೀಜಿ ಹೇಳಿದರು.

ಪಟ್ಟಣದ ಜಗಜ್ಯೋತಿ ಬಸವೇಶ್ವರ ದೇವಾಲಯದ ಬಳಿ ಅಖಿಲ ಭಾರತ ವೀರಶೈವ ಸಮಾಜ, ಜಗಜ್ಯೋತಿ ಬಸವೇಶ್ವರ ಸಂಘದ ಆಶ್ರಯದಲ್ಲಿ ಆಯೋಜಿಸಿದ್ದ ಜಗದ್ಗುರು ಬಸವೇಶ್ವರರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಇವತ್ತಿನ ಪೀಳಿಗೆಯವರಿಗೆ ಬಸವೇಶ್ವರರ ವಚನದ ಮೂಲಕ ವಿಶ್ವಕ್ಕೆ ಸಾರಿದ ಆದರ್ಶದ ತತ್ವಗಳು ಅಗತ್ಯವಾಗಿದೆ. ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಬೇಕು. ಎಲ್ಲರೊಂದಿಗೆ ಸಹಬಾಳ್ವೆ ನಡೆಸಿ ಜೀವನದ ಕೊನೆಯ ಕ್ಷಣಗಳನ್ನು ಕಳೆಯಲು ವಚನ ಸಾಹಿತ್ಯಗಳು ಬಳಕೆಯಾಗಿವೆ. ಯುವಕರಿಂದ ಹಿಡಿದು ಮುಪ್ಪಿನವರೆಗೂ ಬದುಕು ಕಾಣುವ ಬಸವಣ್ಣನ ಸಾಹಿತ್ಯ ಆದರ್ಶದ ಒಂದು ಮಾದರಿಯಾಗಿದೆ ಎಂದರು.

ಶಾಸಕ ರವೀಂದ್ರ ಶ್ರೀಕಂಠಯ್ಯ ಬಸವೇಶ್ವರರ ರಥದ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು. ಬಸವಣ್ಣ ಅವರು 12ನೇ ಶತಮಾನದಲ್ಲಿ ವಿಶ್ವ ಕಂಡ ಶ್ರೇಷ್ಠ ಗುರು ಅವರಾಗಿದ್ದರು. ವಿಶ್ವದಲ್ಲಿ ಮೊದಲ ಸಾರ್ವಜನಿಕ ಶಿಕ್ಷಣವನ್ನು ಜಾರಿಗೆ ತಂದು ಅನುಭವ ಮಂಟಪ



ದಲ್ಲಿ ಕಾರ್ಯಗತ ಗೊಳಿಸಿ, ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಿದ ಶಿಕ್ಷಣ ಕ್ರಾಂತಿಯ ಹರಿಕಾರ ಮಾರ್ಗದರ್ಶನದಿಂದಲೇ ಶಿಕ್ಷಣಕ್ಕೆ ಒತ್ತು ನೀಡಲಾಗುತ್ತಿದೆ ಎಂದರು. ಪಟ್ಟಣದ ಮುಖ್ಯ ಬೀದಿಯಲ್ಲಿ ನಂದಿಧ್ವಜ, ವೀರಗಾಸೆ ಕುಣಿತ, ಮಂಗಳ ವಾದ್ಯಗಳಿಂದ ಬಸವೇಶ್ವರ ರಥದ ಮೆರವಣಿಗೆ ನಡೆಯಿತು.

ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಉಪಾಧ್ಯಕ್ಷ ಕೆಆರ್ ನಾಗರ ದಿನೇಶ್, ಚಂದ್ರು ಸೌಮ್ಯ ಜಗಜ್ಯೋತಿ ಬಸವೇಶ್ವರ ಸಂಘದ ಅಧ್ಯಕ್ಷ ಜಗದೀಶ್, ನಗರ ಕಾರ್ಯದರ್ಶಿ ಪ್ರದೀಪ್ ಕುಮಾರ್, ಪಟ್ಟಣ ಪುರಸಭೆ ಉಪಾಧ್ಯಕ್ಷ ಕೃಷ್ಣಪ್ಪ, ಸದಸ್ಯರಾದ ಶಿವು, ಶ್ರೀನಿವಾಸ್ ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಿದರು.

ನಿಧನ

ಬೋರಮ್ಮ



ಕೆ.ಆರ್.ಪೇಟೆ,ಮೇ 8– ತಾಲೂಕಿನ ಬೂಕನಕೆರೆ ಹೋಬಳಿ, ಗಂಜಿಗೆರೆಕೊಪ್ಪಲು ಗ್ರಾಮದ ಹಿರಿಯ ಮುಖಂಡ ದೊಡ್ಡೇಗೌಡಉರುಫ್ ಸ್ವಾಮಿಗೌಡ ಅವರ ಧರ್ಮಪತ್ನಿ ಬೋರಮ್ಮ (70) ಇಂದು ಮಧ್ಯಾಹ್ನ ನಿಧನರಾದರು.

ಮೃತರು ಮೂವರು ಪುತ್ರರು, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಮೇ 9ರಂದು ಬೆಳಿಗ್ಗೆ 10 ಗಂಟೆಗೆ ಗಂಜಿಗೆರೆಕೊಪ್ಪಲಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೌಬಿನಿ ಸಿ.ಶಿವಶಂಕರ್



ಶ್ರೀರಂಗಪಟ್ಟಣ, ಮೇ 8(ವಿನಯ್ ಕಾರೇಕುರ)– ಪಟ್ಟಣದ ಫುಟ್ಬಾಲ್ ಪಟು ಹಾಗೂ ನಿವೃತ್ತ ಕೃಷಿ ಇಲಾಖೆ ಡಿಸಿಇ ಅಧಿಕಾರಿ ಚೌಬಿನಿ ಸಿ. ಶಿವಶಂಕರ್(82) ಅವರು ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರಿಯರು, ಅಳಿಯಂದಿರು ಹಾಗು ಮೊಮ್ಮಕ್ಕಳನ್ನು ಅಗಲಿದ್ದಾರೆ. ಭಾನುವಾರ ಪಟ್ಟಣದ ಶಂಭುರಾಯನ ಕಟ್ಟೆಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಸಾಯಿಖಾನೆ ಮೇಲೆ ಪೊಲೀಸರ ದಾಳಿ



ಪಾಂಡವಪುರ, ಮೇ 8– ಪಟ್ಟಣದಲ್ಲಿ ಅಕ್ರಮವಾಗಿ ಗೋಮಾಂಸ ಕತ್ತರಿಸುತ್ತಿದ್ದ ಕಸಾಯಿಖಾನೆಯ ಮೇಲೆ ಪೊಲೀಸರು ದಾಳಿ ನಡೆಸಿ ಇಬ್ಬರನ್ನು ಬಂಧಿಸಿದ್ದಾರೆ.

ಪಟ್ಟಣದ ಬಸವನಗುಡಿ ಬೀದಿ ನಿವಾಸಿಗಳಾದ ಸೈಮನ್ ಹಾಗೂ ಟಿಪ್ಪು ಬಂಧಿತರು.

ಪಟ್ಟಣದ ಕೋಲಪ್ಪನ ಬೀದಿಯ ಶೆಡ್‌ವೊಂದರಲ್ಲಿ ಗೋಮಾಂಸ ಮಾರಾಟ ಮಾಡುತ್ತಿದ್ದರು. ಇದರ ಖಚಿತ ಮಾಹಿತಿ ಪಡೆದ ಪಾಂಡವಪುರ ಪೊಲೀಸರು ಅಂಗಡಿಯಿಂದ ಸಾರ್ವಜನಿಕರು ಮಾಂಸವನ್ನು ತೆಗೆದುಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು, ತಕ್ಷಣವೇ ಸರ್ಕಲ್ ಇನ್ಸ್‌ಪೆಕ್ಟರ್ ಕೆ.ಪ್ರಭಾಕರ್, ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ನೇತೃತ್ವದಲ್ಲಿ ದಾಳಿ ನಡೆಸಿದ್ದಾರೆ. ದಾಳಿ ನಡೆಸಿದ ಸಂದರ್ಭದಲ್ಲಿ ಸೈಮನ್ ಮತ್ತು ಟಿಪ್ಪು ಎಂಬುವರು ವ್ಯಕ್ತಿಗಳು ಗೋಮಾಂಸವನ್ನು ಕತ್ತರಿಸಿ ಮಾರಾಟ ಮಾಡುತ್ತಿದ್ದ ದೃಶ್ಯ ಕಂಡುಬಂದಿದೆ. ಪೊಲೀಸರು ಗೋಮಾಂಸ ಮಾರಾಟ ಮಾಡುತ್ತಿರುವುದಕ್ಕೆ ಲೆಸೆನ್ಸ್ ಕೇಳಿದ್ದಾರೆ. ಆ ವೇಳೆ ಯಾವುದೇ ಲೆಸೆನ್ಸ್ ಇಲ್ಲದ ಹಿನ್ನೆಲೆಯಲ್ಲಿ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಸ್ಥಳದಲ್ಲಿದ್ದ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದು, ಘಟನೆ ಸಂಬಂಧ ಪಾಂಡವಪುರ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಜೆಪಿಗೆ ಮುಸ್ಲಿಮರು ಮತ ಹಾಕಲ್ಲ



ಮಂಡ್ಯ,ಮೇ 8(ಮೋಹನ್‌ರಾಜ್)– ಮುಸ್ಲೀಮರು ಬಿಜೆಪಿಗೆ ಮತ ಹಾಕಲ್ಲ. ಹೀಗಿರುವಾಗ ಮುಸ್ಲಿಮರ ಓಲೈಕೆಯನ್ನು ಏಕೆ ಮಾಡಬೇಕೆಂದು ಬಿಜೆಪಿ ಸರ್ಕಾರದ ವಿರುದ್ಧ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಕಿಡಿಕಾರಿದರು. ನಗರದ ಕರ್ನಾಟಕ ಸಂಘದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಮುಸ್ಲಿಮರಿಗೆ ಹೆದರುತ್ತಿದ್ದು, ಮಸೀದಿಯಲ್ಲಿ ಮೈಕ್ ಬಂದ್ ಮಾಡಲು ಸರ್ಕಾರಕ್ಕೆ ಆಗದಿದ್ದರೆ ನಾವು ಬಂದ್ ಮಾಡಲು ತಯಾರಿದ್ದೇವೆ ಎಂದರು.

ರಾಜ್ಯದ ದೇಗುಲಗಳಲ್ಲಿ ಈಗಾಗಲೇ ಸುಪ್ರಭಾತ ಪಠಣಕ್ಕೆ ಅರ್ಚಕರು ಹಾಗೂ ಟ್ರಸ್ಟ್‌ನ ಮುಖ್ಯಸ್ಥರು ಒಪ್ಪಿದ್ದಾರೆ. ಬೆಲಗಿನ ಜಾವ ಭಕ್ತಿ ಗೀತೆ, ಹನುಮಾನ್ ಚಾಲೀಸ್ ಪಠಣ ಮಾಡಲು ಒಪ್ಪಿದ್ದಾರೆ. ಎಲ್ಲೆಡೆ ಸಂತೋಷವೂ ಇದೆ. ಸರ್ಕಾರ ಅಭಿಯಾನ ಹತ್ತಿಕ್ಕುವ ಕೆಲಸ ಮಾಡುತ್ತಿದೆ ಎಂದು ದೂರಿದರು. ಸರ್ಕಾರದ ಈ ದಾದಗಿರಿ ನಡೆಯಲ್ಲ. ನಮ್ಮ ಓಟಿನಿಂದಲೇ ನೀವು ಗೆದ್ದಿರುವುದು. ಪೊಲೀಸರಿಂದ ದೇವಾಲಯಗಳನ್ನು ಹೆದರಿಸುವ ಕೆಲಸ ಸರಿಯಲ್ಲ. ಈಗಾಗಲೇ ಯುಪಿಯಲ್ಲಿ ಯೋಗಿ ಸರ್ಕಾರ 60 ಸಾವಿರ ಮೈಕ್ ತೆರವುಗೊಳಿಸಿದೆ. ನಮ್ಮ ರಾಜ್ಯದಲ್ಲಿ ಏಕೆ ಆಗುತ್ತಿಲ್ಲ. ಸಿಎಂ ಬೊಮ್ಮಾಯಿ ಹಾಗೂ ಗೃಹ ಸಚಿವ ಅರಗ ಜ್ಞಾನೇಂದ್ರ ಗಡ್ಸ್ ತೋರುತ್ತಿಲ್ಲ. ಸುಪ್ರೀಂ ಆದೇಶ ಎಲ್ಲರಿಗೂ ಒಂದೇ ಸರ್ಕಾರ ಆದೇಶ ಪಾಲಿಸದಿದ್ದರೆ ಹೋರಾಡುವುದಾಗಿ ಎಚ್ಚರಿಸಿದರು.

ಯುವಕ ನಾಪತ್ತೆ



ಶ್ರೀರಂಗಪಟ್ಟಣ, ಮೇ 8(ವಿನಯ್ ಕಾರೇಕುರ)– ಹುಲಿಕೆರೆ ಗ್ರಾಮದ ಪ್ರಜ್ವಲ್.ವಿ(23) ಎಂಬಾತ ಮಾ.30 ರಂದು ಮೈಸೂರು ತಾಲೂಕಿನ ಚಿಕ್ಕನಹಳ್ಳಿ ಗ್ರಾಮಕ್ಕೆ ತನ್ನ ಸ್ನೇಹಿತನ ಜೊತೆ ಹೋದವನು ಬಂದಿಲ್ಲವೆಂದು ಈತನ ತಂದೆ ವೈರಮುಡಿ ಕೆ.ಆರ್.ಸಾಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. 5 ಅಡಿ ಎತ್ತರ, ಕೆಂಪು ಬಣ್ಣ ವಿದ್ದು, ಈತನ ಬಗ್ಗೆ ಮಾಹಿತಿ ಸಿಕ್ಕರೆ ತಕ್ಷಣ ಕೆ.ಆರ್.ಸಾಗರ ಪೊಲೀಸ್ ಠಾಣೆ ಮೊ.ನಂ. 9480804856 ಅಥವಾ 08236–200600 ಸಂಪರ್ಕಿಸಲು ಕೋರಲಾಗಿದೆ.

ಗಾಳಿ, ಮಳೆಗೆ ಕುಸಿದ ಮನೆ, ಅಪಾರ ಬೆಳೆ ನಾಶ, ರಾಸುಗಳಿಗೆ ಗಾಯ



ನಾಗಮಂಗಲ, ಮೇ 8– ಶನಿವಾರ ತಾಲೂಕಿನಲ್ಲಿ ಸುರಿದ ಧಾರಾಕಾರ ಮಳೆಗೆ ಅನೇಕ ಮನೆಗಳು ಕುಸಿದು ಅಪಾರ ಪ್ರಮಾಣದ ತರಕಾರಿ ಬೆಳೆಗಳು ನಾಶವಾಗಿರುವುದರ ಜೊತೆಗೆ ನಾಲ್ಕು ರಾಸುಗಳಿಗೆ ಗಾಯಗಳಾಗಿರುವ ಬಗ್ಗೆ ವರದಿಯಾಗಿದೆ.

ಶನಿವಾರ ಸಂಜೆ ಎಂಟು ಗಂಟೆಗೆ ಪ್ರಾರಂಭವಾದ ಮಳೆ ಗಾಳಿ ತಾಲೂಕಿನಾದ್ಯಂತ ಸಾಕಷ್ಟು ಹಾನಿ ಮಾಡಿದ್ದು, ಹೊಣಕೆರೆ ಹೋಬಳಿಯ ಕರಿಕ್ಯಾತನಹಳ್ಳಿ ಮತ್ತು ಮಂಚಪಟ್ಟಣ ಗ್ರಾಮದಲ್ಲಿ ಹೆಚ್ಚು ಅನಾಹುತವನ್ನುಂಟು ಮಾಡಿದೆ. ಮಂಚಪಟ್ಟಣ ಗ್ರಾಮದ ಶೋಭಾ ವೆಂಕಟೇಶ್, ವಿಜಯ ಶಿವಣ್ಣ ಅವರ ಮನೆ ಸಂಪೂರ್ಣ ಕುಸಿದಿದ್ದು, ಅಪಾರ ಪ್ರಮಾಣದ ನಷ್ಟವುಂಟಾಗಿದೆ. ರಾತ್ರಿ 8 ಘಂಟೆಯ ಸಮಯದಲ್ಲಿ ಶಿವರಾಮು ಎಂಬವರ ಕೊಟ್ಟಿಗೆ ಕುಸಿದು ದನಗಳ ಮೇಲೆ ಬಿದ್ದ ಪರಿಣಾಮ ತೀವ್ರ ಗಾಯಗಳಾಗಿದೆ. ಬಿರುಗಾಳಿಗೆ ಮನೆಗೆ ಹೊದಿಸಿದ್ದ ಮೇಲ್ಛಾವಣಿ ಹಾರಿ ಹೋಗಿದೆ. ಶೋಭಾ ವೆಂಕಟೇಶ್ ಮಕ್ಕಳೊಂದಿಗೆ ಮಲಗಿದ್ದಂತಾ ಸಮಯದಲ್ಲಿ ಮೇಲ್ಛಾವಣಿ ಕುಸಿದು ಅವರ ಮೇಲೆ ಬಿದ್ದ ಪರಿಣಾಮ ಇಬ್ಬರಿಗೆ ಗಾಯಗಳಾಗಿದೆ.

ಅದೇ ಗ್ರಾಮದ ಯೋಗೇಶ್ ಮತ್ತು ಪುಟ್ಟಸ್ವಾಮಿ ಎಂಬವರು ಸುಮಾರು ಒಂದು ಎಕರೆ ಜಮೀನಿನಲ್ಲಿ ಬಂದಿದ್ದ ಕ್ಯಾಪ್ಸಿಕಮ್(ದಪ್ಪ ಮೆಣಸಿನಕಾಯಿ) ಸಸಿಗಳು ನೆಲಕಚ್ಚಿ ಎರಡು ಲಕ್ಷ ರೂ.ಗಳಿಗೂ ಹೆಚ್ಚು ನಷ್ಟವುಂಟಾಗಿದೆಯೆಂದು ಅಂದಾಜಿಸಲಾಗಿದೆ.

ಸಿ.ಕುಮಾರ್‌ಗೆ ಡಾ.ರಾಜ್‌ಕುಮಾರ್ ಸದ್ಭಾವನಾ ಪ್ರಶಸ್ತಿ



ನಾಗಮಂಗಲ, ಮೇ 8– ಕರ್ನಾಟಕ ಪ್ರದೇಶ ಹಿಂದುಳಿದ ವರ್ಗಗಳ ಒಕ್ಕೂಟ ಕೊಡಮಾಡುವ ಡಾ. ರಾಜ್ ಕುಮಾರ್ ಸದ್ಭಾವನಾ ಪ್ರಶಸ್ತಿಗೆ ತಾಲೂಕಿನ ರೋಟರಿ ಸಂಸ್ಥೆ ಮಾಜಿ ಅಧ್ಯಕ್ಷ ಮತ್ತು ತಾಪಂ ಮಾಜಿ ಅಧ್ಯಕ್ಷ ಸಿ.ಕುಮಾರ್ ಭಾಜನರಾಗಿದ್ದಾರೆ.

ಬೆಂಗಳೂರಿನ ರವೀಂದ್ರ ಕಲಾ ಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿ.ಕುಮಾರ್ ರವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ರೋಟರಿ ಸಂಸ್ಥೆ, ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಮತ್ತು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿರುವ ಹಿನ್ನೆಲೆಯಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

ಕೆರೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ಕೆ.ಆರ್.ಪೇಟೆ,ಮೇ 8– ಮನುಷ್ಯ ಸೇರಿದಂತೆ ಭೂಮಿ ಮೇಲಿನ ಸಕಲ ಜೀವರಾಶಿಗಳ ಸಂರಕ್ಷಣೆಗೆ ನೀರು ಅತ್ಯಗತ್ಯವಾಗಿದೆ. ಹಾಗಾಗಿ ಕೆರೆ–ಕಟ್ಟೆಗಳನ್ನು ಉಳಿಸುವ ಮೂಲಕ ಜೀವ ಸಂಕುಲ ಉಳಿಸಬೇಕಾದ ಅನಿವಾರ್ಯತೆ ಇದೆ. ನೀರನ್ನು ಸಂರಕ್ಷಣೆ ಮಾಡದೇ ಇದ್ದರೆ ನೀರಿಗಾಗಿ ಮೂರನೇ ವಿಶ್ವ ಮಹಾಯುದ್ಧ ನಡೆಯುವ ಅಪಾಯ ಇದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಮೈಸೂರು ಪ್ರಾದೇಶಿಕ ನಿರ್ದೇಶಕ ಗಂಗಾಧರ್ ರೈ ಅವರು ಹೇಳಿದರು.

ಕೆ.ಆರ್.ಪೇಟೆ ತಾಲೂಕಿನ ಬೂಕನಕೆರೆ ಹೋಬಳಿಯ ಮುದುಗೆರೆ ಗ್ರಾಮದಲ್ಲಿ 367ನೇ ನಮ್ಮೂರು–ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ಹೂಳೆತ್ತಿ ಕೆರೆ ಅಭಿವೃದ್ಧಿಪಡಿಸುವ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಗ್ರಾಮಸ್ಥರು ತಮ್ಮ ಊರಿನ ಕೆರೆಯ ಅಭಿವೃದ್ಧಿಗೆ ಕೈಜೋಡಿಸಬೇಕು. ಕೆರೆ ಒತ್ತುವರಿ ಆಗದಂತೆ ನೋಡಿಕೊಳ್ಳಬೇಕು. ಕೆರೆಯ ಸಂರಕ್ಷಣೆಗೆ ಗ್ರಾಮಸ್ಥರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಈ ನಿಟ್ಟಿನಲ್ಲಿ ನಮ್ಮ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ಕೆರೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಶ್ರೀ ಧರ್ಮಸ್ಥಳ ಧರ್ಮಾಧಿಕಾರಿಗಳ ಆಶಯದ ಮೇರೆಗೆ ನಿಮ್ಮ ಮುದುಗೆರೆ ಗ್ರಾಮದ ಕೆರೆಯನ್ನು ಕೆರೆ ಅಭಿವೃದ್ಧಿಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಗ್ರಾಮಸ್ಥರು ಸಹಕಾರ ನೀಡಿದರೆ ಸಂಪೂರ್ಣ ಹೂಳೆತ್ತಿಸಿ ಕೆರೆಗೆ ನೀರನ್ನು ತುಂಬಿಸಿ ಗ್ರಾಮಸ್ಥರಿಗೆ ಹಸ್ತಾಂತರ ಮಾಡಲಾಗುವುದು. ಕೆರೆ ಅಭಿವೃದ್ಧಿ ಸಮಿತಿಯ ಸಹಕಾರದಿಂದ ಹಾಗೂ ರೈತರು, ಯುವಕರ ಸಂಪೂರ್ಣ ಪಾಲ್ಗೊಳ್ಳುವಿಕೆಯಿಂದ ಯಶಸ್ವಿಯಾಗಿ ಹೂಳು ತೆಗೆಯುವ ಕೆಲಸವನ್ನು ಮಾಡಬೇಕಾಗಿದೆ. ಇದಕ್ಕೆ ಎಲ್ಲರೂ ಸೇವಾ ಭಾವನೆಯಿಂದ ಸಹಕಾರ ನೀಡಬೇಕು ಎಂದು ಗಂಗಾಧರ ರೈ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಗಂಜಿಗೆರೆ ಗ್ರಾಪಂ ಅಧ್ಯಕ್ಷೆ ಅಶ್ವಿನಿ ಕೃಷ್ಣೇಗೌಡ, ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ತಾಲೂಕು ಯೋಜನಾಧಿಕಾರಿ ಮಮತಾ ಶೆಟ್ಟಿ, ಜಿಲ್ಲಾ ನಿರ್ದೇಶಕ ಮಹಾಬಲ ಕುಲಾಲ್, ಹೇಮಾವತಿ ನೀರಾವರಿ ಯೋಜನೆ ಇಂಜಿನಿಯರ್ ಸಣ್ಣಸರಸಪ್ಪ, ಬಸವೇಗೌಡ, ಕೆರೆ ಅಭಿವೃದ್ಧಿ ಸಮಿತಿ ಅಧ್ಯಕ್ಷ ದೇವೇಗೌಡ, ಉಪಾಧ್ಯಕ್ಷ ಪುಟ್ಟಣ್ಣ, ಮಂಜುನಾಥ್, ಸದಸ್ಯರಾದ ಯಜಮಾನ್ ಕರೀಗೌಡ, ಯೋಗಣ್ಣ, ಪರಮೇಶ್, ಕುಮಾರ್, ಪಿಡಿಓ ಹೆಚ್.ಎಸ್.ರವಿಕುಮಾರ್, ಪರಮೇಶ್, ರಾಮಕೃಷ್ಣ, ಗೀತಾ ಚಂದ್ರೇಗೌಡ, ಯೋಗೇಂದ್ರ, ಮುಖಂಡರಾದ ಡೈರಿ ಅಶ್ವತ್ಥ್, ಕೆಇಬಿ ಕೃಷ್ಣೇಗೌಡ, ಇಂಜಿನಿಯರ್ ಸುರೇಶ್ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ವಾಹನ ಸಂಚಾರಕ್ಕೆ ರಿಂಗ್ ರಸ್ತೆ ಮೀಡಿಯನ್ ಮರಗಳ ರೆಂಬೆ ಅಡ್ಡಿ

ಸಾರ್ವಜನಿಕರಿಂದ ದೂರು

ಮೈಸೂರು, ಮೇ 8(ಆರ್‌ಕೆ)–ನೆರಳು ಹಾಗೂ ನೈಸರ್ಗಿಕ ಸೌಂದರ್ಯ ವೃದ್ಧಿಗಾಗಿ ನೆಟ್ಟು ಬೆಳೆಸಿದ ಮೈಸೂರಿನ ರಿಂಗ್ ರಸ್ತೆ ಮೀಡಿಯನ್ ಮರಗಳ ರೆಂಬೆ ಹರಡಿಕೊಂಡಿರುವುದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ವಾಹನ ಚಾಲಕರು ಹಾಗೂ ಸವಾರರು ದೂರಿದ್ದಾರೆ.

ರಿಂಗ್ ರಸ್ತೆ ಮಧ್ಯೆ ವಿಭಜಕದಲ್ಲಿ ಬೆಳೆಸಿರುವ ಬೇವು, ಮತ್ತಿತರ ಸಸಿಗಳು ಬೆಳೆದು ಮರವಾಗಿದ್ದು, ಅವುಗಳ ರೆಂಬೆ ಎರಡೂ ಕಡೆಗೆ ಚಾಚಿಕೊಂಡಿರುವುದರಿಂದ ವಾಹನಗಳಿಗೆ ಅಡ್ಡ ಬಂದಿದ್ದು, ಅಪಘಾತಗಳಿಗೆ ಕಾರಣವಾಗುತ್ತಿವೆ. ಅಲ್ಲದೇ, ದ್ವಿಚಕ್ರ ವಾಹನ ಸವಾರರ ಮುಖಕ್ಕೆ ಅಪ್ಪಳಿಸುತ್ತಿವೆ ಎಂಬ ದೂರು ಸಾರ್ವಜನಿಕರಿಂದ ಕೇಳಿಬರುತ್ತಿದೆ.

ರಿಂಗ್ ರಸ್ತೆಯಲ್ಲಿ ಗಿಡ ಬೆಳೆಸಿರುವುದು ಅದರಲ್ಲು ಬೇವಿನಂತಹ ಔಷಧೀಯ ಗಿಡ ಬೆಳೆಸಿರುವುದು ಸ್ವಾಗತಾರ್ಹ. ಆದರೆ, ಅವುಗಳು ಬೆಳೆದಂತೆ ಇಕ್ಕೆಲಗಳಲ್ಲಿ ಚಾಚಿಕೊಂಡ ರೆಂಬೆಗಳನ್ನು ಕತ್ತರಿಸಿ ಟ್ರಿಮ್ ಮಾಡಿದಲ್ಲಿ ಮರವೂ ಎತ್ತರಕ್ಕೆ ಬೆಳೆಯುತ್ತದೆ, ವಾಹನಗಳಿಗೂ ಅಡ್ಡಿಯಾಗುವುದಿಲ್ಲ. ಅಲ್ಲದೇ ಅಪಘಾತಗಳು ಸಂಭವಿಸುವುದು ತಪ್ಪಿದಂತಾಗುತ್ತದೆ ಎಂದು ರಿಂಗ್ ರಸ್ತೆ ಬಳಸುವ ವಾಹನ ಸವಾರರು ಅಭಿಪ್ರಾಯಪಟ್ಟಿದ್ದಾರೆ.



ಈ ಕುರಿತು ಪ್ರತಿಕ್ರಿಯೆ ನೀಡಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕರದ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಟ್ಟರಾಜು, ರಿಂಗ್ ರಸ್ತೆಯಲ್ಲಿ ಗಿಡ ನೆಟ್ಟು ಬೆಳೆಸಿರುವವರು ಅರಣ್ಯ ಇಲಾಖೆಯವರಾಗಿರುವುದರಿಂದ ಟ್ರಿಮ್ಮಿಂಗ್ ಮಾಡಿಸುವಂತೆ ಪತ್ರ ಬರೆಯುತ್ತೇವೆ ಎಂದರು.

ಪರಿಶೀಲಿಸಿ ಕ್ರಮ: ಮೈಸೂರಿನ ರಿಂಗ್ ರಸ್ತೆ ಮೀಡಿಯನ್‌ನಲ್ಲಿ ಬೆಳೆಸಿರುವ ಮರಗಳ ರೆಂಬೆಗಳು ಇಕ್ಕೆಲಗಳಲ್ಲಿ ಚಾಚಿಕೊಂಡು ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿರುವ ಬಗ್ಗೆ ನಮಗೆ ಯಾವುದೇ ದೂರು ಬಂದಿಲ್ಲ. ಆದರೂ ಪರಿಶೀಲಿಸಿ ಅಗತ್ಯ ಬಿದ್ದರೆ, ತಕ್ಷಣವೇ ಟ್ರಿಮ್ ಮಾಡಿಸುತ್ತೇವೆ ಎಂದು ಅರಣ್ಯ ಇಲಖೆ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಕಮಲಾ ಕರಿಕಾಳನ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

> “ಗಿಡ ನೆಟ್ಟ ಮೇಲೆ ಬೆಳೆಯುವುದು ಸಹಜ. ಆದರೆ ಅವುಗಳನ್ನು ಕಾಲ ಕಾಲಕ್ಕೆ ನಿರ್ವಹಣೆ ಮಾಡಬೇಕಷ್ಟೇ. ವಾಹನ ಸವಾರರಾರೂ ತಮಗೆ ಗಿಡಗಳಿಂದ ಅಡ್ಡಿಯಾಗುತ್ತದೆ ಎಂದು ದೂರು ನೀಡಿಲ್ಲ. ಆದರೂ, ಈಗ ನನ್ನ ಗಮನಕ್ಕೆ ತಂದಿರುವುದರಿಂದ ಪರಿಶೀಲಿಸಿ ತಕ್ಷಣವೇ ಅಗತ್ಯ ಕ್ರಮ ಕೈಗೊಳ್ಳುತ್ತೇವೆ.
> –ಕಮಲಾ ಕರಿಕಾಳನ್,
> ಉಪ ಅರಣ್ಯ ಸಂರಕ್ಷಣಾಧಿಕಾರಿ

ನಾಳೆಯಿಂದ ಕಿರು ರಂಗಮಂದಿರದಲ್ಲಿ ಸಂಚಲನ ರಂಗೋತ್ಸವ

ಮೈಸೂರು, ಮೇ 8(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಮೇ 9ರಿಂದ 13ರವರೆಗೆ 'ಸಂಚಲನ ರಂಗೋತ್ಸವ' ಆಯೋಜಿಸಲಾಗಿದೆ ಎಂದು ಸಂಚಲನ ಮೈಸೂರು ಸಂಸ್ಥೆಯ ಅಧ್ಯಕ್ಷ ದೀಪಕ್ ಮೈಸೂರು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಚಲನ ಮೈಸೂರು ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆಯುವ ರಂಗೋತ್ಸವವನ್ನು ಮೇ 9ರಂದು 6.30ಕ್ಕೆ ಎಡಿಸಿ ಡಾ.ಬಿ.ಎಸ್.ಮಂಜುನಾಥಸ್ವಾಮಿ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಸಭಾ ಕಾರ್ಯಕ್ರಮದ ಬಳಿಕ ಬಳ್ಳಾರಿಯ ಸಿರಿಗೇರಿಯ ಧಾತ್ರಿ ರಂಗ ತಂಡದ ಸದಸ್ಯರು 'ಬಾಹುಬಲಿ ವಿಜಯಂ' ನಾಟಕ ಪ್ರದರ್ಶಿಸಲಿದ್ದಾರೆ. ಈ ನಾಟಕ ಗಣೇಶ್ ಎಂ.ಹೆಗ್ಗೋಡು ಸಹ ನಿದೇಶನ ಮತ್ತು ಭೀಮೇಶ್ ಎಚ್.ಎನ್. ದಾವಣಗೆರೆ ವಿನ್ಯಾಸ ಮತ್ತು ನಿರ್ದೇಶನದಲ್ಲಿ ಮೂಡಿಬರಲಿದೆ ಎಂದರು.

ಮೇ 10ರಂದು ಸಂಜೆ 6.30ಕ್ಕೆ ರಾಜೇಂದ್ರ ಕಾರಂತರ ವೈನೋದಿಕ ನಾಟಕ 'ಮುದ್ದಣ್ಣ ಪ್ರಮೋಷನ್ ಪ್ರಸಂಗ' ಪ್ರದರ್ಶನಗೊಳ್ಳಲಿದೆ. ಈ ವೇಳೆ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕ ಎಸ್.ಸ್ವಾಮಿ, ಪತ್ರಕರ್ತ ನರಸಿಂಹಮೂರ್ತಿ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಉಪಸ್ಥಿತರಿರುವರು. ಮೇ 11ರಂದು ಸಂಜೆ 6.30ಕ್ಕೆ ಮಂಜು ಸಿರಿಗೇರಿ ವಿನ್ಯಾಸ ಮತ್ತು ನಿರ್ದೇಶನದಲ್ಲಿ 'ವಿಶ್ವಾಮಿತ್ರ ಮತ್ತು ಮೇನಕೆ ಡ್ಯಾನ್ಸ್ ಮಾಡೋದು ಏನಕೆ?' ನಾಟಕ ಪ್ರದರ್ಶನವಿದೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಪ್ರದರ್ಶಕ ಕಲಾ ವಿಭಾಗದ ಅತಿಥಿ ಉಪನ್ಯಾಸಕ ಡಾ.ಪ್ರಭುರಾಜ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಮೇ 12ರಂದು ನಿರಂತರ ರಂಗ ತಂಡದಿಂದ 'ವಾಸುದಾರರ' ನಾಟಕ ಪ್ರದರ್ಶನಗೊಳ್ಳಲಿದ್ದು, ಪ್ರಸಾದ್ ಕುಂದೂರ್ ನಿರ್ದೇಶನ, ಬಿ.ಕೆ.ಕಿರಣ್ ಸಂಗೀತ ಇರಲಿದೆ. ಪ್ರಗತಿಪರ ಕೃಷಿಕ ಚಿನ್ನಸ್ವಾಮಿ ವಡ್ಡಗೆರೆ, ಜಿಲ್ಲಾ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ದಿವ್ಯಾಶ್ರೀ ಮತ್ತು ಹಿರಿಯ ರಂಗ ನಿರ್ದೇಶಕ ಪ್ರಸಾದ್ ಕುಂದೂರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು. ಮೇ 13ರಂದು ಸಂಜೆ 6.30ಕ್ಕೆ ನಡೆಯುವ ಸಮಾರಂಭ ಸಮಾರೋಪದಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾದ ವೀಣಾ ಶರ್ಮಾ, ಹಿರಿಯ ರಂಗಕರ್ಮಿ ಇಂದಿರಾ ನಾಯರ್ ಅತಿಥಿಗಳಾಗಿ ಪಾಲ್ಗೊಳ್ಳುವರು. ಬಳಿಕ ಸಂಚಲನ ಮೈಸೂರು ರಂಗ ತಂಡವು ಪ್ರವೀಣ್ ಬೆಳ್ಳಿ ಮತ್ತು ನನ್ನ ನಿರ್ದೇಶನದಲ್ಲಿ 'ಹಗ್ಗದ ಮನೆ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ, ಉಮಾದೇವಿ, ಕಲಾವಿದರಾದ ಶ್ರೀನಿವಾಸ್ ಪಾಲಳ್ಳಿ, ರಾಧಾ ನಾರಾಯಣಗೌಡ, ಪೂರ್ಣಿಮಾ, ರಂಜಿತ್ ಇದ್ದರು.


ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷತಾ ಕ್ರಮ ಅಳವಡಿಕೆ ಕಡ್ಡಾಯ

ಬೆಂಗಳೂರು, ಮೇ 8– ಸರ್ಕಾರಿ ಆಸ್ಪತ್ರೆಗಳಲ್ಲಿ, ವೈದ್ಯಕೀಯ ಕಾಲೇಜುಗಳಲ್ಲಿ ಅಗ್ನಿ ಅವಘಡದಂತಹ ಘಟನೆಗಳನ್ನು ತಡೆಯಲು ಮುನ್ನೆಚ್ಚರಿಕಾ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಸೂಚನೆ ನೀಡಿದರು.



ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಎಲ್ಲಾ ಆಸ್ಪತ್ರೆಗಳಲ್ಲೂ ಅಗ್ನಿ ಸುರಕ್ಷತಾ ಕ್ರಮಗಳನ್ನು ಅನುಸರಿಸಲು ಒತ್ತು ನೀಡಲಾಗಿದೆ. ಕೆಲ ದಿನಗಳ ಹಿಂದೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಜೊತೆ ನಡೆದ ವೀಡಿಯೋ ಸಂವಾದದ ವೇಳೆ, ಪ್ರಧಾನಿಗಳು ಆಸ್ಪತ್ರೆಗಳಲ್ಲಿ ಅಗ್ನಿ ಸುರಕ್ಷಾ ಕ್ರಮಗಳನ್ನು ಅನುಸರಿಸುವ ಬಗ್ಗೆ ಸಲಹೆ, ಸೂಚನೆಗಳನ್ನು ನೀಡಿದ್ದರು ಎಂದು ತಿಳಿಸಿದರು.

ರಾಜ್ಯದ ಆಸ್ಪತ್ರೆಗಳು ಮತ್ತು ವೈದ್ಯಕೀಯ ಕಾಲೇಜುಗಳಿಗೆ ಫೈರ್ ಸೇಫ್ಟಿ ಆಡಿಟ್‌ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ಲಿಖಿತ ಸೂಚನೆ ನೀಡಲಾಗಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ, 166 ಆಸ್ಪತ್ರೆಗಳಿಗೆ ಅಗ್ನಿ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲು ತಲಾ 50 ಸಾವಿರ ರೂ.ಗಳನ್ನು ನೀಡಲಾಗುತ್ತಿದೆ ಎಂದರು. ಅಗ್ನಿ ಸುರಕ್ಷತಾ ಕ್ರಮಗಳ ಅಳವಡಿಕೆ ನಂತರ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಮೂಲಕ ಎಲ್ಲಾ ಆಸ್ಪತ್ರೆಗಳು ನಿರಾಕ್ಷೇಪಣಾ ಪತ್ರ ಪಡೆಯಬೇಕಿದೆ. ಮೇ 21ರ ತನಕ ಕಾಲಮಿತಿಯನ್ನು ನೀಡಲಾಗಿದೆ. 16 ಜಿಲ್ಲಾ ಆಸ್ಪತ್ರೆಗಳು, 150 ತಾಲೂಕು ಆಸ್ಪತ್ರೆಗಳಿಗೆ ಈಗಾಗಲೇ ಈ ಬಗ್ಗೆ ಸೂಚನೆಯನ್ನು ಕೂಡ ನೀಡಲಾಗಿದೆ ಎಂದು ಮಾಹಿತಿ ನೀಡಿದರು.



ಮೈಸೂರಿನ ರೂಪನಗರದಲ್ಲಿ ನಡೆದ ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಪ್ರಚಾರ ಸಭೆಯಲ್ಲಿ ಇಂಧನ ಸಚಿವ ವಿ.ಸುನಿಲ್‌ಕುಮಾರ್ ಅವರನ್ನು ಅಭ್ಯರ್ಥಿ ಮೈ.ವಿ.ರವಿಶಂಕರ್, ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಅರುಣ್‌ಕುಮಾರ್‌ಗೌಡ ಅಭಿನಂದಿಸಿದರು. ಈ ವೇಳೆ ಸ್ಥಳೀಯ ಮುಖಂಡ ಪೂಜಾರ್, ಬಾಲಕೃಷ್ಣ, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ಬಿ.ಎಂ.ರಘು, ಗ್ರಾಮಾಂತರ ಅಧ್ಯಕ್ಷ ಜಿ.ಎಂ.ಮಹೇಶ್, ಸೋಮಶೇಖರ್, ಪರೀಕ್ಷಿತ್ ರಾಜ್‌ಅರಸ್, ಚಂದ್ರಶೇಖರ ಪಟೇಲ್, ಮರಿಸ್ವಾಮಿ ನಾಯಕ, ಈರಪ್ಪ, ಶಿವಕುಮಾರ್, ಸೀಗಳ್ಳಿ ರವಿ ಇನ್ನಿತರರು ಉಪಸ್ಥಿತರಿದ್ದರು.

ಪಿಎಸ್‌ಐ ಹಗರಣ; ನೇಮಕಾತಿ ವಿಭಾಗದ 12 ಸಿಬ್ಬಂದಿ ವರ್ಗಾವಣೆ

ಬೆಂಗಳೂರು: ಪಿಎಸ್‌ಐ ನೇಮಕಾತಿ ಹಗರಣದ ಬಗ್ಗೆ ಸಿಐಡಿ ತನಿಖೆ ಚುರುಕುಗೊಂಡಿದೆ. ನೇಮಕಾತಿ ವಿಭಾಗದ 12 ಸಿಬ್ಬಂದಿಗಳನ್ನು ವರ್ಗಾವಣೆಗೊಳಿಸಿ ಎಡಿಜಿಪಿ ಹಿತೇಂದ್ರ ಆದೇಶಿಸಿದ್ದಾರೆ. ಕೆಲವು ದಿನಗಳ ಹಿಂದೆ ನೇಮಕಾತಿ ವಿಭಾಗದ ಎಡಿಜಿಪಿ ಅಮ್ರಿತ್ ಪೌಲ್, ಡಿವೈಎಸ್ಪಿ ಶಾಂತಕುಮಾರ್ ಅವರನ್ನು ವರ್ಗಾವಣೆಗೊಳಿಸಿತ್ತು. ನೇಮಕಾತಿ ವಿಭಾಗದಲ್ಲಿ 14 ಸಿಬ್ಬಂದಿ ಇದ್ದರು. ಇವರಲ್ಲಿ 12 ಸಿಬ್ಬಂದಿ ವರ್ಗಾವಣೆ ಮಾಡಲಾಗಿದೆ. ವರ್ಗಾವಣೆ ಗೊಂಡ ಸಿಬ್ಬಂದಿ ಸ್ಥಾನ ಖಾಲಿ ಇದ್ದು, ಹೊಸ ಸಿಬ್ಬಂದಿ ನಿಯೋಜನೆ ಮಾಡಬೇಕಿದೆ. ಪೊಲೀಸ್ ನೇಮಕಾತಿ ವಿಭಾಗದಿಂದಲೇ ಪಿಎಸ್‌ಐ ಲಿಖಿತ ಪರೀಕ್ಷೆ ಅಕ್ರಮ ನಡೆದಿದೆ ಎಂಬ ಆರೋಪವಿದೆ. ಈ ಹಿನ್ನಲೆಯಲ್ಲಿ ನೇಮಕಾತಿ ವಿಭಾಗದಲ್ಲಿದ್ದ ಸಿಬ್ಬಂದಿ, ಅಧಿಕಾರಿಗಳ ಮೇಲೆ ಸಹ ಸಿಐಡಿ ನಿಗಾ ವಹಿಸಿದೆ.

ಚಾ.ನಗರದಲ್ಲಿ ವಿಜೃಂಭಣೆಯ ಭಗೀರಥ ಮಹರ್ಷಿ ಜಯಂತಿ



ಚಾಮರಾಜನಗರ, ಮೇ 8– ಧರೆಗೆ ಗಂಗೆಯನ್ನು ಕರೆತಂದ ಭಗೀರಥ ಮಹರ್ಷಿ ಅವರ ಜಯಂತಿಯನ್ನು ನಗರದಲ್ಲಿ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ನಗರದ ಪ್ರೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಡೆದ ಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ಭಗೀರಥ ಪೀಠಾಧೀಶ ಪುರುಷೋತ್ತಮಾನಂದಪುರಿ ಸ್ವಾಮೀಜಿ ಮಾತನಾಡಿ, ದೇಶದಲ್ಲಿ ಸಾಧು–ಸಂತರು, ದಾರ್ಶನಿಕರು ಜನ್ಮತಾಳಿ ನಾಡಿಗೆ ತಮ್ಮ ಕೊಡುಗೆ ನೀಡಿದ್ದಾರೆ. ಅಂತಹವರ ಸಾಲಿನಲ್ಲಿ ತಮ್ಮ ಪೂರ್ವಜರಾತ್ಮಕ್ಕೆ ಶಾಂತಿ ತರಲು ಅನೇಕ ವರ್ಷಗಳ ಕಾಲ ಕಠಿಣ ತಪಸ್ಸು ಆಚರಿಸಿ, ಹಿಡಿದ ಛಲಬಿಡದೇ, ದೇವಗಂಗೆಯನ್ನು ಭೂಮಿಗೆ ತಂದವರು ಭಗೀರಥರು. ಪ್ರಯತ್ನಪಟ್ಟರೇ ಯಾವ ಕೆಲಸವು ಅಸಾಧ್ಯವಲ್ಲ ಎಂಬುದನ್ನು ತೋರಿಸಿಕೊಟ್ಟರು ಎಂದರು.

ಸಮಾಜದಲ್ಲಿ ಇಂದಿಗೂ ಬಾಲ್ಯವಿವಾಹ ರೂಢಿಯಲ್ಲಿದ್ದು, ಬಡತನ, ಅನಕ್ಷರತೆ, ಮೌಢ್ಯದಿಂದ ಇದು ನಡೆಯುತ್ತಿದೆ ಎನ್ನಲಾಗುತ್ತಿದ್ದು, ಇದು ಸರಿಯಲ್ಲ. ಸಮಾಜಕ್ಕೆ ಪುರಾಣ ಪ್ರಸಿದ್ಧ ಇತಿಹಾಸವಿದೆ. ಸಮುದಾಯದವರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣದ ಜೊತೆಗೆ ಸಂಸ್ಕಾರ ಕಲಿಸಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಅಧ್ಯಕ್ಷತೆ ವಹಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಸಕಲ ಜೀವರಾಶಿಗೂ ಲೇಸನ್ನೇ ಬಯಸಿದವರಲ್ಲಿ ಭಗೀರಥಮಹರ್ಷಿ ಒಬ್ಬರು, ಅಂತಹ ಮಹಾಪುರುಷನ ವಂಶಜರಾದ ನಾವು ಉಪ್ಪು ತಯಾರಿಸಿ ಮಾರಾಟ ಮಾಡುವ ವೃತ್ತಿ ಮಾಡುತ್ತಿದ್ದೆವು. ಬ್ರಿಟಿಷ್ ಆಡಳಿತದಲ್ಲಿ ನಮ್ಮ ವೃತ್ತಿಗೆ ಹೊಡೆತಬಿತ್ತು. ಅಂದಿನಿಂದ ಸಮುದಾಯದವರು ನಾನಾ ವೃತ್ತಿಗಳ ಅವಲಂಬಿಸಿ ಜೀವನ ನಡೆಸುತ್ತಿದ್ದಾರೆ. ಸಮುದಾಯವನ್ನು ಆರ್ಥಿಕವಾಗಿ ಮೇಲೆತ್ತುವ ದೃಷ್ಟಿಯಿಂದ ಎಸ್‌ಸಿ, ಎಸ್‌ಟಿಗೆ ಸೇರಿಸಬೇಕು ಎಂಬ ಬೇಡಿಕೆಯಿದೆ, ಈಗಾಗಲೇ ಕುಲಶಾಸ್ತ್ರೀಯ ಅಧ್ಯಯನ ನಡೆದಿದ್ದು, ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡುವ ಹಂತ ನಡೆಯಬೇಕಿದೆ, ಯಾವುದೇ ಕಾರಣಕ್ಕೂ ಸಮುದಾಯದವರು ಬಾಲ್ಯ ವಿವಾಹಕ್ಕೆ ಆಸ್ಪದ ಕೊಡಬಾರದು ಎಂದರು.

ತಿಪಟೂರು ನಿವೃತ್ತ ತಹಸೀಲ್ದಾರ್ ಎನ್.ಚನ್ನಬಸಪ್ಪ ಅವರು ಪ್ರಧಾನ ಭಾಷಣ ಮಾಡಿದರು. ಕಾರ್ಯಕ್ರಮಕ್ಕೂ ಮುನ್ನಾ ಅಮಚವಾಡಿ ಮಂಜುನಾಥಶೆಟ್ಟಿ ತಂಡದವರು ಭಗೀರಥ ಮಹರ್ಷಿ ಕುರಿತ ಭಕ್ತಿಗೀತೆ, ಭಾವ ಗೀತ ಗಾಯನ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ 88 ಗಡಿಕಟ್ಟೆ ಪೀಠಾಧ್ಯಕ್ಷ ಮಂಜುನಾಥ ಸ್ವಾಮೀಜಿ, ಚುಡಾ ಅಧ್ಯಕ್ಷ ಪಿ.ಬಿ.ಶಾಂತಮೂರ್ತಿ, ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ಜಿಪಂ ಉಪಕಾರ್ಯದರ್ಶಿ ಗೂಡೂರು ಭೀಮಸೇನಾ, ಜಿಲ್ಲಾ ಎಸ್‌ಪಿ ಟಿ.ಪಿ. ಶಿವಕುಮಾರ್, ಜಿಲ್ಲಾ ಉಪ್ಪಾರ ಯುವಕ ಸಂಘದ ಅಧ್ಯಕ್ಷ ಜಯಕುಮಾರ್, ಸಂಘದ ಪದಾಧಿಕಾರಿಗಳು, ತಾಲೂಕು ಉಪ್ಪಾರ ಸಂಘದ ತಾಲೂಕು ಅಧ್ಯಕ್ಷ ಪಿ.ಲಿಂಗರಾಜು, ಗಡಿ ಮನೆ ಕಟ್ಟೆ ಯಜಮಾನರು, ಮುಖಂಡರಾದ ಶಿವಕುಮಾರ್, ಹನುಮಂತಶೆಟ್ಟಿ, ಸಿ.ಎ.ಮಹದೇವಶೆಟ್ಟಿ, ಚಿಕ್ಕಮಹಾದೇವು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಚನ್ನಪ್ಪ, ವಿವಿಧ ಗ್ರಾಮಗಳ ಮುಖಂಡರು, ಯುವಕರು ಸೇರಿದಂತೆ ಇತರರು ಭಾಗವಹಿಸಿದ್ದರು.

ಲಾಡು, ಪಾನಕ, ಮಜ್ಜಿಗೆ ವಿತರಣೆ

ಚಾಮರಾಜನಗರ: ನಗರದಲ್ಲಿ ಶ್ರೀ ಭಗೀರಥ ಮಹರ್ಷಿ ಅವರ ಜಯಂತಿ ಹಿನ್ನೆಲೆಯಲ್ಲಿ ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಅವರು ಮೆರವಣಿಗೆಯಲ್ಲಿ ಭಾಗವಹಿಸಿದ ಸಾವಿರಾರು ಮಂದಿಗೆ ಲಾಡು, ಮಜ್ಜಿಗೆ, ಪಾನಕ ವಿತರಿಸಿದರು.



ಮೆರವಣಿಗೆಗೆ ಚಾಲನೆ ದೊರೆಯುತ್ತಿದ್ದಂತೆ ಜಾನಪದ ಕಲಾ ತಂಡಗಳ ಕಲಾವಿದರು, ಸಾರ್ವಜನಿಕರಿಗೆ ಲಾಡು ವಿತರಿಸಿದರು. ನಂತರ ನಗರಸಭೆ ಮುಂಭಾಗ ಮಜ್ಜಿಗೆ, ಪಾನಕ ಹಾಗೂ ಲಾಡು ವಿತರಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಬಸವಣ್ಣ, ಸತೀಶ್ ಹಾಜರಿದ್ದರು.

ಭಗೀರಥ ಮಹರ್ಷಿ ಭಾವಚಿತ್ರದ ಅದ್ದೂರಿ ಮೆರವಣಿಗೆ

ಚಾಮರಾಜನಗರ: ನಗರದಲ್ಲಿ ಜಿಲ್ಲಾಡಳಿತದಿಂದ ನಡೆದ ಶ್ರೀಭಗೀರಥ ಮಹರ್ಷಿ ಭಾವಚಿತ್ರ ಮರವಣಿಗೆ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು. ನಗರದ ಪ್ರವಾಸಿ ಮಂದಿರದಿಂದ ಹೊರಟ ಮೆರವಣಿಗೆಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಚಾಲನೆ ನೀಡಿದರು.



ಮೆರವಣಿಗೆಯಲ್ಲಿ ವಿವಿಧ ಗ್ರಾಮಗಳಿಂದ ಸತ್ತಿಗೆ ಸೂರಿಪಾನಿ, ಹೂವಿನಿಂದ ಶೃಂಗರಿಸಿದ ತೆರೆದ ವಾಹನದಲ್ಲಿ ಶ್ರೀಭಗೀರಥ ಮಹರ್ಷಿ ಭಾವಚಿತ್ರವಿಟ್ಟು ಜಾನಪದ ಕಲಾ ತಂಡಗಳಾದ ಚಿಕ್ಕಮಂಗಳೂರು ಕಡೂರಿನ ಮಹಿಳಾ ವೀರಗಾಸೆ, ಚಿಲಿಪಿಲಿ ಗೊಂಬೆ, ಗೊರವರ ಕುಣಿತ, ತಮಟೆ ವಾದನ, ಬ್ಯಾಂಡ್ ಸೆಟ್, ದೊಣ್ಣೆ ವರಸೆ, 101 ಬಾಲಕಿಯರು ಹಾಲರುವೆ ಉತ್ಸವ ಹಾಗೂ ನಾದಸ್ವರ ಹಾಗೂ ವಿವಿಧ ಗ್ರಾಮಗಳಿಂದ ಬಂದಿದ್ದ ಸತ್ತಿಗೆ ಸೂರಿಪಾನಿಯೊಂದಿಗೆ ಕುಂಭ ಕಳಶವನ್ನು ವೇದಿಕೆವರೆಗೂ ಹೊತ್ತು ತಂದು ಮೆರವಣಿಗೆಗೆ ಬಂದು ಅದ್ದೂರಿ ಮೆರವಣಿಗೆ ಆಕರ್ಷಕವಾಗಿತ್ತು. ಮೆರವಣಿಗೆಯಲ್ಲಿ ಭಾಗವಹಿಸಿದ ಯುವಕರ ತಂಡ. ಡಿಜಿ ಸೌಂಡ್‌ಗೆ ಬಿಸಿಲನ್ನು ಲೆಕ್ಕಿಸದೆ ಕುಣಿದು ಕುಪ್ಪಳಿಸಿದರು.

ಈ ವೇಳೆ ಶಾಸಕ ಸಿ.ಪುಟ್ಟರಂಗಶೆಟ್ಟಿ, ಕೇಂದ್ರ ಪರಿಹಾರ ಸಮಿತಿ ಅಧ್ಯಕ್ಷ ಎಂ.ರಾಮಚಂದ್ರ, ನಗರಸಭೆ ಅಧ್ಯಕ್ಷೆ ಆಶಾ ನಟರಾಜು, ಜಿಪಂ ಸಿಇಒ ಕೆ.ಎಂ. ಗಾಯತ್ರಿ, ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಎಸ್.ಕಾತ್ಯಾಯಿನಿದೇವಿ ಇನ್ನಿತರ ಮುಖಂಡರು ಉಪಸ್ಥಿತರಿದ್ದರು.

ಜೀವಜಲ ಸಂರಕ್ಷಿಸಲು ಭಗೀರಥ ಪ್ರಯತ್ನ ಅಗತ್ಯ



ಹನೂರು, ಮೇ 8(ಸೋಮು)– ಜೀವಜಲವನ್ನು ಉಳಿಸುವ, ಸಂರಕ್ಷಿಸುವ ನಿಟ್ಟಿನಲ್ಲಿ ನಮ್ಮದೂ ಭಗೀರಥ ಪ್ರಯತ್ನವಾಗಿರಬೇಕು ಎಂದು ಬಿಜೆಪಿ ಮುಖಂಡ ಬಿ.ವೆಂಕಟೇಶ್ ತಿಳಿಸಿದರು. ಭಗೀರಥ ಜಯಂತಿ ಅಂಗವಾಗಿ ಪಟ್ಟಣದ ಬಿಜೆಪಿ ಮುಖಂಡ ವೆಂಕಟೇಶ್ ಕಚೇರಿಯಲ್ಲಿ ಭಗೀರಥ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಬಳಿಕ ವೆಂಕಟೇಶ್ ಮಾತನಾಡಿ, ಛಲಬಿಡದ ಪ್ರಯತ್ನಕ್ಕೆ ಹೆಸರಾದ ಭಗೀರಥ ಮಹರ್ಷಿ ಅವರು, ತಮ್ಮ ಪೂರ್ವಜರ ಆತ್ಮಕ್ಕೆ ಶಾಂತಿ ದಯಪಾಲಿಸುವುದಕ್ಕಾಗಿ ದೇವ ಗಂಗೆಯನ್ನೇ ಭೂಮಿಗೆ ತರಿಸಿದವರು ಎಂದರಲ್ಲದೆ, ಗಂಗೆಯ ರಭಸದಿಂದ ಭೂಮಿಯನ್ನು ರಕ್ಷಿಸುವುದಕ್ಕಾಗಿ ಶಿವನನ್ನು ಪ್ರಾರ್ಥಿಸಿ, ಆತನನ್ನೂ ಒಲಿಸಿಕೊಂಡ ಭಗೀರಥನಿಂದಲೇ ಭೂಲೋಕದಲ್ಲಿಂದು ಪಾವನ ಗಂಗೆ ಹರಿಯುತ್ತಿದ್ದಾಳೆ ಎಂದರು.

ಇದೇ ಸಂದರ್ಭದಲ್ಲಿ ವಿವಿಧ ಗ್ರಾಮದ ಮುಖಂಡರು ಹಾಜರಿದ್ದರು.

ಶಿಕ್ಷಣದಿಂದ ಸಮಾಜದ ಅಭಿವೃದ್ಧಿ ಸಾಧ್ಯ: ನರೇಂದ್ರ

ಹನೂರು, ಮೇ 8(ಸೋಮು)– ಯಾವುದೇ ಒಂದು ಸಮಾಜ ಮುಖ್ಯವಾಹಿನಿಗೆ ಬರಬೇಕು ಎಂದರೆ ಶಿಕ್ಷಣದಿಂದ ಮಾತ್ರ ಸಾಧ್ಯ. ಹಾಗಾಗಿ, ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಪ್ರಮುಖವಾಗಿ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಶ್ರಮಿಸಬೇಕು ಎಂದು ಶಾಸಕ ಆರ್. ನರೇಂದ್ರ ತಿಳಿಸಿದರು.



ಪಟ್ಟಣದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಭಾನುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಹಮ್ಮಿಕೊಂಡಿದ್ದ ಶ್ರೀಭಗೀರಥ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉಪ್ಪಾರ ಸಮುದಾಯದಲ್ಲಿ ಬಹುದೊಡ್ಡ ಪಿಡುಗೆಂದರೆ, ಅದು ಬಾಲ್ಯವಿವಾಹ. ಹೆಣ್ಣು ಮಕ್ಕಳಿಗೆ ಶಿಕ್ಷಣವನ್ನು ಮೊಟಕುಗೊಳಿಸಿ ಬಾಲ್ಯ ವಿವಾಹವನ್ನು ಮಾಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಪ್ರಕರಣಗಳು ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ಬಾಲ್ಯ ವಿವಾಹಗಳನ್ನು ಮಾಡದೇ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಜೊತೆಗೆ, ಒಂದು ಸಮುದಾಯ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮುಂದೆ ಬರಬೇಕಾದರೆ ಶಿಕ್ಷಣ ಬಹು ಮುಖ್ಯ ಎಂದರು.

ಅಲ್ಲದೇ ಭಗೀರಥ ಮಹರ್ಷಿಯವರ ಅವರ ಅವಿರತ ಶ್ರಮದಿಂದ ಗಂಗೆಯನ್ನು ಅವರ ಧರೆಗೆ ತಂದಂತಹ ಮಹಾನ್ ಪುರುಷರು ಇಂತವರ ತತ್ವಾದರ್ಶಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮೆರವಣಿಗೆಗೆ ಚಾಲನೆ: ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣ ನೆರೆದಿದ್ದ ನೂರಾರು ಮಂದಿ ಸಮ್ಮುಖದಲ್ಲಿ ಶಾಸಕ ಆರ್.ನರೇಂದ್ರ ಅವರು ಬೆಳ್ಳಿ ರಥದಲ್ಲಿ ಅಳವಡಿಸಿದ್ದ ಭಗೀರಥ ಮಹರ್ಷಿ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಮೆರವಣಿಗೆಯಲ್ಲಿ ವಾದ್ಯಮೇಳ, ತಮಟೆ, ಯುವಕರ ಕುಣಿತದೊಂದಿಗೆ ವಿಜೃಂಭಣೆಯಿಂದ ಜರುಗಿತ್ತು ಇದೇ ಸಂದರ್ಭದಲ್ಲಿ ಪಪಂ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷ ಗಿರೀಶ್, ಎಪಿಎಂಸಿ ಅಧ್ಯಕ್ಷ ಜಗನ್ನಾಥ ನಾಯ್ಡು, ಉಪ್ಪಾರ, ಸಮುದಾಯದ ಗಡಿ ಯಜಮಾನರಾದ ರಾಜು, ತಹಸೀಲ್ದಾರ್ ನಾಗರಾಜು, ಬಿಇಒ ಟಿ.ಆರ್.ಸ್ವಾಮಿ, ಪಪಂ ಮುಖ್ಯಾಧಿಕಾರಿ ಪರಶಿವಯ್ಯ, ಗ್ರೇಡ್–2 ತಹಸೀಲ್ದಾರ್ ರಾಜಕಾಂತ್, ಖಜಾನೆ ಅಧಿಕಾರಿ ಕೃಷ್ಣಮೂರ್ತಿ, ಶಿರಸ್ತೇದಾರ್ ರವಿ, ಗ್ರಾಮ ಲೆಕ್ಕಿಗ ಶೇಷಣ್ಣ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು, ಕಂದಾಯ ಇಲಾಖೆಯ ಅಧಿಕಾರಿಗಳು ಇನ್ನಿತರರು ಇದ್ದರು.

ಯತ್ನಾಳ ಹೇಳಿಕೆ ಪಕ್ಷಕ್ಕೆ ಮುಜುಗರ: ಸೋಮಣ್ಣ

ಚಾಮರಾಜನಗರ: ಮುಖ್ಯಮಂತ್ರಿಯಾಗಲು 2500 ಕೋಟಿ ಬೇಕು ಎಂಬ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಯಿಂದ ಪಕ್ಷಕ್ಕೆ ಮುಜುಗರವಾಗಿದೆ ಎಂದು ಸಚಿವ ವಿ.ಸೋಮಣ್ಣ ಬೇಸರ ವ್ಯಕ್ತಪಡಿಸಿದರು.ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯತ್ನಾಳ ಅವರು ಯಾಕೆ ಈ ರೀತಿ ಮಾತನಾಡುತ್ತಾರೋ ಗೊತ್ತಿಲ್ಲ. ಅವರು ಹಿರಿಯ ನಾಯಕರು. ಕೇಂದ್ರ ಸಚಿವರಾಗಿದ್ದವರು. ದೊಡ್ಡ ಸಮುದಾಯದ ನಾಯಕರು. ಪಕ್ಷಕ್ಕೆ ಮುಜುಗರವಾಗುವಂತಹ ಹೇಳಿಕೆ ಯಾರೂ ನೀಡಬಾರದು. ಯತ್ನಾಳ ಅವರು ತಪ್ಪು ಮಾಡಿದ್ದಾರೆ. ಪಕ್ಷದ ರಾಜ್ಯಾಧ್ಯಕ್ಷರು ಈ ವಿಚಾರದ ಬಗ್ಗೆ ಗಮನಹರಿಸಿದ್ದಾರೆ ಎಂದರು.

ಸಂಪುಟ ಪುನರ್ ರಚನೆ ಅಥವಾ ವಿಸ್ತರಣೆ ಮಾಡುವುದು ಮುಖ್ಯಮಂತ್ರಿ ಅವರ ಪರಮಾಧಿಕಾರ. ಮುಖ್ಯಮಂತ್ರಿ ಬೊಮ್ಮಾಯಿ ಹಾಗೂ ವರಿಷ್ಠರು ಈ ಬಗ್ಗೆ ನಿರ್ಧರಿಸಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.



ಅನಾರೋಗ್ಯದಿಂದ ಇತ್ತೀಚೆಗೆ ನಿಧನರಾದ ಪತ್ರಕರ್ತ ಉಮ್ಮತ್ತೂರು ನಾಗೇಶ್ ಅವರ ನಿವಾಸಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಭಾನುವಾರ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿದರು. ಈ ವೇಳೆ ಶಾಸಕ ಸಿ.ಎಸ್.ನಿರಂಜನ್‌ಕುಮಾರ್, ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ, ಜಿಪಂ ಮಾಜಿ ಸದಸ್ಯ ಎ.ಆರ್.ಬಾಲರಾಜು ಇತರರು ಹಾಜರಿದ್ದರು.

ಬಡವರ ಒತ್ತುವರಿ ಭೂಮಿಯನ್ನೂ ಸಕ್ರಮಗೊಳಿಸಿ

ಮಡಿಕೇರಿ,ಮೇ 8–ಬೆಳೆಗಾರರು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು 30 ವರ್ಷಗಳವರೆಗೆ ಗುತ್ತಿಗೆ ಆಧಾರದಲ್ಲಿ ನೀಡುವ ಸರಕಾರದ ನಿರ್ಧಾರ ಸ್ವಾಗತಾರ್ಹ. ಇದೇ ಮಾದರಿಯಲ್ಲಿ ಕಡುಬಡವರು, ಕೂಲಿ ಕಾರ್ಮಿಕರು ಹಾಗೂ ಗಿರಿಜನರು ಸೂರಿಗಾಗಿ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಸಕ್ರಮಗೊಳಿಸಿ ಹಕ್ಕುಪತ್ರ ನೀಡಬೇಕು ಎಂದು ಮಡಿಕೇರಿ ನಗರ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷ ಕೆ.ಜಿ.ಪೀಟರ್ ಒತ್ತಾಯಿಸಿದ್ದಾರೆ.



ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಬಡವರು ಆಶ್ರಯ ಪಡೆದುಕೊಳ್ಳಲು 2–3 ಸೆಂಟ್‌ನಷ್ಟು ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದು, ಸಾವಿರಾರು ಅರ್ಜಿಗಳು ವಿಲೇವಾರಿಯಾಗದೆ ಉಳಿದಿವೆ. ಬೆಳೆಗಾರರ ಬಗ್ಗೆ ಹೆಚ್ಚು ಆಸಕ್ತಿ ತೋರಿರುವ ಸರ್ಕಾರ ಬಡವರಿಗೂ ನಿವೇಶನವನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿರುವ ಸಾವಿರಾರು ವಸತಿರಹಿತ ಬಡ ಕುಟುಂಬಗಳು ಸರ್ಕಾರದ ಸೂರಿಗಾಗಿ ಕಾದು ಬೇಸತ್ತಿವೆ. ಯಾವುದೇ ವಸತಿ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಇದೇ ಕಾರಣದಿಂದ ಬಡವರು ಹಾಗೂ ಕೂಲಿ ಕಾರ್ಮಿಕರು ಪೈಸಾರಿ ಜಾಗಗಳನ್ನು ಒತ್ತುವರಿ ಮಾಡಿ ಗುಡಿಸಲು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸಿ ವರ್ಷಗಳೇ ಕಳೆದಿದ್ದರೂ ಜಾಗವನ್ನು ಸರ್ಕಾರ ಸಕ್ರಮಗೊಳಿಸಿಲ್ಲ. ಆದಿವಾಸಿ ಅರಣ್ಯಹಕ್ಕು ಮಸೂದೆ ಜಾರಿಯಾಗಿ 15 ವರ್ಷಗಳೇ ಕಳೆದಿದ್ದರೂ ಗಿರಿಜನರಿಗೆ ಮಸೂದೆಯಲ್ಲಿ ಸೂಚಿಸಿರುವಷ್ಟು ಭೂಮಿಯನ್ನು ಇಲ್ಲಿಯವರೆಗೂ ನೀಡಿಲ್ಲ. ಇದರ ನಡುವೆಯೇ ಬೆಳೆಗಾರರಿಗೆ ಒತ್ತುವರಿ ಜಮೀನನ್ನು 30 ವರ್ಷಗಳ ಗುತ್ತಿಗೆಗೆ ನೀಡುವ ಅತಿ ಸುಲಭದ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ. ಇದೇ ಪ್ರಕಾರವಾಗಿ ವಸತಿ ರಹಿತ ಬಡವರ ಬಗ್ಗೆಯೂ ಕರುಣೆ ತೋರಿ ಒತ್ತುವರಿ ಮಾಡಿಕೊಂಡಿರುವ ಜಾಗಕ್ಕೆ ಹಕ್ಕುಪತ್ರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

ಕಂದಾಯ ಸಚಿವರು ಕೊಡಗು ಜಿಲ್ಲೆಗೆ ಆಗಮಿಸಿದಾಗ ಬಡವರಿಗೆ ನಿವೇಶನ ಹಂಚಿಕೆ ಮಾಡುವ ಬಗ್ಗೆಯೂ ಚರ್ಚೆ ನಡೆಸಬೇಕು. ಜಿಲ್ಲೆಯಲ್ಲಿರುವ ಪೈಸಾರಿ ಜಾಗಗಳನ್ನು ಸರ್ವೆ ಮಾಡಿ ಬಡವರಿಗೆ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಬೇಕು. ಒತ್ತುವರಿ ಜಮೀನನ್ನು 30 ವರ್ಷಗಳಿಗೆ ಗುತ್ತಿಗೆ ನೀಡುವ ಸಂದರ್ಭ ನಿಯಮ ದುರುಪಯೋಗವಾಗುವ ಸಾಧ್ಯತೆಗಳಿರುವುದರಿಂದ ಸರಕಾರ ಎಚ್ಚರಿಕೆಯಿಂದ ವರ್ತಿಸಬೇಕು ಎಂದು ಕೆ.ಜಿ.ಪೀಟರ್ ಆಗ್ರಹಿಸಿದ್ದಾರೆ.

ಮಾನಸ ತಿಮ್ಮಯ್ಯರಿಗೆ ಅತ್ಯುತ್ತಮ ಮಹಿಳಾ ಪ್ರಶಸ್ತಿ

ಪೊನ್ನಂಪೇಟೆ, ಮೇ 8–ಗೋಣಿಕೊಪ್ಪಲಿನ ಕೂರ್ಗ್ ಪಬ್ಲಿಕ್ ಶಾಲೆ(ಕಾಪ್ಸ್) ಸಾರ್ವಜನಿಕ ಸಂಪರ್ಕ ವ್ಯವಸ್ಥಾಪಕರಾಗಿರುವ ಅಣ್ಣಳಮಾಡ ಮಾನಸ ತಿಮ್ಮಯ್ಯ ಅವರು ತರಬೇತಿ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ನೀಡಲಾಗುವ 2022ನೇ ಸಾಲಿನ 'ಅತ್ಯುತ್ತಮ ಮಹಿಳೆ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.



ಇತ್ತೀಚೆಗೆ ಹೈದರಾಬಾದಿನ ತೆಲಂಗಾಣದ ಹಯಾತ್ ಪ್ಲೇಸ್‌ನಲ್ಲಿ ನಡೆದ 3ನೇ ಅಂತಾರಾಷ್ಟ್ರೀಯ ಸ್ಫೂರ್ತಿದಾಯಕ ಮಹಿಳಾ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾನಸ ತಿಮ್ಮಯ್ಯ, ಈ ಪ್ರಶಸ್ತಿ ಸ್ವೀಕರಿಸಿದರು. ಈ ಪ್ರಶಸ್ತಿಗಾಗಿ ಸಲ್ಲಿಕೆಯಾಗಿದ್ದ ಒಟ್ಟು 17 ಲಕ್ಷ ನಾಮನಿರ್ದೇಶನಗಳ ಪೈಕಿ ಅಂತಿಮಗೊಂಡ ಅಗ್ರಗಣ್ಯರ ಪಟ್ಟಿಯಲ್ಲಿ ಮಾನಸ ತಿಮ್ಮಯ್ಯ ಸ್ಥಾನ ಗಿಟ್ಟಿಸಿಕೊಂಡ ಹಿನ್ನೆಲೆಯಲ್ಲಿ ತರಬೇತಿ ಮತ್ತು ಉದ್ಯೋಗ ಕ್ಷೇತ್ರದ ವಿಭಾಗದಿಂದ ಪ್ರಶಸ್ತಿಗಾಗಿ ಪರಿಗಣಿಸಲಾಗಿದೆ. ಮಾನವ ಸಂಪನ್ಮೂಲ ವೃತ್ತಿಪರರಾಗಿರುವ ಮಾನಸ ತಿಮ್ಮಯ್ಯ 2022ನೇ ಸಾಲಿನಲ್ಲೇ ಇದೇ ಕ್ಷೇತ್ರದಿಂದ 3 ವಿಶೇಷ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ಕ್ರಿಯಾಶೀಲ ಸಾಧಕಿಯರಿಗಾಗಿ ನೀಡಲಾಗುವ 'ಜಾಗತಿಕ ಸಾಧಕಿ' ಪ್ರಶಸ್ತಿ, ಅಖಿಲ ಭಾರತ ಮಹಿಳಾ ಸಾಧಕಿಯರ ವೇದಿಕೆಯಿಂದ ನೀಡಲಾಗುವ 'ಭವಿಷ್ಯದ ಮಹಿಳೆ' ಪ್ರಶಸ್ತಿ ಮತ್ತು ಇನ್‌ಕ್ರೆಡಿಬಲ್ ಭಾರತೀಯ ಮಹಿಳಾ ಸಂಪನ್ಮೂಲ ವೃತ್ತಿಪರರ ಒಕ್ಕೂಟ ಹಾಗೂ ಸ್ಟಾರ್ ಇಂಡಿಯಾ ಸಂಸ್ಥೆಯಿಂದ ನೀಡಲಾಗುವ 'ರಿಯಲ್ ಸೂಪರ್ ವುಮನ್–2022'ರ ಪ್ರಶಸ್ತಿಯನ್ನು ಮಾನಸ ತಿಮ್ಮಯ್ಯ ಅವರು ತಮ್ಮದಾಗಿಸಿಕೊಂಡಿದ್ದಾರೆ. ಅಣ್ಣಳಮಾಡ ರಾಬಿನ್ ತಿಮ್ಮಯ್ಯನವರ ಪತ್ನಿಯಾಗಿರುವ ಮಾನಸ ಅವರು, ಕೆ.ಪಿ.ರಾಜು ಮತ್ತು ಪ್ರಮೀಳಾ ದಂಪತಿಯ ಪುತ್ರಿಯಾಗಿದ್ದಾರೆ.

ವಿದ್ಯುತ್ ಸ್ಪರ್ಶ; ಆಟೋ ಚಾಲಕ ಸಾವು





ಪ್ರತಿಭಟನಾನಿರತ ಮೃತನ ಕುಟುಂಬಸ್ಥರು, ಆಟೋ ಚಾಲಕರು. ಮೃತ ದಿವಾಕರ್

ವಿರಾಜಪೇಟೆ, ಮೇ 8– ವಿದ್ಯುತ್ ಸ್ಪರ್ಶದಿಂದ ಆಟೋ ಚಾಲಕ ಸಾವನ್ನಪ್ಪಿರುವ ಘಟನೆ ಪಟ್ಟಣದ ಗಾಂಧಿನಗರದಲ್ಲಿ ಭಾನುವಾರ ನಡೆದಿದೆ.

ವಿರಾಜಪೇಟೆಯ ಶಿವಕೇರಿ ನಿವಾಸಿ ಆಟೋಚಾಲಕ ದಿವಾಕರ್(58)ಮೃತಪಟ್ಟವರು. ಇವರು ಮನೆಯ ರಸ್ತೆಬದಿಯಲ್ಲಿ ತಮ್ಮ ಆಟೋ ನಿಲ್ಲಿಸಿದ್ದರು. ಸಮೀಪದಲ್ಲಿದ್ದ ತೆಂಗಿನ ಮರದ ಗರಿ 11 ಕೆ.ವಿ. ವಿದ್ಯುತ್ ಮಾರ್ಗದ ಮೇಲೆ ಬಿದ್ದು ತಂತಿ ತುಂಡಾಗಿ ಆಟೋರಿಕ್ಷಾದ ಹಿಂಬದಿ ಚಕ್ರಕ್ಕೆ ಸಿಲುಕಿದೆ. ಇದರಿಂದ ಬೆಂಕಿ ಹೊತ್ತುಕೊಂಡಿದೆ. ಇದನ್ನು ಗಮನಿಸಿದ ದಿವಾಕರ್ ಆತಂಕದಿಂದ ದೊಣ್ಣೆಯಿಂದ ತಂತಿಯನ್ನು ಬದಿಗೆ ಸರಿಸಲು ಪ್ರಯತ್ನಿಸಿದ್ದಾರೆ. ಈ ವೇಳೆ ವಿದ್ಯುತ್ ಪ್ರವಹಿಸಿ ದಿವಾಕರ್ ಸ್ಥಳದಲ್ಲಿಯೇ ಅಸುನೀಗಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ತಕ್ಷಣ ಸ್ಥಳೀಯರು ನಿವಾಸಿಗೆ ಸೆಸ್ಕ್‌ಗೆ ಸುದ್ದಿ ಮುಟ್ಟಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರ ಟಿ.ಎಸ್.ಸುರೇಶ್, ನಗರ ಠಾಣಾಧಿಕಾರಿ ಜಗದೀಶ್ ದೂಳ್ ಶೆಟ್ಟಿ ಸ್ಥಳಕ್ಕಾಗಮಿಸಿ ಪರಿಶೀಲಿಸಿದರು. ಬಳಿಕ ಮೃತದೇಹವನ್ನು ಪಟ್ಟಣದ ತಾಲೂಕು ಆಸ್ಪತ್ರೆ ಶವಾಗಾರರಕ್ಕೆ ಕಳುಹಿಸಲಾಯಿತು.

ಆಟೋ ಚಾಲಕರಿಂದ ಪ್ರತಿಭಟನೆ: ಮೃತದೇಹವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಾಗಾರದಲ್ಲಿರಿಸಿದ್ದ ಸಂದರ್ಭ ಮೃತರ ಕುಟುಂಬದವರು, ಆಟೋ ಚಾಲಕರ ಸಂಘದ ಪದಾಧಿಕಾರಿಗಳು ಜಮಾಯಿಸಿ ಸೆಸ್ಕ್ ವಿರುದ್ಧ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು. ಮೃತನ ಕುಟುಂಬಕ್ಕೆ ಸ್ಥಳದಲ್ಲಿಯೇ ಪರಿಹಾರ ನೀಡುವಂತೆ ಒತ್ತಾಯಿಸಿದರು. ಸೆಸ್ಕ್ ಎಎಇ ಸುರೇಶ್ ಮಾತನಾಡಿ, ಸ್ಥಳದಲ್ಲಿಯೇ ಪರಿಹಾರ ನೀಡಲು ಸಾಧ್ಯವಿಲ್ಲ. ಇನ್ನು ಮೂರು ದಿನಗಳಲ್ಲಿ ಮೃತರ ಕುಟುಂಬಕ್ಕೆ 5 ಲಕ್ಷ ರೂ. ಪರಿಹಾರ ನೀಡುವುದಾಗಿ ಭರವಸೆ ನೀಡಿದರು. ಮೃತರು ಪತ್ನಿ, ಪುತ್ರ ಹಾಗೂ ಪುತ್ರಿಯನ್ನು ಅಗಲಿದ್ದಾರೆ. ದಿವಾಕರ್ ಪತ್ನಿ ಶೋಭಾ ದೂರಿನ ಮೇರೆಗೆ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನೆ ದಂತ ಮಾರಾಟಗಾರರ ಬಂಧನ





ಮಡಿಕೇರಿ,ಎ.8–ಆನೆ ದಂತದಲ್ಲಿ ಸುಂದರವಾಗಿ ಕೆತ್ತಲಾಗಿರುವ ಟ್ರೋಫಿ ಮಾದರಿಯನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕ ಬಂಧಿಸಿದೆ.

ರಫೀಕ್ ಅಹಮದ್ ಖಾನ್ ಮತ್ತು ಫಾಜಿಲ್ ಖಾನ್ ಎಂಬವರೇ ಬಂಧಿತ ಆರೋಪಿಗಳು.

ಘಟನೆ ಹಿನ್ನೆಲೆ: ಮಡಿಕೇರಿ–ಮೈಸೂರು ರಾಷ್ಟ್ರೀಯ ಹೆದ್ದಾರಿಯ ಚೈನ್‌ಗೇಟ್ ಬಳಿಯಲ್ಲಿರುವ ಹಿಂದೂ ರುದ್ರಭೂಮಿಯ ಮುಂಭಾಗದ ರಸ್ತೆಯಲ್ಲಿ ಇಬ್ಬರು ವ್ಯಕ್ತಿಗಳು ಅಕ್ರಮವಾಗಿ ಆನೆ ದಂತದ ಟ್ರೋಫಿಯನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಮಡಿಕೇರಿ ತಾಲೂಕು ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳಕ್ಕೆ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ಸಿಬ್ಬಂದಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಮಾಲು ಸಹಿತ ಬಂಧಿಸಿದ್ದಾರೆ. ಆರೋಪಿಗಳ ವಶದಲ್ಲಿದ್ದ ಒಂದು ಆನೆ ದಂತದ ಟ್ರೋಫಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಿಐಡಿ ಪೊಲೀಸ್ ಅರಣ್ಯ ಘಟಕದ ಹೆಚ್ಚುವರಿ ಪೊಲೀಸ್ ಮಹಾನಿರೀಕ್ಷಕ ಕೆ.ವಿ.ಶರತ್ ಚಂದ್ರ ನಿರ್ದೇಶನದ ಮೇರೆಗೆ, ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಘಟಕದ ಪ್ರಭಾರ ಅಧೀಕ್ಷಕ ಎನ್.ಟಿ.ಶ್ರೀನಿವಾಸ್ ರೆಡ್ಡಿ ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮಡಿಕೇರಿ ಸಿಐಡಿ ಪೊಲೀಸ್ ಅರಣ್ಯ ಸಂಚಾರಿ ದಳದ ಉಪ ನಿರೀಕ್ಷಕಿ ಸಿ.ಯು. ಸವಿ, ಸಿಬ್ಬಂದಿ ಶೇಖರ್, ರಾಜೇಶ್, ರಾಘವೇಂದ್ರ, ಯೋಗೇಶ್, ಮೋಹನ, ಸ್ವಾಮಿ ಮತ್ತು ಮಂಜುನಾಥ್ ಭಾಗವಹಿಸಿದ್ದರು.

ಅಮೃತ ಮೊಗೇರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



ಮಡಿಕೇರಿ, ಮೇ 8– ಸಿದ್ದಾಪುರ ಅಮೃತ ಯುವ ಮೊಗೇರ ಸಂಘದ ವತಿಯಿಂದ ಅಮೃತ ಮೊಗೇರ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ದೊರೆಯಿತು.

ಅಮ್ಮತ್ತಿ ಸರಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಸಭಾ ಕಾರ್ಯಕ್ರಮವನ್ನು ಮೊಗೇರ ಸಮಾಜದ ಸ್ಥಾಪಕಾಧ್ಯಕ್ಷ ಟಿ.ಸದಾನಂದ ಮಾಸ್ಟರ್ ಉದ್ಘಾಟಿಸಿದರು. ಮೊಗೇರ ಸಮಾಜದ ಬಂಧುಗಳು ಕ್ರೀಡಾಕೂಟಗಳ ಮೂಲಕ ಸಂಘಟಿತರಾಗುತ್ತಿದ್ದಾರೆ. ಯುವ ಸಮೂಹ ಕ್ರೀಡೆಯೊಂದಿಗೆ ಸಂಘಟನೆಗೂ ಆಸಕ್ತಿ ವಹಿಸಬೇಕು, ಸಮುದಾಯದ ಬೆಳವಣಿಗೆಗೆ ಕೈಜೋಡಿಸಬೇಕು ಎಂದು ಕರೆ ನೀಡಿದರು.

ತುಳು ಸಾಹಿತ್ಯ ಅಕಾಡೆಮಿ ಸದಸ್ಯ ಪಿ.ಎಂ. ರವಿ ಮಾತನಾಡಿ, ಸಂಘಟನೆಯಿಂದ ಮೊಗೇರ ಸಮಾಜದ ಅಭಿವೃದ್ಧಿ ಸಾಧ್ಯ ಎಂದರು. ಮೊಗೇರ ಸಮುದಾಯ ಎಲ್ಲಾ ಕ್ಷೇತ್ರದಲ್ಲೂ ಮುಂದೆ ಬರಬೇಕಾದರೆ ಯುವಕರು ಸಂಘಟನೆಯನ್ನು ಬಲಪಡಿಸಬೇಕು. ನಮ್ಮ ಸಂಸ್ಕೃತಿ, ಪದ್ಧತಿ, ಪರಂಪರೆಯನ್ನು ಉಳಿಸಿ, ಬೆಳೆಸುವ ಮೂಲಕ ಜನಾಂಗದ ಅಭಿವೃದ್ಧಿಗೆ ಪಣ ತೊಡಬೇಕೆಂದು ತಿಳಿಸಿದರು.

ಅಮೃತ ಯುವ ಮೊಗೇರ ಸಂಘದ ಅಧ್ಯಕ್ಷ ಪಿ.ಬಿ.ಮಂಜು, ವಿರಾಜಪೇಟೆ ತಾಲೂಕು ಮೊಗೇರ ಸಮಾಜದ ಗೌರವಾಧ್ಯಕ್ಷ ಜಿ.ಮೋಹನ್, ಅಮ್ಮತ್ತಿ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ಸುಮಿತ್ರ, ಕ್ರೀಡಾಧ್ಯಕ್ಷ ರಮೇಶ್, ಅಮೃತ ಯುವ ಮೊಗೇರ ಸಂಘದ ಉಪಾಧ್ಯಕ್ಷ ಮಣಿ, ಕಾರ್ಯದರ್ಶಿಗಳಾದ ವಿಶ್ವನಾಥ್, ನಾರಾಯಣ, ಗೌರವಾಧ್ಯಕ್ಷ ಎಂ.ಜಿ. ಚಂದ್ರ, ಪದಾಧಿಕಾರಿಗಳಾದ ರಘು, ಜನಾರ್ಧನ, ಗಣೇಶ್, ಮನು, ಚಂದ್ರ, ಮಹೇಶ್, ಕೃಷ್ಣ, ರಘು ರಾಮು, ಪದ್ಮನಾಭ, ಅರುಣ್ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು. ಕ್ರೀಡಾಕೂಟ ಮೂರು ದಿನಗಳ ಕಾಲ ನಡೆಯಲಿದೆ.

ಮಳೆ ಹಾನಿ ಪರಿಶೀಲಿಸಿದ ಬೋಪಯ್ಯ

ನಾಪೋಕ್ಲು, ಮೇ 8(ದುಗ್ಗಳ)– ಶುಕ್ರವಾರ ಸುರಿದ ಭಾರೀ ಮಳೆ–ಗಾಳಿಯಿಂದ ಕೊಳ ಕೇರಿ, ಬೇತು ಮತ್ತು ನಾಪೋಕ್ಲು ನಗರದ ಹಾನಿಗೊಳಗಳದ ಮನೆಗಳು ಹಾಗೂ ಮಕ್ಕಿ ದೇವಾಲಯದ ಕೆರೆ ಸ್ಥಳಕ್ಕೆ ಕ್ಷೇತ್ರ ಶಾಸಕ ಕೆ.ಜಿ.ಬೋಪಯ್ಯ ಭೇಟಿ ನೀಡಿ, ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಅವರು ಮಳೆಯಿಂದ ಹಾನಿಗೊಳಗಾದ ಕುಟುಂಬದವರಿಗೆ ಸರ್ಕಾರದಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು. ಈ ಸಂದರ್ಭ ಕಂದಾಯ ಪರಿವೀಕ್ಷಕ ರವಿಕುಮಾರ್, ಅಂಬಿ ಕಾರ್ಯಪ್ಪ, ಮನು ಮಹೇಶ್, ನಾಣಯ್ಯ, ಗ್ರಾಪಂ ಸದಸ್ಯ ಸಾಬ ನಾಣಯ್ಯ, ಶ್ಯಾಮ್ ಬೋಪಣ್ಣ ಮತ್ತಿತರರಿದ್ದರು.



ನಾಪೋಕ್ಲುವಿನಲ್ಲಿ ಭಾರೀ ಮಳೆ ಗಾಳಿಯಿಂದ ಹಾನಿಗೀಡಾದ ಸ್ಥಳಗಳನ್ನು ಶಾಸಕ ಕೆ.ಜಿ. ಬೋಪಯ್ಯ ಪರಿಶೀಲಿಸಿದರು.

ಶರಣ್ಯ, ರಾಜೇಶ್ವರಿಗೆ ದೃಶ್ಯ ಮಾಧ್ಯಮ ಪದವಿಯಲ್ಲಿ 3ನೇ ರ‍್ಯಾಂಕ್

ಮಡಿಕೇರಿ, ಮೇ 8– ಮೈಸೂರಿನ ಅಮೃತ ವಿಶ್ವ ವಿದ್ಯಾಪೀಠದ ದೃಶ್ಯ ಮಾಧ್ಯಮ ಪದವಿಯಲ್ಲಿ 3ನೇ ರ‍್ಯಾಂಕ್‌ನ್ನು ಶರಣ್ಯ ರಾಜೇಶ್ವರಿ ಅವರು ಪಡೆದಿದ್ದಾರೆ. ಶರಣ್ಯ ರಾಜೇಶ್ವರಿ ಅವರು ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಸ್.ರಮೇಶ್ ಹೊಳ್ಳ ಅವರ ಪುತ್ರಿ.



19 ಲಕ್ಷ ಇವಿಎಂ ಯಂತ್ರಗಳು ಕಾಣೆ, ಸಭಾಧ್ಯಕ್ಷರಿಗೆ ಪುರಾವೆ ಸಲ್ಲಿಸಿದ ಕಾಂಗ್ರೆಸ್

ಬೆಂಗಳೂರು, ಮೇ 8– 19 ಲಕ್ಷ ಇವಿಎಂ ಯಂತ್ರಗಳು ಕಾಣೆಯಾಗಿರುವ ಬಗ್ಗೆ ಪುರಾವೆಗಳು ಮತ್ತು ಕಾಗದ ಪತ್ರಗಳನ್ನು ಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಕಾಂಗ್ರೆಸ್ ಸಲ್ಲಿಸಿದೆ. ಈ ಕುರಿತು ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಕಾಂಗ್ರೆಸ್ ಹಿರಿಯ ಮುಖಂಡ ಹೆಚ್.ಕೆ.ಪಾಟೀಲ್, ಇಂದು ನಮ್ಮ ಸಭಾಧ್ಯಕ್ಷರನ್ನು ಭೇಟಿ ಮಾಡಿದ್ದೇನೆ. 19 ಲಕ್ಷ ಇವಿಎಂ ಯಂತ್ರಗಳು ನಾಪತ್ತೆಯಾಗಿರುವ ಬಗ್ಗೆ ಪುರಾವೆಗಳು ಮತ್ತು ಕಾಗದ ಪತ್ರಗಳನ್ನು ನೀಡಿರುವುದಾಗಿ ತಿಳಿಸಿದರು.



19 ಲಕ್ಷ ಇವಿಎಂ ಯಂತ್ರಗಳು ಕಾಣೆಯಾಗಿರುವ ಬಗ್ಗೆ ಕೇಂದ್ರ ಸರ್ಕಾರ ನ್ಯಾಯಾಂಗ ತನಿಖೆ ಮಾಡಬೇಕು ಎಂದು ಒತ್ತಾಯಿಸಲಾಗಿದೆ. ಇದಕ್ಕೆ ಪೂರಕವಾಗಿ 2,750 ಪುಟಗಳ ಕಾಗದ ಪತ್ರಗಳನ್ನು ಸಲ್ಲಿಸಲಾಗಿದೆ. ಮನೋರಂಜನ್ ಸಂತೋಷ್ ಪಿಐಎಲ್ ಮಾಡಿದ್ರು ಅದರ ಮಾಹಿತಿಗಳನ್ನು ಸ್ಪೀಕರ್ ಅವರಿಗೆ ಸಲ್ಲಿಕೆ ಮಾಡಿದ್ದೇನೆ ಎಂದರು.

ಇಂದು ಜೆಎಸ್‌ಎಸ್ ಕಲಾ, ವಾಣಿಜ್ಯ, ವಿಜ್ಞಾನ ಕಾಲೇಜಿನ ಕ್ರೀಡಾ, ಸಾಂಸ್ಕೃತಿಕ ವೇದಿಕೆ ಉದ್ಘಾಟನೆ

ಮೈಸೂರು, ಮೇ 8–ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸ್ನಾತಕೋತ್ತರ ವಿಭಾಗದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಉದ್ಘಾಟನಾ ಸಮಾರಂಭ ಮೇ 9ರ ಸೋಮವಾರ ಬೆಳಗ್ಗೆ 11 ಗಂಟೆಗೆ ಸುವರ್ಣ ಮಹೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಆರ್.ಶಿವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜು ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಮೈಸೂರು ಕೃಷ್ಣಮೂರ್ತಿ ಆಗಮಿಸಲಿದ್ದು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರೊ.ಸಾಂಬಶಿವಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರಾಂಶುಪಾಲ ಪ್ರೊ. ವಿಜಯೇಂದ್ರಕುಮಾರ್ ಉಪಸ್ಥಿತರಿರುವರು.

ಒಂದನೇ ಪುಟದಿಂದ

ಯುದ್ಧ ಸ್ಮಾರಕ ನಿರ್ಮಾಣಕ್ಕೆ ಸಿದ್ಧತೆ



ಮೈಸೂರು ಜಿಲ್ಲಾಧಿಕಾರಿ ಕಚೇರಿ ಬಳಿ ಎನ್‌ಸಿಸಿ ಪೆರೇಡ್ ಮೈದಾನದಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ತಂದಿರುವ ಬೃಹತ್ ಕಲ್ಲುಗಳು

ಶಂಕುಸ್ಥಾಪನೆ ನೆರವೇರಲಿದೆ ಎಂದು ಮೂಲಗಳು ಖಚಿತಪಡಿಸಿವೆ.

2000ರಲ್ಲಿ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಒತ್ತಾಯಿಸಿ ವೀಕೇರ್ ನಿವೃತ್ತ ಸೈನಿಕರ ಟ್ರಸ್ಟ್‌ನ ಎಂ.ಎನ್.ಸುಬ್ರಹ್ಮಣಿ ರಾಜ್ಯ ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದರು. 2010ರಲ್ಲಿ ಮತ್ತೊಮ್ಮೆ ಮನವಿ ಸಲ್ಲಿಸಿದ ಪರಿಣಾಮ ಯುದ್ಧ ಸ್ಮಾರಕ ನಿರ್ಮಾಣಕ್ಕೆ ಸ್ಥಳ ಹುಡುಕುವ ಪ್ರಕ್ರಿಯೆ ನಡೆಸಲಾಗಿತ್ತು. ನಂತರ ಅದು ನೆನೆಗುದಿಗೆ ಬಿದ್ದಿತ್ತು. ಆದರೆ 2012 ರಲ್ಲಿ ಮತ್ತೆ ಸ್ಮಾರಕ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಕ್ರಿಯೆ ಆರಂಭವಾಗಿತ್ತು. 2016ರಲ್ಲಿ ನಿವೃತ್ತ ಯೋಧರೂ ಆಗಿರುವ ಮೈಸೂರು ಉಪ ವಿಭಾಗಾಧಿಕಾರಿಯಾಗಿದ್ದ ಸಿ.ಎಲ್.ಆನಂದ್(ಹಾಲಿ ಬಿಡಿಎ ಕಾರ್ಯದರ್ಶಿ) ಅವರು ಯುದ್ಧ ಸ್ಮಾರಕ ನಿರ್ಮಾಣಕ್ಕೆ ಅಗತ್ಯವಾದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ್ದು, ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರು. ಈ ಹಿನ್ನೆಲೆಯಲ್ಲಿ ಸ್ಮಾರಕ ನಿರ್ಮಾಣದ ಹಾದಿ ಸುಗಮವಾಗಿತ್ತು.

ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯ ಎಡ ಭಾಗದಲ್ಲಿರುವ ಸುಮಾರು ಐದು ಎಕರೆ ವಿಸ್ತೀರ್ಣದ ಎನ್‌ಸಿಸಿ ಪರೇಡ್ ಮೈದಾನವನ್ನು 4 ಚದರ ಅಡಿ ವಿಸ್ತೀರ್ಣದಲ್ಲಿ ಯುದ್ಧಸ್ಮಾರಕ ನಿರ್ಮಿಸಲು ಆಯ್ಕೆ ಮಾಡಿಕೊಳ್ಳಲಾಗಿದ್ದು, ಅಲ್ಲದೆ ಅಂದು ಜಿಲ್ಲಾಧಿಕಾರಿಯಾಗಿದ್ದ ಡಿ.ರಂದೀಪ್ ಅವರಿಂದ ಆ ಜಾಗವನ್ನು ಮಂಜೂರು ಮಾಡಿಸಿಕೊಳ್ಳಲಾಗಿತ್ತು. ಈ ಹಿಂದೆ ಮೇಜರ್ ಜನರಲ್ ಸಿ.ಕೆ.ಕರುಂಬಯ್ಯ ನೇತೃತ್ವದಲ್ಲಿ ರಚಿಸಲಾಗಿದ್ದ ಯುದ್ಧಸ್ಮಾರಕ ನಿರ್ಮಾಣ ಸಮಿತಿಯ ಸಭೆಯಲ್ಲಿ ಸಿ.ಎಲ್.ಆನಂದ್ ಅವರು, ಜಿಲ್ಲಾಧಿಕಾರಿಗಳ ಕಚೇರಿ ಪಕ್ಕದಲ್ಲಿರುವ ಮೈದಾನದಲ್ಲಿ ಸ್ಮಾರಕ ನಿರ್ಮಾಣ ನಕ್ಷೆಯನ್ನು ಹಾಜರುಪಡಿಸಿದ್ದರು. ಇದಕ್ಕೆ ಯುದ್ಧಸ್ಮಾರಕ ಸಮಿತಿ ಒಪ್ಪಿಗೆ ಸೂಚಿಸಿದ್ದರಿಂದ ಜಿಲ್ಲಾಡಳಿತ ಉಪವಿಭಾಗಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದಕ್ಕೆ ಅಂದಿನ ಸರ್ಕಾರ ಯುದ್ಧ ಸ್ಮಾರಕ ನಿರ್ಮಾಣಕ್ಕೆ 1.41 ಕೋಟಿ ರೂ., ಅನುಧಾನ ಬಿಡುಗಡೆ ಮಾಡಲು ಸಮ್ಮತಿಸಿ, ಮುಂಗಡವಾಗಿ 50 ಲಕ್ಷ ರೂ. ಬಿಡುಗಡೆ ಮಾಡಿತ್ತು.

ಒಂದೂವರೆ ಕೋಟಿ ರೂ. ಮೌಲ್ಯದ ಕಲ್ಲು: ಸ್ಮಾರಕ ನಿರ್ಮಾಣಕ್ಕಾಗಿ ಚಾಮರಾಜನಗರ ಜಿಲ್ಲೆಯ ಕ್ವಾರಿಯಿಂದ 33 ಕ್ಯೂಬಿಕ್ ಮೀಟರ್ ಉತ್ಕೃಷ್ಟ ಕಲ್ಲುಗಳ ಸ್ಲಾಬ್ ಮೈಸೂರಿಗೆ ತರಲಾಗಿದೆ. ಸ್ಮಾರಕವನ್ನು ಕಾಂಕ್ರಿಟ್ ಕಟ್ಟಡವಾಗಿಸಬಾರದೆಂಬ ಉದ್ದೇಶದಿಂದ ಉತ್ಕೃಷ್ಟ ಕಲ್ಲಿನ ಸ್ಲಾಬ್ ಬಳಸಿ ಪಾರಂಪರಿಕ ಶೈಲಿಯಲ್ಲಿ ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಇದಕ್ಕಾಗಿ ಚಾಮರಾಜನಗರ ಎಡಿಸಿಯಾಗಿದ್ದ ಸಿ.ಎಲ್.ಆನಂದ್ ಚಾಮರಾಜನಗರದ ಜಿಲ್ಲೆಯ ಅಮಚವಾಡಿ ನಿವಾಸಿ ಕ್ವಾರಿ ಮಾಲೀಕರಾದ ಹೆಚ್.ಎಂ. ಪುಟ್ಟಮಾದಯ್ಯ ಬಿನ್ ಪಟೇಲ್ ಮಾದಪ್ಪ (80) ಎಂಬುವರು 33 ಕ್ಯೂಬಿಕ್ ಮೀಟರ್ ಕಪ್ಪು ಶಿಲೆ(ಉತ್ಕೃಷ್ಟ ಕಲ್ಲ)ಯನ್ನು ಸರ್ಕಾರಕ್ಕೆ ರಾಜಧನ ಹಾಗೂ ವಿವಿಧ ಶುಲ್ಕ ತಾವೇ ಪಾವತಿಸಿ ಉಚಿತವಾಗಿ ಸ್ಮಾರಕ ನಿರ್ಮಾಣಕ್ಕೆ ಕೊಡುಗೆ ಕೊಡಿಸಿದ್ದರು. ಅಲ್ಲದೆ ಕ್ವಾರಿಯಿಂದ 300 ಟನ್ ತೂಕದ ಕಚ್ಚಾಶಿಲೆಯನ್ನು ಚಾಮರಾಜನಗರದ ಎಸ್‌ವಿಜಿ ಗ್ರಾನೈಟ್ಸ್ ಮಾಲೀಕ ಎ.ಶ್ರೀನಾಥ್ ಬಿನ್ ಶಿವಶಂಕರ್‌ರೆಡ್ಡಿ ಯಾವುದೇ ಶುಲ್ಕ ಪಡೆಯದೇ ಸ್ಮಾರಕ ನಿರ್ಮಾಣಕ್ಕೆ ಅನುಗುಣಾಗಿ ಬೇಕಾದ ಆಕಾರದಲ್ಲಿ ಕತ್ತರಿಸಿಕೊಟ್ಟಿದ್ದರು. ಕಲ್ಲು ಕತ್ತರಿಸಲು ನೀಡಬೇಕಾಗಿದ್ದ ಶುಲ್ಕ ಸೇರಿದಂತೆ ಸುಮಾರು ಒಂದೂವರೆ ಕೋಟಿ ರೂ. ವೆಚ್ಚದ 300 ಟನ್ ತೂಕದ ಕಲ್ಲನ್ನು ಸ್ಮಾರಕ ನಿರ್ಮಾಣದ ಸ್ಥಳಕ್ಕೆ ಕಳೆದ 5 ತಿಂಗಳ ಹಿಂದೆಯೇ ತರಲಾಗಿದೆ.

48 ಅಡಿ ಎತ್ತರ: ಸ್ಮಾರಕ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಬಳಿಕ 45 ಅಡಿ ಎತ್ತರ ಇರಲಿದೆ. 33 ಕ್ಯೂಬಿಕ್ ಮೀಟರ್ ಎತ್ತರ ಕಲ್ಲನ್ನು ಕೂರಿಸಿದರೆ 33 ಅಡಿ ಎತ್ತರ ಆಗಲಿದೆ. ಅದರ ಕೆಳಗೆ 10 ಅಡಿ ಫೌಂಡೇಷನ್ ಇರುತ್ತದೆ. ಕಲ್ಲಿನ ಮೇಲೆ 5 ಅಡಿ ಎತ್ತರ ಅಶೋಕ ಲಾಂಛನ ಅಳವಡಿಸಲಾಗುತ್ತದೆ. ದೆಹಲಿಯ ನ್ಯಾಷನಲ್ ಮ್ಯೂಸಿಯಂನಲ್ಲಿರುವ ಸಾರನಾಥ ಅಶೋಕ್ ಎಂಬ್ಲಂ ಅನ್ನು ಮೈಸೂರಿನ ಯುದ್ಧ ಸ್ಮಾರಕದಲ್ಲಿ ಅಳವಡಿಸಲಾಗುತ್ತದೆ. ಸ್ಮಾರಕಕ್ಕೆ ಬಳಸುವ ಕಲ್ಲಿಗೆ ಪಾಲಿಶ್ ಮಾಡಿದ ನಂತರ ಅಮೇರಿಕನ್ ವೈಟ್ ಪೇಯಿಂಟ್‌ನಿಂದ ಅಕ್ಷರ ಬರೆಯುವುದರಿಂದ ಲೈಫ್ ಲಾಂಗ್ ಅಕ್ಷರ ಮಾಸುವುದಿಲ್ಲ. ಪಾಲಿಶ್ ಮಾಡಿದ ನಂತರ ಜೆಟ್ ಬ್ಲಾಕ್ ಕಲರ್ ಆಗುತ್ತದೆ.

ಎಸ್‌ಎಸ್‌ಎಲ್‌ಸಿ ಫಲಿತಾಂಶ

ಏ.30ರಂದು ಎಲ್ಲಾ ಡಿಡಿಪಿಐಗಳಿಗೆ ಸುತ್ತೋಲೆ ನೀಡಲಾಗಿದೆ. ಪೂರ್ವಾನುಮತಿ ಪಡೆಯದೇ ಎಸ್‌ಎಸ್‌ಎಲ್‌ಸಿ ಫಲಿತಾಂಶ ವಿಳಂಬಕ್ಕೆ ಕಾರಣವಾಗಿರುವ ಶಿಕ್ಷಕರ ಪಟ್ಟಿಯನ್ನು ತಯಾರಿಸಿ ಶಿಸ್ತು ಕ್ರಮ ಜರುಗಿಸಬೇಕು ಎಂದು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷೆ ಮಂಡಳಿ ನಿರ್ದೇಶಕ (ಪರೀಕ್ಷೆಗಳು) ಗೋಪಾಲಕೃಷ್ಣ ಸೂಚನೆ ನೀಡಿದ್ದಾರೆ. ನಿರೀಕ್ಷಿತ ಪ್ರಮಾಣದಲ್ಲಿ ಶಿಕ್ಷಕರು ಉತ್ತರ ಪತ್ರಿಕೆಗಳ ಮೌಲ್ಯಮಾಪನದಲ್ಲಿ ಪಾಲ್ಗೊಳ್ಳದ ಕಾರಣ ಫಲಿತಾಂಶ ಪ್ರಕಟ ದಿನಾಂಕವನ್ನು ಅನಿವಾರ್ಯವಾಗಿ ಮುಂದೂಡಲಾಗಿದೆ. ಮೇ 15ರೊಳಗೆ ಫಲಿತಾಂಶ ಪ್ರಕಟವಾಗುವ ನಿರೀಕ್ಷೆಯಿತ್ತು. ಇದೀಗ ಸಚಿವ ಬಿ.ಸಿ. ನಾಗೇಶ್ ಅವರೇ ಮೇ 3ನೇ ವಾರದಲ್ಲಿ ಫಲಿತಾಂಶ ಪ್ರಕಟವಾಗಲಿದೆ ಎಂದು ತಿಳಿಸಿದ್ದಾರೆ.

ಉದ್ಯಮಿ ಆತ್ಮಹತ್ಯೆ

ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ಸ್ ಅಧ್ಯಕ್ಷ ಅಪ್ಪಣ್ಣ ತನ್ನಿಂದ 8 ಲಕ್ಷ ರೂ. ಪಡೆದು ಅದನ್ನು ವಾಪಸ್ ಕೊಡದೇ ಮೋಸ ಮಾಡಿದ್ದಾರೆ. ನನ್ನ ಸಾವಿಗೆ ಇವರಿಬ್ಬರೇ ಕಾರಣರಾಗಿದ್ದು, ನನ್ನ ಕುಟುಂಬಕ್ಕೆ ನ್ಯಾಯ ಕೊಡಿಸಿ ಎಂದು ಶರತ್ ಡೆತ್‌ನೋಟ್ ಬರೆದಿಟ್ಟು ತಾನು ವಾಸವಿದ್ದ ಕೆಸರೆ ನಿವಾಸದಲ್ಲಿ ಕಳೆದ ಮಾ.18ರಂದು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಈ ಸಂಬಂಧ ಶರತ್ ಪತ್ನಿ ಕೃಪಾಲಿನಿ ನರಸಿಂಹರಾಜ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿದ್ದು, ತನ್ನ ಪತಿಗೆ ಸ್ವದೇಶಿ ಗ್ರೂಪ್ಸ್‌ನ ಪ್ರವೀಣ್ ಮತ್ತು ಅಪ್ಪಣ್ಣ ಮೋಸ ಮಾಡಿರುವುದಾಗಿ ಪತಿ ನನಗೆ ತಿಳಿಸಿದ್ದರು. ಮಾ.18ರಂದು ಬೆಳಗ್ಗೆ ವಾಟ್ಸಪ್ ವೀಡಿಯೋ ಕಾಲ್‌ನಲ್ಲಿ ನನ್ನ ಜೊತೆ ಮಾತನಾಡಿದ್ದು, ನಂತರ ಡೆತ್‌ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದಾರೆ ಎಂದು ತಿಳಿಸಿರುವುದಲ್ಲದೇ ಡೆತ್‌ನೋಟ್ ಅನ್ನು ಪೊಲೀಸರಿಗೆ ನೀಡಿ ಪ್ರವೀಣ್ ಮತ್ತು ಅಪ್ಪಣ್ಣ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಹೆಚ್.ಡಿ.ಕೋಟೆ ಕಾಂಗ್ರೆಸ್, ಜೆಡಿಎಸ್‌ನ ಕಾರ್ಯಕರ್ತರು ಬಿಜೆಪಿ ಸೇರ್ಪಡೆ

ಸಿದ್ದರಾಜು ಇಲ್ಲವೇ ಅಪ್ಪಣ್ಣ ಹೆಚ್.ಡಿ.ಕೋಟೆ ಅಭ್ಯರ್ಥಿ

ಮೈಸೂರು,ಮೇ 8(ಪಿಎಂ)– ಹೆಗ್ಗಡದೇವನ ಕೋಟೆ (ಹೆಚ್.ಡಿ.ಕೋಟೆ) ತಾಲೂಕಿನ ಕಾಂಗ್ರೆಸ್ ಮತ್ತು ಜೆಡಿಎಸ್‌ನ ನೂರಾರು ಕಾರ್ಯಕರ್ತರು ಭಾನುವಾರ ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಇನ್ನಿತರ ಬಿಜೆಪಿ ಮುಖಂಡರ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು.



ಇದೇ ವೇಳೆ ಮಾತನಾಡಿದ ಪ್ರತಾಪ್‌ಸಿಂಹ, ಮಹಿಳೆಯರು ಮತ್ತು ಬಡ ಕುಟುಂಬಗಳ ಶ್ರೇಯೋಭಿವೃದ್ಧಿಗಾಗಿ ಪ್ರಧಾನಿ ನರೇಂದ್ರ ಮೋದಿಯವರು ಹತ್ತು ಹಲವು ಕಲ್ಯಾಣ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇದನ್ನು ಅರಿತು ಮುಂದಿನ ದಿನಗಳಲ್ಲಿ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಆಶೀರ್ವಾದ ಮಾಡಬೇಕೆಂದು ಸೇರ್ಪಡೆಗೊಂಡ ಕಾರ್ಯಕರ್ತರು, ಕ್ಷೇತ್ರದ ಜನತೆಯಲ್ಲಿ ವಿನಂತಿಸಿದರಲ್ಲದೆ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿದ್ದರಾಜು, ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಅಧ್ಯಕ್ಷ ಅಪ್ಪಣ್ಣ ಅವರಿಗೆ ತಮ್ಮ ಬೆಂಬಲ ನೀಡಬೇಕೆಂದು ಕೋರಿದರು.

ಇಡೀ ದೇಶ ಪ್ರಧಾನಿ ನರೇಂದ್ರ ಮೋದಿಯವರಲ್ಲಿ ವಿಶ್ವಾಸ ಹೊಂದಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದೆ ನಮ್ಮ ಈ ಡಬಲ್ ಇಂಜಿನ್ ಸರ್ಕಾರ ಕೋವಿಡ್ ತೀವ್ರವಾಗಿದ್ದ ಕಾಲದಲ್ಲಿ ಜನತೆಯ ಜೀವ ಉಳಿಸಿದ್ದು, ಇನ್ನು ಮುಂದೆ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಒತ್ತು ನೀಡುವ ಮೂಲಕ ಜನತೆಗೆ ಉತ್ತಮ ಜೀವನ ಕಟ್ಟಿಕೊಳ್ಳಲು ನೆರವಾಗಲಿದೆ. ಹಾಗಾಗಿ ಮುಂದಿನ ದಿನಗಳಲ್ಲಿ ಬಿಜೆಪಿಗೆ ಕೋಟೆಯಲ್ಲಿ ಅಧಿಕಾರ ದೊರೆಯುವ ನಿಟ್ಟಿನಲ್ಲಿ ಕೆಲಸ ಮಾಡುವಂತೆ ಕಾರ್ಯಕರ್ತರಲ್ಲಿ ಮನವಿ ಮಾಡಿದರು.

ರಸ್ತೆ ಅಭಿವೃದ್ಧಿ: ಹೆಚ್‌ಡಿ ಕೋಟೆಯು ಇಡೀ ರಾಜ್ಯದಲ್ಲೇ ಅತ್ಯಂತ ಹಿಂದುಳಿದ ತಾಲೂಕುಗಳಲ್ಲಿ ಒಂದು. ಇಲ್ಲಿನ ಜನತೆಯ ಶ್ರೇಯೋಭಿವೃದ್ಧಿಗೆ ಒತ್ತು ನೀಡಬೇಕಿದೆ. ತಾಲೂಕಿನ ಜನತೆ ಬಿಜೆಪಿಗೆ ಆಶೀರ್ವದಿಸುವ ವಿಶ್ವಾಸ ಹೊಂದಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಮನವೊಲಿಸಿ, ಹೆಚ್.ಡಿ. ಕೋಟೆಯಿಂದ ಕೇರಳದ ಮಲಪುರಂ ಮಾರ್ಗವನ್ನು ಹೈವೇ ರಸ್ತೆಯಾಗಿ ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುವುದು. ನಮ್ಮ ಪಕ್ಷದ ಹಿರಿಯರಾದ ಕ್ಷೇತ್ರದ ಸಂಸದ ವಿ.ಶ್ರೀನಿವಾಸಪ್ರಸಾದ್ ನೇತೃತ್ವದಲ್ಲಿ ಈ ರಸ್ತೆ ಅಭಿವೃದ್ಧಿ ಕಾರ್ಯ ಕೈಗೆತ್ತಿಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಕಾಂಗ್ರೆಸ್, ಜೆಡಿಎಸ್ ಎಲ್ಲಾ ನೋಡಿ ಆಗಿದೆ. ಒಬ್ಬರು ತಾವು ಅಳುವುದರಿಂದಲೇ ಮಳೆ ಬರುತ್ತದೆ ಎಂದು ಭಾವಿಸಿದ್ದಾರೆ. ಇನ್ನೊಬ್ಬರು ಸಿದ್ದರಾಮಣ್ಣ (ಮಾಜಿ ಸಿಎಂ ಸಿದ್ದರಾಮಯ್ಯ) ಇದ್ದಾರೆ. ಅವರದು ಕೇವಲ ಉಡಾಫೆ ಮಾತುಗಳಷ್ಟೇ. ಇಂತಹವರ ಹಿಂದೆ ಎಷ್ಟು ದಿನ ಹೋಗುತ್ತೀರಿ? ಎಂದು ಪ್ರಶ್ನಿಸಿದರು.

ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿಯೂ ಆದ ಮಾಜಿ ಎಂಎಲ್‌ಸಿ ಸಿದ್ದರಾಜು ಮಾತನಾಡಿ, ನಾನು ಇಲ್ಲ ಅಪ್ಪಣ್ಣ ಇಬ್ಬರಲ್ಲಿ ಒಬ್ಬರು ಕೋಟೆಯಲ್ಲಿ ಅಭ್ಯರ್ಥಿ ಆಗಲಿದ್ದೇವೆ. ಮೂರನೇಯವರ ಬಗ್ಗೆ ಚಿಂತನೆಯನ್ನೇ ಮಾಡಬೇಡಿ. ನಿಮ್ಮೆಲ್ಲರ ಸಹಕಾರದಿಂದ ಬಿಜೆಪಿ ಹೆಚ್‌ಡಿ ಕೋಟೆಯಲ್ಲಿ ವಿಜಯೋತ್ಸವ ಆಚರಿಸಬೇಕು. ಇದಕ್ಕಾಗಿ ಗ್ರಾಮ ಗ್ರಾಮಗಳಲ್ಲಿ ಬಿಜೆಪಿ ಸೇರ್ಪಡೆಯಾಗಬೇಕು. ಇನ್ನು ಆರು ತಿಂಗಳವರೆಗೆ 'ಸೇರ್ಪಡೆ' ಎಂಬುದೇ ನಮ್ಮ ಮಂತ್ರ ಆಗಬೇಕು ಎಂದು ಹೇಳಿದರು.

ಜಂಗಲ್ ಲಾಡ್ಜ್ ಅಂಡ್ ರೆಸಾರ್ಟ್ ಅಧ್ಯಕ್ಷ ಅಪ್ಪಣ್ಣ ಮಾತನಾಡಿ, ಗ್ರಾಪಂ ಸದಸ್ಯರು, ಎಪಿಎಂಸಿ ಸದಸ್ಯರು ಸೇರಿದಂತೆ ಸುಮಾರು 800 ಮಂದಿ ಇಂದು ಬಿಜೆಪಿ ಸೇರ್ಪಡೆಗೊಂಡಿದ್ದಾರೆ. ಇದರಲ್ಲಿ ಶೇ.80ರಷ್ಟು ಜೆಡಿಎಸ್ ತೊರೆದು ಬಂದಿದ್ದರೆ, ಶೇ.20ರಷ್ಟು ಕಾಂಗ್ರೆಸ್‌ನಿಂದ ಬಂದಿದ್ದಾರೆ ಎಂದರು. ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ ಬಿಜೆಪಿ ನಗರಾಧ್ಯಕ್ಷ ಟಿ.ಎಸ್. ಶ್ರೀವತ್ಸ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಮತ್ತಿತರರು ಹಾಜರಿದ್ದರು.

ಬೊಮ್ಮಾಯಿ ಅವರನ್ನು ಅಪಾಯಿಂಟೆಡ್ ಅನ್ನುವ ನೈತಿಕತೆ ಸಿದ್ದರಾಮಯ್ಯಗೆ ಇಲ್ಲ

ಮೈಸೂರು,ಮೇ 8(ಪಿಎಂ)– ಬೊಮ್ಮಾಯಿ ಎಲೆಕ್ಟೆಡ್ ಸಿಎಂ ಅಲ್ಲ, ಅಪಾಯಿಂಟೆಡ್ ಸಿಎಂ ಎಂಬ ಮಾಜಿ ಸಿಎಂ ಸಿದ್ದರಾಮಯ್ಯ ಟೀಕೆ ಸಂಬಂಧ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಾ.ಜಿ.ಪರಮೇಶ್ವರ್ ಅವರನ್ನು ಕುತಂತ್ರದಿಂದ ಸೋಲಿಸಿ, ಮುಖ್ಯಮಂತ್ರಿ ಆಗಿದ್ದ ನಿಮಗೆ (ಸಿದ್ದರಾಮಯ್ಯ) ಈ ರೀತಿ ಮಾತನಾಡಲು ಕನಿಷ್ಠ ನೈತಿಕತೆಯೂ ಇಲ್ಲ. ನೀವು ಕೂಡ ಅಪಾಯಿಂಟೆಡ್ ಸಿಎಂ ಆಗಿದಿದ್ದು ಎಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯನವರನ್ನು 2013ರಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಕಾಂಗ್ರೆಸ್ ಘೋಷಣೆ ಮಾಡಿರಲಿಲ್ಲ. ಪಕ್ಷ ಅಧಿಕಾರಕ್ಕೆ ಬಂದರೆ ಕೆಪಿಸಿಸಿ ಅಧ್ಯಕ್ಷರಾದವರು ಮುಖ್ಯಮಂತ್ರಿ ಅಭ್ಯರ್ಥಿ ಆಗುವುದು ಕಾಂಗ್ರೆಸ್‌ನಲ್ಲಿರುವ ಸಂಪ್ರದಾಯ. ಆದರೆ ಸಿದ್ದರಾಮಯ್ಯನವರು ತಮ್ಮ ಸಮುದಾಯವನ್ನು ಎತ್ತುಕಟ್ಟಿ, ಕುತಂತ್ರದ ಮೂಲಕ ಕೊರಟಗೆರೆಯಲ್ಲಿ ಅಂದಿನ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಸೋಲಲು ಕಾರಣರಾದರು. ಆ ಮೂಲಕ ಸಿದ್ದರಾಮಯ್ಯ ಅಕ್ರಮವಾಗಿ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದರು ಎಂದು ಕಿಡಿಕಾರಿದರು.

ನಿಮ್ಮ (ಸಿದ್ದರಾಮಯ್ಯ) ಮನಮೋಹನ್ ಸಿಂಗ್ ಅವರನ್ನು ಹತ್ತು ವರ್ಷ ಅಪಾಯಿಂಟ್ ಮಾಡಿಕೊಂಡೇ ಅಲ್ಲವೇ ಸೋನಿಯಾ ಗಾಂಧಿ ದರ್ಬಾರ್ ನಡೆಸಿದ್ದು. 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾಗ, ಇಡೀ ದೇಶಾದ್ಯಂತ ಅಂದು ಇದ್ದ 16 ರಾಜ್ಯಗಳಲ್ಲಿ 14 ರಾಜ್ಯಗಳು ಸರ್ದಾರ್ ವಲ್ಲಭಭಾಯಿ ಪಟೇಲ್ ಈ ದೇಶದ ಪ್ರಧಾನಿ ಆಗಬೇಕೆಂದು ಬಯಸಿದ್ದವು. ಆದರೆ ನೆಹರು ಅವರನ್ನು ಅಪಾಯಿಟ್ ಮಾಡಲಾಯಿತು ಎಂದು ಟೀಕಿಸಿದರು.

ಯಡಿಯೂರಪ್ಪನವರು ಎರಡು ವರ್ಷ ಅಧಿಕಾರದಲ್ಲಿ ಇರುತ್ತೇನೆ ಎಂದಿದ್ದರು. ಅವರ ಅವಧಿ ಮುಗಿದ ಬಳಿಕ ಸರ್ವ ಸಮ್ಮತವಾಗಿ ತೀರ್ಮಾನಿಸಿ ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಸ್ಥಾನದಲ್ಲಿ ಕೂರಿಸಿದ್ದೇವೆ. ಈಗ ನೀವು (ಸಿದ್ದರಾಮಯ್ಯ) ಎಲೆಕ್ಟೆಡ್–ಅಪಾಯಿಂಟೆಡ್ ಎಂದು ಹೊಸ ವ್ಯಾಖ್ಯಾನ ನೀಡಲು ಹೋಗಬೇಡಿ. ಒಬ್ಬ ಮುಖ್ಯಮಂತ್ರಿಯಾಗಿ 36 ಸಾವಿರ ಮತಗಳ ಅಂತರದಿಂದ ಸೋತು ತಿರಸ್ಕೃತಗೊಂಡ ವ್ಯಕ್ತಿ ನೀವು. ಈಗಿನ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಚುನಾವಣೆಗೆ ಹೋಗುತ್ತೇವೆ ಎಂದು ಹೇಳಿ ನೋಡೋಣ ಎಂದು ಸವಾಲು ಹಾಕಿದರು.

ಪ್ರಾರ್ಥನೆಗೆ ಸರ್ಕಾರಿ ಮೈದಾನಗಳಲ್ಲಿ ಅವಕಾಶ ನೀಡಬಾರದು

ಸಂಸದ ಪ್ರತಾಪ್‌ಸಿಂಹ

ಮೈಸೂರು,ಮೇ 8(ಪಿಎಂ)–ಈದ್, ರಂಜಾನ್ ಮೊದಲಾದ ಹಬ್ಬಗಳಲ್ಲಿ ಸರ್ಕಾರಿ ಮೈದಾನದಲ್ಲಿ ಪ್ರಾರ್ಥನೆಗೆ ಅವಕಾಶ ನೀಡಬಾರದು. ಇದರಿಂದ ಸರ್ಕಾರಿ ಭೂಮಿ, ಈದ್ಗಾ ಮೈದಾನಗಳಾಗುತ್ತವೆ ಎಂದು ಸಂಸದ ಪ್ರತಾಪ್‌ಸಿಂಹ ಹೇಳಿದರು.



ಮೈಸೂರು ಬಿಜೆಪಿ ಕಚೇರಿಯಲ್ಲಿ ಭಾನುವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಈದ್, ರಂಜಾನ್ ಬಂದಾಗ ರಸ್ತೆಗಳನ್ನೇ ಮುಚ್ಚಿ ಇವರು ಪ್ರಾರ್ಥನೆ ಮಾಡುತ್ತಾರೆ. ಇದಕ್ಕೂ ಅವಕಾಶ ಕೊಡಬಾರದು. ಅವರು ಪ್ರಾರ್ಥನೆ ಮಾಡಬೇಕಾದರೆ ಮನೆಯೊಳಗೆ ಮಾಡಿಕೊಳ್ಳಲಿ ಎಂದು ಪ್ರತಿಪಾದಿಸಿದರು.

ದೇವಸ್ಥಾನಗಳಲ್ಲಿ ಸುಪ್ರಭಾತ ಅಭಿಯಾನಕ್ಕೆ ಶ್ರೀರಾಮಸೇನೆ ಕರೆಕೊಟ್ಟಿರುವ ಬಗ್ಗೆ ಪ್ರತಿಕ್ರಿಯಿಸಿ, ಈ ರೀತಿಯ ಪ್ರತಿರೋಧಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಏಕೆಂದರೆ ಲೌಡ್ ಸ್ಪೀಕರ್‌ನ ಶಬ್ದ ಎಷ್ಟು ಮಿತಿ ಹೊಂದಿರಬೇಕೆಂದು ಸುಪ್ರಿಂಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದೆ. ಉತ್ತರ ಪ್ರದೇಶದಲ್ಲಿ ಅಲ್ಲಿನ ಸರ್ಕಾರ ಮಸೀದಿ, ದೇವಸ್ಥಾನಗಳಿಂದ 50 ಸಾವಿರಕ್ಕಿಂತ ಹೆಚ್ಚಿನ ಲೌಡ್ ಸ್ಪೀಕರ್‌ಗಳನ್ನು ತೆರವುಗೊಳಿಸಿ ಮೇಲ್ಪಂಕ್ತಿ ಹಾಕಿದೆ. ಅದೇ ಹಾದಿಯಲ್ಲಿ ಕರ್ನಾಟಕ ಸರ್ಕಾರವೂ ನಡೆಯಬೇಕು. ಈ ಹಿನ್ನೆಲೆಯಲ್ಲಿ ಶ್ರೀರಾಮ ಸೇನೆಯವರ ಸುಪ್ರಭಾತ ಪ್ರತಿರೋಧವನ್ನು ವಿರೋಧವೆಂದು ಭಾವಿಸುವುದಕ್ಕಿಂತ ಅವರ ಮನವಿಯನ್ನು ಮನಗಂಡು ಸರ್ಕಾರ ಕಾರ್ಯಪ್ರವೃತ್ತವಾಗಬೇಕೆಂದು ಮನವಿ ಮಾಡಿದರು.

ನಮ್ಮ ಸರ್ಕಾರ ಮೇಲೆ ವಿಶ್ವಾಸವಿದೆ: ರಾಜ್ಯ ಬಿಜೆಪಿ ಸರ್ಕಾರದಲ್ಲಿ ಯಡಿಯೂರಪ್ಪನವರು ಸಿಎಂ ಆಗಿದ್ದಾಗ ಗೋ ಹತ್ಯೆ ನಿಷೇಧ ಕಾಯ್ದೆ ಜಾರಿಯಾಯಿತು. ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿ ಮಾಡಲಾಗಿದೆ. ಈ ವಿಷಯದಲ್ಲೂ ನಮ್ಮ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವ ವಿಶ್ವಾಸವಿದೆ ಎಂದರು.

ಕೋಡಿಹಳ್ಳಿ ಸ್ವಾಮೀಜಿ ಭವಿಷ್ಯ, ಕುಮಾರಸ್ವಾಮಿ ಹೇಳಿಕೆ ಎರಡು ನಿಖರವೂ ಅಲ್ಲ, ಸ್ಥಿರವೂ ಅಲ್ಲ

ಮೈಸೂರು,ಮೇ 8(ಪಿಎಂ)– ಪಿಎಸ್‌ಐ ನೇಮಕಾತಿ ಅಕ್ರಮದ ಕಿಂಗ್‌ಪಿನ್ ಹೆಸರು ಹೇಳಲು ಸಾಧ್ಯವೇ? ಹೇಳಿದರೆ ರಾಜ್ಯ ಸರ್ಕಾರವೇ ಬಿದ್ದು ಹೋಗುತ್ತದೆ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆಗೆ ಪ್ರತಿ ಕ್ರಿಯಿಸಿದ ಪ್ರತಾಪ್ ಸಿಂಹ, ಕೋಡಿಹಳ್ಳಿ ಸ್ವಾಮೀಜಿ ಭವಿಷ್ಯ ಮತ್ತು ಕುಮಾರಸ್ವಾಮಿಯವರ ಹೇಳಿಕೆ ಎರಡೂ ನಿಖರವೂ ಅಲ್ಲ. ಸ್ಥಿರವೂ ಅಲ್ಲ ಎಂದು ಟೀಕಿಸಿದರು.

ಹಾಗಾಗಿ ಅವರ ಹೇಳಿಕೆ ಗಂಭೀರವಾಗಿ ಯಾರೂ ಪರಿಗಣಿಸು ವುದು ಬೇಡ. ಒಂದು ವೇಳೆ ಕುಮಾರ ಸ್ವಾಮಿಯವರ ಬಳಿ ಕಿಂಗ್‌ಪಿನ್ ಹೆಸರು ಇದ್ದರೆ ಹೇಳಲಿ. ಬಿಜೆಪಿ ಸರ್ಕಾರ ಇರಬೇಕೆಂಬ ಅನಿವಾರ್ಯತೆ ಅವರಿಗೇನು ಇಲ್ಲವಲ್ಲ ಎಂದು ಛೇಡಿಸಿದರು.

ನಿರ್ದಿಷ್ಟ ಗುರಿಯೊಂದಿಗೆ ಸಾಧನೆಯತ್ತ ಗಮನ ಕೊಡಿ

ಮೈಸೂರು,ಮೇ 8(ಎಂಟಿವೈ)– ವಿದ್ಯಾರ್ಥಿಗಳು ಜೀವನದಲ್ಲಿ ದೊಡ್ಡ ಕನಸುಗಳನ್ನು ಕಾಣುವುದರೊಂದಿಗೆ ನಿರ್ದಿಷ್ಟ ಗುರಿ ಇಟ್ಟುಕೊಂಡು ಸಾಧನೆ ಮಾಡುವತ್ತ ಗಮನ ಕೇಂದ್ರೀಕರಿಸಬೇಕು ಎಂದು ರಾಜ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತ ಕೆ.ಎ.ದಯಾನಂದ್ ಕರೆ ನೀಡಿದ್ದಾರೆ.



ಮೈಸೂರಿನ ಕುವೆಂಪುನಗರದಲ್ಲಿರುವ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಇಂದು ಭೇಟಿ ನೀಡಿ ಪರಿಶೀಲಿಸಿದ ಬಳಿಕ ವಿದ್ಯಾರ್ಥಿನಿಯರೊಂದಿಗೆ ಭೋಜನ ಸ್ವೀಕರಿಸಿ, ಸಮಾಲೋಚಿಸಿದರು.

ಈ ವೇಳೆ ಮಾತನಾಡಿದ ಅವರು, ವಿದ್ಯಾರ್ಥಿನಿಯರು, ಶಿಕ್ಷಕರು ಮಾಡುವ ಪಾಠದೊಂದಿಗೆ ತಾವೇ ಪಠ್ಯಪುಸ್ತಕವನ್ನು ಓದಿ ಮನನ ಮಾಡಿಕೊಳ್ಳುವ ಮೂಲಕ ಹೆಚ್ಚು ಜ್ಞಾನ ಸಂಪಾದಿಸಬೇಕು. ಶೈಕ್ಷಣಿಕ ವರ್ಷದಲ್ಲಿ 9 ತಿಂಗಳು ಸಮಯ ವ್ಯರ್ಥ ಮಾಡಿ ಕೇವಲ 3 ತಿಂಗಳಲ್ಲಿ ಓದಿ ಪರೀಕ್ಷೆ ಬರೆದರೆ ಜೀವನದಲ್ಲಿ ಸಾಧನೆ ಮಾಡಲು ಆಗುವುದಿಲ್ಲ. ವರ್ಷಪೂರ್ತಿ ಪುಸ್ತಕಗಳನ್ನು ಓದಿದರೆ ಜೀವನದಲ್ಲಿ ಸಕ್ಸಸ್ ಆಗಬಹುದು ಎಂದರು.

ಸಮಯವಿದ್ದಾಗ ಸ್ಪರ್ಧಾತ್ಮಕ ಪರೀಕ್ಷೆ ಗಳಿಗೆ ತಯಾರು ಮಾಡಿಕೊಳ್ಳಬೇಕು. ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಂಡು ಬುದ್ಧಿಯನ್ನು ತೀಕ್ಷ್ಣ ಮಾಡಿಕೊಳ್ಳಬೇಕು. ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕಾದರೆ ನಿರಂತರ ಪ್ರಯತ್ನಗಳು ನಡೆಯುತ್ತಿರಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್. ಎಸ್.ಬಿಂದ್ಯಾ ಮಾತನಾಡಿ, ಮೈಸೂರಲ್ಲಿ ವಿದ್ಯಾರ್ಥಿನಿಲಯಗಳ ಹೊಸ ಕಟ್ಟಡಗಳು ಉದ್ಘಾಟನೆಗೊಂಡಿವೆ. ಇನ್ನು ಕೆಲವು ಕಟ್ಟಡಗಳ ಅಂತಿಮ ಹಂತದ ಕೆಲಸ ನಡೆಯುತ್ತಿವೆ ಆದರೆ ಇನ್ನೂ ಕೆಲವು ಹಾಸ್ಟೆಲ್‌ಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು, ತಿಂಗಳಿಗೆ 22 ಲಕ್ಷ ರೂ. ಬಾಡಿಗೆ ಕಟ್ಟುತ್ತಿ ದ್ದೇವೆ. ದಯಮಾಡಿ 4 ಕಟ್ಟಡಗಳನ್ನು ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಇಲಾಖೆಯ ಮೈಸೂರು ತಾಲೂಕು ಅಧಿಕಾರಿ ಚಂದ್ರಕಲಾ, ನಿಲಯ ಪಾಲಕರಾದ ಮಂಜುಳ, ನೀಲಾ, ಸುಶೀಲಮ್ಮ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಪ್ರೇಕ್ಷಕರಿಗೆ ಮುದ ನೀಡಿದ ನಾಡ ಕುಸ್ತಿ



ಮೈಸೂರು,ಮೇ 8(ಜಿಎ)– ಮೈಸೂರಿನ 98ನೇ ವರ್ಷದ ಕರಗ ಮಹೋತ್ಸವ ಪ್ರಯುಕ್ತ ನಗರದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 30 ಜೊತೆಗಳ ನಾಡ ಕುಸ್ತಿ ಪಂದ್ಯಾವಳಿಗೆ ಮಾಜಿ ಶಾಸಕ ಸಂದೇಶ ನಾಗರಾಜ್ ಅವರು ಚಾಲನೆ ನೀಡಿದರು.

ನಾಡ ಕುಸ್ತಿ ಪಂದ್ಯಾವಳಿಯಲ್ಲಿ ಮೈಸೂರು ಹಾಗೂ ಸುತ್ತಮುತ್ತಲಿನ ತಾಲೂಕಿನ ಪೈಲ್ವಾನರು ಮತ್ತು ಹರಿಯಾಣ, ಮಹಾರಾಷ್ಟ್ರದ ಪೈಲ್ವಾನರು ಹಾಗೂ ಮಕ್ಕಳು ಭಾಗವಹಿಸಿ ಕುಸ್ತಿ ಆಡಿದರು. ಕುಸ್ತಿ ಪಂದ್ಯಾವಳಿಯು ಪ್ರೇಕ್ಷಕರಿಗೆ ಮುದ ನೀಡಿತು.

ಇಂದು ನಡೆದ ಕುಸ್ತಿಯಲ್ಲಿ ಕುತೂಹಲ ಕೆರಳಿಸಿದ್ದ ಮಹಾರಾಷ್ಟ್ರದ ಪೈಲ್ವಾನ್ ರೋಶನ್ ಮತ್ತು ಯಶ್ವಂತ್ ಕಾಳಿಂಗ ಅವರ ನಡುವೆ ನಡುವಿನ ಕುಸ್ತಿ ಪಂದ್ಯದಲ್ಲಿ ಯಶ್ವಂತ್ ಕಾಳಿಂಗ ರೋಚಕ ಗೆಲುವು ಸಾಧಿಸಿದರು. ಹರಿಯಾಣ ಪೈಲ್ವಾನ್ ಸುಮೀತ್ ಕುಮಾರ್ ಮತ್ತು ಮಹಾರಾಷ್ಟ್ರ ಪೈಲ್ವಾನ್ ಕರನ್ ದೀಪ್ ವಿಕ್ರಂ ಅವರ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯವಾಯಿತು ಹಾಗೂ ಎಲ್ಲರ ಕುತೂಹಲ ಕೆರಳಿಸಿದ್ದ ದಾವಣಗೆರೆಯ ಪೈಲ್ವಾನ್ ಕಾರ್ತಿಕ್ ಕಾಟೇ ಮತ್ತು ಹರಿಯಾಣದ ಆಕಾಶ್ ಅಳ್ವಾ ಅವರ ನಡುವಿನ ಕುಸ್ತಿ ಪಂದ್ಯವು ಒಂದು ಗಂಟೆಗಳ ಕಾಲ ನಡೆದು ಯಾವುದೇ ಫಲಿತಾಂಶವಿಲ್ಲದೆ ಡ್ರಾನಲ್ಲಿ ಅಂತ್ಯಗೊಂಡಿತು. ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಪಾಲಿಕೆ ಸದಸ್ಯ ಸಾತ್ವಿಕ್ ಹಾಗೂ ಇಟ್ಟಿಗೆಗೂಡಿನ ಗ್ರಾಮಸ್ಥರು ಪಂದ್ಯಾವಳಿಯನ್ನು ವೀಕ್ಷಿಸಿದರು.

ರಂಗಾಯಣದಿಂದ ಮತ್ತಷ್ಟು ನಾಟಕಗಳು ಪ್ರದರ್ಶನ

- ಸಾಮಾಜಿಕ ಅರಿವು ಮೂಡಿಸುತ್ತಿರುವ 'ಮಾನವರಾಗೋಣ' ಬೀದಿನಾಟಕ
- 32 ಪ್ರದರ್ಶನ ಕಂಡಿರುವ 'ಸೂತ್ರಧಾರ'
- ಪುಣೆ, ದೆಹಲಿ, ಭೋಪಾಲ್, ಮುಂಬೈನಲ್ಲಿ 'ಪರ್ವ' ನಾಟಕ
- 'ವಾಸಂಸಿ ಜೀರ್ಣಾನಿ', 'ಬೆಕ್ಕು ಬಾವಿ' ನಾಟಕಕ್ಕೆ ಸಿದ್ಧತೆ

ಮೈಸೂರು,ಮೇ 8(ಜಿಎ)– ಮೈಸೂರಿನ ರಂಗಾಯಣವು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ 2022ನೇ ಸಾಲಿನಲ್ಲಿ ವಿಶೇಷ ಘಟಕ ಯೋಜನೆಯಡಿ ಈಗಾಗಲೇ 'ರಂಗಾಯಣ ದಂಗಳದಲ್ಲಿ ಜನಪದರು' ಎಂಬ ಜನಪದೋತ್ಸವ ಯಶಸ್ವಿಯಾಗಿ ಮುಗಿಸಿದ್ದು, ಇದೇ ಯೋಜನೆಯಡಿ ಮತ್ತಷ್ಟು ನಾಟಕಗಳನ್ನು ಪ್ರದರ್ಶಿಸಲು ಮುಂದಾಗಿದೆ.



ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಅವರು ಮುಂದಿನ ಯೋಜನೆಗಳ ಕುರಿತು ಭಾನುವಾರ ಸಂಜೆ ರಂಗಾಯಣದಲ್ಲಿ ವಿವರಿಸಿದರು. ಸಾಮಾಜಿಕ ಅರಿವು ಮೂಡಿಸುವುದಕ್ಕಾಗಿ ರಂಗಾಯಣದ ಹತ್ತು ಗ್ರಾಮೀಣ ಪರಿಶಿಷ್ಟ ಕಲಾವಿದರನ್ನು ಆಯ್ಕೆ ಮಾಡಿಕೊಂಡು ಏ.15ರಿಂದ ಹತ್ತು ದಿನಗಳ ಕಾಲ ರಂಗ ಶಿಬಿರ ನಡೆಸಿ 'ಮಾನವರಾಗೋಣ' ಎಂಬ ಬೀದಿನಾಟಕದ ಪ್ರದರ್ಶನವನ್ನು ಪ್ರಾರಂಭಿಸಿದ್ದು, ಈಗಾಗಲೇ ಮೈಸೂರು ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ 30 ಪ್ರದರ್ಶನಗಳನ್ನು ನೀಡಿದೆ. ಇನ್ನಷ್ಟು ಪ್ರದರ್ಶನಗಳನ್ನು ನೀಡಲು ಯೋಜಿಸಲಾಗಿದೆ. ಈ ಬೀದಿನಾಟಕದ ಪ್ರದರ್ಶನದಿಂದ ರಂಗಾಯಣ ಯೋಚಿಸಿದಂತೆ ಸಾಮಾಜಿಕ ಪಿಡುಗುಗಳನ್ನು ಪರಿಣಾಮಕಾರಿಯಾಗಿ ಸಾಮಾಜಿಕ ಅರಿವು ಮೂಡಿಸುವಲ್ಲಿ ಯಶಸ್ವಿಯಾಗಿದೆ ಎಂದರು.

ಸಂವಿಧಾನದ ಆಶಯಗಳನ್ನು ತಿಳಿಸಲು 'ಸರ್ವರಿಗೂ ಸಂವಿಧಾನ'ಕ್ಕಾಗಿ ರಂಗಾಯಣದ 15 ಪರಿಶಿಷ್ಟ ಕಲಾವಿದರನ್ನು ಆಯ್ಕೆ ಮಾಡಿಕೊಂಡು ಒಂದು ತಿಂಗಳ ಶಿಬಿರ ನಡೆಸಿ ಎಸ್. ರಾಮನಾಥ ಅವರು ರಚಿಸಿ ಮಹೇಶ್ ಕಲ್ಲತ್ತಿ ನಿರ್ದೇಶಿಸಿರುವ 'ಸೂತ್ರಧಾರ' ಎಂಬ ನಾಟಕವನ್ನು ಸಿದ್ಧಪಡಿಸಿ. ಈಗಾಗಲೇ ಮೊದಲನೇ ಹಂತದಲ್ಲಿ ಈ ನಾಟಕ ರಾಜ್ಯದ ಹಲವು ಭಾಗಗಳಲ್ಲಿ 32 ಪ್ರದರ್ಶನಗಳನ್ನು ನೀಡಿದ್ದು, ಮೈಸೂರಿನಲ್ಲಿ ಮೇ7 ರಂದು ಮೊದಲ ಪ್ರದರ್ಶನವನ್ನು ನೀಡಿದೆ. 2ನೇ ಹಂತದಲ್ಲಿ ಮತ್ತಷ್ಟು ಕಲಾವಿದರನ್ನು ಸೇರಿಸಿಕೊಂಡು ಪ್ರದರ್ಶನಗಳನ್ನು ನೀಡಲು ಸಿದ್ಧವಾಗಿದೆ ಎಂದರು.


'ಪರ್ವ' ಮಹಾ ರಂಗಪ್ರಯೋಗ ಭಾರತೀಯ ರಂಗಭೂಮಿಯಲ್ಲೇ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದ್ದು, ರಂಗಾಯಣ ಯೋಜಿಸಿದಂತೆ ಮೈಸೂರಿನ ಕಲಾಮಂದಿರ ಮತ್ತು ಭೂಮಿಗೀತ ರಂಗಮಂದಿರದಲ್ಲಿ ಯಶಸ್ವಿ 21 ಪ್ರದರ್ಶನಗಳನ್ನು ನಡೆಸಿದೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ಹಾಗೂ ದಾವಣಗೆರೆಯಿಂದ ಆರಂಭಿಸಿ ಧಾರವಾಡ, ಬೆಳಗಾವಿ, ವಿಜಯಪುರದಲ್ಲಿ 8 ಪ್ರದರ್ಶನಗಳನ್ನು ನೀಡಿದೆ. 2ನೇ ಹಂತದ ಪ್ರವಾಸ ಪ್ರದರ್ಶನದಲ್ಲಿ ಮಂಗಳೂರು, ಬೆಂಗಳೂರಿನ ಕಲಾವಿದರನ್ನು ಒಳಗೊಂಡತೆ ಏ.30 ರಂದು ಹಾಸನ, ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಯಶಸ್ವಿ ಪ್ರದರ್ಶನ ನೀಡಿದೆ.

ರಂಗಾಯಣದ ಭೂಮಿಗೀತದಲ್ಲಿ 'ಪರ್ವ' ನಾಟಕವು ಮೇ21, 22ರಂದು ಪ್ರದರ್ಶನಗೊಳ್ಳಲಿದ್ದು, ಮೂರನೇ ಹಂತವಾಗಿ 50 ಪ್ರದರ್ಶನಗಳ ಗುರಿ ಹೊಂದಿದ್ದು, ಅದರಂತೆ ಜೂನ್ ತಿಂಗಳಿನಲ್ಲಿ ದೇಶದ ವಿವಿಧ ರಾಜ್ಯಗಳಾದ ಪುಣೆ, ಹೆಹಲಿ, ಚಂಡೀಘಡ, ಭೋಪಾಲ್ ಮತ್ತು ಮುಂಬೈನಲ್ಲಿ ಪ್ರವಾಸ ಪ್ರದರ್ಶನಕ್ಕೆ ಯೋಜನೆ ರೂಪಿಸಲಾಗಿದೆ ಎಂದರು.

ಕಳೆದೆರಡು ವರ್ಷಗಳಿಂದ ರಂಗಾಯಣದಲ್ಲಿ ರಂಗಭೂಮಿಯ ಖ್ಯಾತ ಕಲಾವಿದರಾದ ಸುಬ್ಬಯ್ಯ ನಾಯ್ಡು ಮತ್ತು ನಾಗರತ್ನಮ್ಮ ಅವರ ಹೆಸರಿನಲ್ಲಿ ಹವ್ಯಾಸಿ ಕಲಾವಿದರ ಕಾರ್ಯಾಗಾರವನ್ನು, ಯುವ ರಂಗ ನಿರ್ದೇಶಕರಾದ ಕಾರ್ತಿಕ್ ಉಪಮನ್ಯು ಮತ್ತು ಪ್ರವೀಣ್ ಬೆಳ್ಳಿ ಅವರು ನಡೆಸುತ್ತಿದ್ದಾರೆ. ಜೂನ್ ಅಂತ್ಯಕ್ಕೆ ಎರಡು ಶಿಬಿರಗಳಿಂದ ನಾಟಕಗಳನ್ನು ಪ್ರದರ್ಶಿಸಲಿದ್ದಾರೆ ಹಾಗೂ ರಂಗಾಯಣ ನಡೆಸುತ್ತಿರುವ ಭಾರತೀಯ ರಂಗವಿದ್ಯಾಲಯದ ವಿದ್ಯಾರ್ಥಿಗಳು ಮಹೇಶ್ ಎಲ್ ಕುಂಚವಾರ ರಚನೆಯ 'ವಾಸಾಂಸಿ ಜೀರ್ಣಾನಿ'ಯು ಗೋಪಾಲಕೃಷ್ಣ ನಾಯರಿ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ ಹಾಗೂ ಶಾ. ಬಾಲುರಾವ್ ರಚನೆಯ 'ಬೆಕ್ಕು ಬಾವಿ' ನಾಟಕವು ಎಸ್.ರಾಮನಾಥ್ ನಿರ್ದೇಶನದಲ್ಲಿ ಮೇ14 ಮತ್ತು 15 ರಂದು ಪ್ರದರ್ಶನಗಳನ್ನು ನೀಡಲು ಯೋಜಿಸಲಾಗಿದೆ ಎಂದು ಅವರು ವಿವರಿಸಿದರು ಇದೇ ವೇಳೆ 'ಮಾನವರಾಗೋಣ' ಎಂಬ ಬೀದಿನಾಟಕದ ಪ್ರದರ್ಶಿಸಲಾಯಿತು. ರಂಗಾಯಣ ಉಪ ನಿರ್ದೇಶಕರಾದ ನಿರ್ಮಲಾ ಮಠಪತಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಸೋಮವಾರ 9 ಮೇ 2022

ಹುಣಸೂರಲ್ಲಿ ಬಿರುಗಾಳಿ ಸಹಿತ ಭಾರೀ ಮಳೆ



● ಮನೆಗಳು ಜಖಂ ● ಮನೆಗಳಿಗೆ ನುಗ್ಗಿದ ನೀರು ● ರಸ್ತೆಗೆ ಮರ ಬಿದ್ದು ಸಂಚಾರ ಅಸ್ತವ್ಯಸ್ತ ● ಬುಡಸಮೇತ ಧರೆಗುರುಳಿದ ಮರಗಳು, ವಿದ್ಯುತ್ ಕಂಬಗಳು ● ಕಗ್ಗತ್ತಲಿನಲ್ಲಿ ಹುಣಸೂರು ತಾಲೂಕು



ಹುಣಸೂರು, ಮೇ 8(ಕೆಕೆ)– ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಶನಿವಾರ ರಾತ್ರಿ ಸುರಿದ ಸಿಡಿಲು–ಗುಡುಗು ಮತ್ತು ಬಿರುಗಾಳಿ ಭಾರೀ ಮಳೆಗೆ ನೂರಾರು ಮರಗಳು ಧರೆಗುರುಳಿದ ಪರಿಣಾಮ 2 ಟಿಸಿ ಸೇರಿದಂತೆ ಸುಮಾರು ನೂರಾರು ವಿದ್ಯುತ್ ಕಂಬಗಳು ನೆಲಕ್ಕುರುಳಿ ವಿದ್ಯುತ್ ಸಂಪರ್ಕ ಸ್ಥಗಿತಗೊಂಡಿದೆ. ಕೆಲವು ಮನೆಗಳು ಕೂಡ ಜಖಂಗೊಂಡಿವೆ.

ರಾತ್ರಿ 8.30ರ ವೇಳೆಗೆ ಆರಂಭವಾದ ಬಿರುಗಾಳಿ ಮಳೆಗೆ ನಗರದ ಮಹಿಳಾ ಕಾಲೇಜು ಬಳಿಯ ಹಳೇ ತಾಲೂಕು ಕಚೇರಿ ಬಳಿ 250 ವರ್ಷ ಹಳೆಯ 2 ಬೃಹತ್ ಅರಳೀಮರ ಬುಡಸಹಿತ ಉರುಳಿ ಬಿದ್ದಿದೆ. ಅಲ್ಲದೇ ಬ್ರಾಹ್ಮಣ ಬಡಾವಣೆಯ ಅಡುಗೆ ಸುಬ್ಬಣ್ಣನವರ ಮನೆ ಮೇಲಿದ್ದ ಸೋಲಾರ್ ಹಾಗೂ ವಾಟರ್ ಟ್ಯಾಂಕ್ ಹಾರಿ ಬಿದ್ದು ಪಕ್ಕದ ಮನೆಯ ಶೀಟ್‌ಗಳು ಪುಡಿಪುಡಿಯಾಗಿ ಮನೆಯೊಳಗೆ ಮಳೆ ನೀರು ನಿಂತು ವಸ್ತುಗಳೆಲ್ಲಾ ಮಳೆ ನೀರಿನಲ್ಲಿ ತೋಯ್ದು ಹೋಗಿದೆ. ಮೈಲಾರ ಲಿಂಗೇಶ್ವರ ಸಾಮಿಲ್ ಹಿಂಭಾಗದ ನಿವಾಸಿ ಅಕ್ಬರ್ ಪಾಷ ಅವರ ಮನೆ, ಆಟೋ ಮೇಲೆ ಮರ ಬಿದ್ದು ಜಖಂಗೊಂಡಿದೆ. ಮಾಂಸದ ಮಾರುಕಟ್ಟೆ ಪಕ್ಕದ ನಗರಸಭೆ ಮಳಿಗೆ ಮೇಲೆ ಮರ ಬಿದ್ದು, ಕಮಲಮ್ಮ ಅವರ ಮಳಿಗೆ ಜಖಂಗೊಂಡಿದೆ. ನಗರದ ಬೈಪಾಸ್ ರಸ್ತೆಯ ಕೋರ್ಟ್ ಸರ್ಕಲ್ ಬಳಿ ಎಳನೀರು ತುಂಬಿ ಬಾಂಬೆಗೆ ಹೋಗಲು ರೆಡಿಯಾಗಿದ್ದ ಲಾರಿ ಮೇಲೆ ಎರಡು ಭಾರೀ ಗಾತ್ರದ ನೀಲಗಿರಿ ಮರಗಳು ಬಿದ್ದಿವೆ. ಕಲ್ಪತರು ವೃತ್ತ ಬಳಿಯ ಆಟೋ ನಿಲ್ದಾಣದಲ್ಲಿ ಮರ ಬಿದ್ದು ವಿದ್ಯುತ್ ಕಂಬಗಳು ನೆಲಕ್ಕುರುಳಿ ವಿದ್ಯುತ್ ತಂತಿಗಳು ರಸ್ತೆಯಲ್ಲಿ ಬಿದ್ದಿವೆ. ಹೆಚ್.ಡಿ.ಕೋಟೆ ಸರ್ಕಲ್ ಬಳೀ ಮರ ರಸ್ತೆಗೆ ಬಿದ್ದು ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ತಹಸೀಲ್ದಾರ್ ಕಚೇರಿ ಮುಂಭಾಗ ಅಮ್ಮ ಕ್ಯಾಂಟೀನ್ ಮೇಲೆ ಮರ ಉರುಳಿ ಹಾನಿಗೊಳಗಾಗಿದೆ. ಅಲ್ಲದೇ ನಗರದ ವಿವಿಧೆಡೆ ಸಾಕಷ್ಟು ಮನೆಗಳು ಜಖಂಗೊಂಡಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ.

ಹುಣಸೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ 275 ರ ಹುಣಸೂರು ನಗರದ ಸಮೀಪದ ಅಗ್ನಿ ಶಾಮಕ ಠಾಣೆ ಎದುರಿನ ರಸ್ತೆ ಬದಿಯ ಹತ್ತಾರು ಮರಗಳು ಬುಡ ಸಹಿತ ಉರುಳಿ ಬಿದ್ದಿದ್ದರಿಂದಾಗಿ ರಾತ್ರಿ 10 ರಿಂದ 12 ರ ವರೆಗೆ ಹೆದ್ದಾರಿ ಬಂದಾಗಿತ್ತು. ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಅಗ್ನಿಶಾಮಕ ಹಾಗೂ ಗೃಹರಕ್ಷಕರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿಗಳು ರಾತ್ರಿಯೇ ರಸ್ತೆಗೆ ಬಿದ್ದಿದ್ದ ಮರಗಳನ್ನು ತೆರವು ಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ರಾತ್ರಿ ಕರ್ತವ್ಯದಲ್ಲಿದ್ದ ಬೆರಳೆಣಿಕೆಯಷ್ಟು ಪೊಲೀಸರು ಸಂಚಾರ ನಿಯಂತ್ರಿಸಲು ಹರಸಾಹಸ ಪಟ್ಟರು.

ಅಲ್ಲಲ್ಲಿ ವಿದ್ಯುತ್ ಕಂಬಗಳು ಬಿದ್ದು ಹೋಗಿದ್ದರಿಂದಾಗಿ ಭಾನುವಾರ ಸಂಜೆ 6 ಗಂಟೆಯಾದರೂ ವಿದ್ಯುತ್ ಸಂಪರ್ಕ ಕಲ್ಪಿಸಲು ಚೆಸ್ಕಾಂ ಸಿಬ್ಬಂದಿ ಹೆಣಗಾಡಿದರು. ಭಾನುವಾರ ಮುಂಜಾನೆ ಶಾಸಕ ಹೆಚ್.ಪಿ.ಮಂಜುನಾಥ್, ತಹಸೀಲ್ದಾರ್ ಡಾ.ಅಶೋಕ್, ಡಿವೈಎಸ್‌ಪಿ ರವಿಪ್ರಸಾದ್, ಪೌರಾಯುಕ್ತ ರವಿಕುಮಾರ್, ಚೆಸ್ಕಾಂ ಎಇಇ ಸಿದ್ದಪ್ಪ ಮತ್ತಿತರ ಅಧಿಕಾರಿಗಳು ನಗರ ವ್ಯಾಪ್ತಿಯಲ್ಲಿ ಸಂಚರಿಸಿ ಪರಿಶೀಲನೆ ನಡೆಸಿ ಸಂತ್ರಸ್ತರಿಗೆ ಸಾಂತ್ವನ ಹೇಳುವ ಜೊತೆಗೆ ವೈಯಕ್ತಿಕ ಧನಸಹಾಯ ಮಾಡಿದ್ದಾರೆ.

ಇನ್ನೂ ತಾಲೂಕಿನ ಕರ್ಣಕುಪ್ಪೆ ಗ್ರಾಪಂ ವ್ಯಾಪ್ತಿಯಲ್ಲಿ ಭಾನುವಾರ ಸಂಜೆ ಸುರಿದ ಭಾರೀ ಮಳೆಗೆ ಕಲ್ಕಡ ಗ್ರಾಮದಲ್ಲಿ 10 ಮನೆ ಮತ್ತು ಹರೀನಹಳ್ಳಿ ಗ್ರಾಮದಲ್ಲಿ 5 ಮನೆಗಳು ಹಾನಿಗೊಳಗಾಗಿದೆ. ಅಲ್ಲದೇ ಕಲ್ಕಡ ಗ್ರಾಮದ ರವಿಕುಮಾರ್ ಅವರ 1 ಎಕರೆ ಭಾಳೆತೋಟ ನೆಲಕಚ್ಚಿದೆ ಎನ್ನಲಾಗಿದೆ.

ಒಟ್ಟಾರೆ ಹುಣಸೂರು ಸೇರಿದಂತೆ ತಾಲೂಕಿನಾದ್ಯಂತ ಸುರಿದ ಭಾರೀ ಮಳೆಗೆ ವಿದ್ಯುತ್ ಕಂಬಗಳು, ಮರಗಳು ಧರೆಗುರುಳಿದ್ದು, ಬೆಳೆಗಳು ನಾಶವಾಗಿ ಲಕ್ಷಾಂತರ ನಷ್ಟ ಸಂಭವಿಸಿದೆ.

ಭಾರೀ ಬಿರುಗಾಳಿ ಮಳೆ: ರೈತರ ನೂರಾರು ಎಕರೆ ಬೆಳೆ ನಾಶ

ಕೋಟಿ ರೂ.ಗೂ ಹೆಚ್ಚು ನಷ್ಟ



ಹೆಚ್.ಡಿ.ಕೋಟೆ, ಮೇ 8(ಮಂಜು)– ತಾಲೂಕಿನಲ್ಲಿ ಶನಿವಾರ ರಾತ್ರಿ ಸುರಿದ ಭಾರೀ ಬಿರುಗಾಳಿ ಮಳೆಗೆ ರೈತರು ನೂರಾರು ಎಕರೆ ಜಮೀನಿನಲ್ಲಿ ಬೆಳೆದಿದ್ದ ಬೆಳೆ ಸಂಪೂರ್ಣ ನಾಶವಾಗಿ ಅಂದಾಜು ಕೋಟಿ ರೂ.ಗೂ ಹೆಚ್ಚು ನಷ್ಟ ಸಂಭವಿಸಿದೆ.

ತಾಲೂಕಿನ ಕಸಬಾ ಹೋಬಳಿ ವ್ಯಾಪ್ತಿಯಲ್ಲಿ ಸುರಿದ ಭಾರೀ ಬಿರುಗಾಳಿ ಮಳೆಗೆ ಹೊಸಹಳ್ಳಿ, ಅಣ್ಣೂರು, ರಾಜೇಗೌಡನಹುಂಡಿ, ಕಟ್ಟೆಮನಗನಹಳ್ಳಿ, ಚಕೋಡನಹಳ್ಳಿ ವ್ಯಾಪ್ತಿಯ 50ಕ್ಕೂ ಹೆಚ್ಚು ಹಳ್ಳಿಗಳ 150ಕ್ಕೂ ಹೆಚ್ಚು ಎಕರೆ ಜಮೀನಿನಲ್ಲಿ ಬೆಳೆದಿದ್ದ ರೈತರ ಬೆಳೆ ಸಂಪೂರ್ಣ ನಾಶವಾಗಿದೆ. ಈ ಪೈಕಿ 120 ಎಕರೆ ಬಾಳೆ, 5 ಎಕರೆ ಜೋಳ, 8 ಎಕರೆ ಪರಂಗಿ, 10 ಎಕರೆ ತರಕಾರಿ ಬೆಳೆ ನಾಶವಾಗಿದೆ. ಅಲ್ಲದೇ ಸಾಗುವಾನಿ, ಬೇವು ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದ್ದು, ಜಮೀನುಗಳಲ್ಲಿ ರೈತರು ನಿರ್ಮಿಸಿಕೊಂಡಿದ್ದ ಹತ್ತಾರು ಮನೆಗಳು ಜಖಂಗೊಂಡಿವೆ.

ಮಳೆ ಅವಾಂತರದಿಂದ ರೈತ ಕುಟುಂಬಗಳು ಕಂಗಾಲಾಗಿದ್ದು, ಸಾಲಸೋಲ ಮಾಡಿ ಕಷ್ಟಪಟ್ಟು ಬೆಳೆದ ಬೆಳೆ ಕೈಗೆ ಸೇರುವ ಸಂದರ್ಭ ಬೆಳೆ ನಾಶವಾಗಿದೆ ಎಂದು ರೈತರು ತಮ್ಮ ಅಳಲು ತೋಡಿಕೊಂಡರು.

ಜಮೀನಿನಲ್ಲಿ ಕಷ್ಟಪಟ್ಟು ಬೆಳೆದ ಬೆಳೆಗಳು ನಾಶವಾಗಿದ್ದು, ಮರಗಳು ನೆಲಕ್ಕುರುಳಿವೆ. ಅಲ್ಲದೇ ಹಲವು ಮನೆಗಳ ಮೇಲ್ಛಾವಣಿ ಹಾರಿ ಹೋಗಿದೆ. ಹೀಗಾಗಿ ಸಂಬಂಧಪಟ್ಟ ಜನಪ್ರತಿನಿಧಿಗಳು, ಮತ್ತು ಅಧಿಕಾರಿಗಳು ಸೂಕ್ತ ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ರೈತ ಶಿವರಾಜು ಮತ್ತು ರೇವಣ್ಣ ಮನವಿ ಮಾಡಿಕೊಂಡರು.

> "ತಾಲೂಕಿನ ಕೆಲ ಹಳ್ಳಿಗಳಲ್ಲಿ ಭಾರೀ ಬಿರುಗಾಳಿ ಮಳೆಯಿಂದ ರೈತರ ಬೆಳೆ ನಾಶವಾಗಿದ್ದು, ಮನೆ ಮೇಲ್ಛಾವಣಿ ಹಾರಿ ಹೋಗಿ ಸಾಕಷ್ಟು ನಷ್ಟ ಸಂಭವಿಸಿದೆ. ಹೀಗಾಗಿ ಹಾನಿಗೊಳಗಾದ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಗ್ರ ವರದಿ ನೀಡುವಂತೆ ಕಂದಾಯಾಧಿಕಾರಿ, ಗ್ರಾಮಲೆಕ್ಕಿಗರಿಗೆ ಸೂಚಿಸಿದ್ದೇನೆ. ವರದಿ ಬಂದ ತಕ್ಷಣ ಸರ್ಕಾರಕ್ಕೆ ವರದಿ ಕಳುಹಿಸಿ ನಷ್ಟಕ್ಕೊಳಗಾದವರಿಗೆ ಸೂಕ್ತ ಪರಿಹಾರ ಕೊಡಿಸಲು ಕ್ರಮ ವಹಿಸುತ್ತೇನೆ.
>
> – ರತ್ನಾಂಬಿಕೆ, ತಹಸೀಲ್ದಾರ್.

ಬಿರುಗಾಳಿ ಮಳೆಯಿಂದ ಬೆಳೆ ನಾಶವಾದ ಸುಮಾರು 65 ರೈತರ ಜಮೀನುಗಳಿಗೆ ನಾನೂ ಸೇರಿದಂತೆ ಗ್ರಾಮಲೆಕ್ಕಿಗರಾದ ರಾಜೇಶ್ ಗೌಡ, ಗಿರೀಶ್, ಸಹನಾ, ದಿವ್ಯಾ, ಅನಿಲ್, ಕುಮಾರ್, ಪುನೀತ್ ಭೇಟಿ ನೀಡಿ ಪರಿಶೀಲನೆ ನಡೆಸಿ ಸಮಗ್ರ ವರದಿ ತಯಾರಿಸಲು ಕ್ರಮ ಕೈಗೊಂಡಿದ್ದೇವೆ ಎಂದು ಕಂದಾಯ ಅಧಿಕಾರಿ ಮಹೇಶ್ ತಿಳಿಸಿದ್ದಾರೆ.

ಬುತ್ತಿ ಮನೆಗಳ ನಿರ್ಮಾಣ ಕಾರ್ಯಕ್ಕೆ ಚಾಲನೆ

ತಿ.ನರಸೀಪುರ, ಮೇ 8(ಎಸ್‌ಕೆ)– ತಾಲೂಕಿನ ಹಳೇ ತಿರುಮಕೂಡಲು ಗ್ರಾಮದಲ್ಲಿ ಚೌಡೇಶ್ವರಿ ಸೇವಾ ಸಮಿತಿಯಿಂದ ದೇವಸ್ಥಾನ ಆವರಣದಲ್ಲಿ ಬುತ್ತಿ ಮನೆಗಳ ನಿರ್ಮಾಣ ಕಾರ್ಯಕ್ಕೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥೇಶ್ವರ ಸ್ವಾಮೀಜಿ ಭೂಮಿ ಪೂಜೆ ನೆರವೇರಿಸಿದರು



ನಂತರ ಮಾತನಾಡಿದ ಶ್ರೀಗಳು, ದೇವಸ್ಥಾನಕ್ಕೆ ಬರುವ ಭಕ್ತರಿಗೆ ಯಾವುದೇ ತೊಂದರೆಯಾಗದ ರೀತಿ ಕಾರ್ಯ ನಿರ್ವಹಿಸಲು ಸಮಿತಿ ಪದಾಧಿಕಾರಿಗಳಿಗೆ ಸಲಹೆ ನೀಡಿದ ಅವರು, ದಾಸೋಹ ನಡೆಸಲು ಅನುಕೂಲವಾಗುವಂತೆ ಬುತ್ತಿ ಕುಟೀರ ನಿರ್ಮಿಸಲು ಯೋಜಿಸಲಾಗಿದೆ. ಹಾಗಾಗಿ ಭಕ್ತರು ಬುತ್ತಿ ಮಂದಿರದಲ್ಲೇ ಪ್ರಸಾದ ಸೇವಿಸಲು ಮನವಿ ಮಾಡಿದರು.

ಯಾಚೇನಹಳ್ಳಿ ಮಠದ ನಾದನಂದ ಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಹೊಸೂರುಹುಂಡಿ ಮಠದ ರಾಜಶೇಖರ ಸ್ವಾಮೀಜಿ, ತಾಪಂ ಮಾಜಿ ಉಪಾಧ್ಯಕ್ಷ ಬಿ.ಮರಯ್ಯ, ವೀರಶೈವ ಸೇವಾ ಸಮಿತಿ ಅಧ್ಯಕ್ಷ ಶಾಂತರಾಜು, ಯಜಮಾನ್ ಚಂದ್ರೇಗೌಡ, ಶಾಂತಕುಮಾರ್, ಪ್ರಕಾಶ್ ಕುಮಾರ್, ರಜನಿ, ಗುಂಡ, ಪದ್ಮಗೌಡ, ಲಕ್ಷ್ಮಣ, ರಾಮು, ಸ್ವಾಮಿನಾಥಗೌಡ, ಅಧ್ಯಕ್ಷ ಟಿ.ಎಸ್.ನಾಗಣ್ಣ, ಖಜಾಂಚಿ ಆರ್.ಚೇತನ್, ಪುರಸಭಾ ಸದಸ್ಯ ಕಿರಣ್, ಸಿದ್ದು, ಕಸಬಾ ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ, ಮೇಲ್ವಿಚಾರಕ ರಾಜಪ್ಪಗೌಡ, ನಿರ್ದೇಶಕ ಟಿ.ಸಿ.ಫಣೀಶ್ ಕುಮಾರ್, ಶೇಖರ್, ಫ್ಯಾನ್ಸಿ ಮೋಹನ್, ನಾಗೇಶ್, ಶ್ರೀನಿವಾಸ್, ಮುಕುಂದ, ನಟರಾಜ್, ಕಾರ್ಯದರ್ಶಿ ಟಿ.ಎಸ್.ಸುರೇಶ್, ಕೃಷ್ಣ ರವಿಕುಮಾರ್ ಇತರರಿದ್ದರು.

ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಅಳವಡಿಸಿಕೊಳ್ಳಿ

ಆದಿಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಮುದ್ದುಮಲ್ಲಯ್ಯ



ಸರಗೂರು, ಮೇ 8(ನಾಗೇಶ್)– ಬುದ್ಧ, ಬಸವ, ಅಂಬೇಡ್ಕರ್ ಸೇರಿದಂತೆ ಮಹಾನ್ ವ್ಯಕ್ತಿಗಳ ಆದರ್ಶಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಆದಿಕರ್ನಾಟಕ ಮಹಾಸಭಾ ಮಾಜಿ ಅಧ್ಯಕ್ಷ ಮುದ್ದುಮಲ್ಲಯ್ಯ ತಿಳಿಸಿದರು.

ಪಟ್ಟಣದ 11ನೇ ವಾರ್ಡ್ ಬಿಡಗಲುವಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಅಂಬೇಡ್ಕರ್ ಕನಸಿನಂತೆ ಶಿಕ್ಷಣಕ್ಕೆ ಹೆಚ್ಚು ಹೊತ್ತು ನೀಡಿ ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಬೇಕು. ಸಮಾಜದ ಒಳಿತಿಗಾಗಿ ಅನ್ಯಾಯದ ವಿರುದ್ಧ ಹೋರಾಡಬೇಕು. ಸಂವಿಧಾನ ಎಲ್ಲಾ ವರ್ಗದ ಶೋಷಿತ ಸಮುದಾಯ ಹಾಗೂ ತುಳಿತಕ್ಕೆ ಒಳಗಾದವರಿಗೆ ನ್ಯಾಯ ಒದಗಿಸಲೆಂದೇ ರಚಿಸಲಾಗಿದೆ ಎಂದರು.

11ನೇ ವಾರ್ಡ್ ಸದಸ್ಯ ಚಲುವಕೃಷ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸಾದ್, ಸದಸ್ಯರಾದ ಚಲುವಕೃಷ್ಣ, ಎಸ್.ಎಲ್.ರಾಜಣ್ಣ ಶ್ರೀನಿವಾಸ್, ಶಿವಕುಮಾರ, ನೂರಾಳಸ್ವಾಮಿ, ಉಮಾ, ಚೈತ್ರ, ದಿವ್ಯ, ಪಪಂ ಮುಖ್ಯಾಧಿಕಾರಿ ಬಿ.ಜಿ.ಸತೀಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಜಿ.ಗೋಪಾಲಸ್ವಾಮಿ, ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಜು, ಮಾಜಿ ಅಧ್ಯಕ್ಷ ಶಿವಣ್ಣ, ಆರ್‌ಐ ಮುಜೀಬ್, ಮುಖಂಡರಾದ ದೊಡ್ಡಯ್ಯ, ಕೃಷ್ಣರಾಜು, ಜವರಯ್ಯ, ಗೋಪಾಲಕೃಷ್ಣ, ಶಿವಣ್ಣ, ಬಿ.ಸಿ.ಸುನೀಲ್, ಬಿ.ಶಿವಣ್ಣ, ಡಿ.ಶೇಖರ್, ರಘು ಕುಮಾರ್, ಮಂಜುನಾಥ್ ಇದ್ದರು.

ದರಪಟ್ಟಿ ಆಹ್ವಾನ

ಮೈಸೂರು, ಮೇ 8– ಮೈಸೂರು ಘಟಕದ ತಾಲೂಕು ನ್ಯಾಯಾಲಯಗಳ ಉಪಯೋಗಕ್ಕಾಗಿ 06 ಬಯೋಮೆಟ್ರಿಕ್ ಯಂತ್ರಗಳ (Facial recognition biometric device) ಸರಬರಾಜಿಗಾಗಿ ದರಪಟ್ಟಿ ಅಹ್ವಾನಿಸಲಾಗಿದೆ. ದರಪಟ್ಟಿಗಳನ್ನು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಮೈಸೂರು ಕಚೇರಿಗೆ ಮೇ 16ರ ಸಂಜೆ 4 ಗಂಟೆಯೊಳಗೆ ಸಲ್ಲಿಸಬೇಕು. ದರಪಟ್ಟಿಗಳನ್ನು ಸಲ್ಲಿಸುವವರು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರ ಹೆಸರಿನಲ್ಲಿ 1376 ರೂ ಗಳ ಇಎಂಡಿಯನ್ನು ಸಲ್ಲಿಸಬೇಕು. ಬಯೋಮೆಟ್ರಿಕ್ ಸೇವೆಗಳನ್ನು 10 ದಿನಗಳೊಳಗೆ ನೀಡಬೇಕು. ದರಪಟ್ಟಿಗಳನ್ನು ಮೇ 17 ರಂದು ಸಂಜೆ 5 ಗಂಟೆಗೆ ತೆರೆಯಲಾಗುವುದು. ಮಾಹಿತಿಯನ್ನು https://districts.ecourts.gov.in/mysuru ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಮಹಿಳೆ ಹೊಟ್ಟೆಯಲ್ಲಿ 5 ಕೆಜಿ ಗೆಡ್ಡೆ ಪತ್ತೆ

ಮಹಿಳೆಗೆ ಕೆ.ಆರ್.ನಗರ ತಾಯಿ, ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರಿಂದ ಯಶಸ್ವಿ ಶಸ್ತ್ರಚಿಕಿತ್ಸೆ



ಕೆ.ಆರ್.ನಗರ, ಮೇ 8– ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಸೂತಿ ತಜ್ಞರ ತಂಡ ಮಹಿಳೆಯೊಬ್ಬರ ಹೊಟ್ಟೆಯಲ್ಲಿದ್ದ ಐದು ಕೆಜಿ ತೂಕದ ಅಂಡಾಶಯ ಗೆಡ್ಡೆಯನ್ನು ಶಸ್ತ್ರಚಿಕಿತ್ಸೆ ಮೂಲಕ ತೆಗೆದು ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿದೆ.

ಪಿರಿಯಾಪಟ್ಟಣ ತಾಲೂಕಿನ ಮುತ್ತೂರು ಹಾಡಿ ನಿವಾಸಿ ಸುರೇಶ್ ಅವರ ಪತ್ನಿ ಅಂಗನವಾಡಿ ಕಾರ್ಯಕರ್ತೆ ವಾಣಿಶ್ರೀ ಇತ್ತೀಚೆಗೆ ಬೈಕ್‌ನಿಂದ ಬಿದ್ದು ಗಾಯ ಗೊಂಡಿದ್ದರು. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತೆರಳಿದಾಗ ಗೆಡ್ಡೆ ಇರುವುದು ಪತ್ತೆಯಾದ ಹಿನ್ನೆಲೆಯಲ್ಲಿ ಗ್ರಾಮದ ಮಹಿಳೆಯೊಬ್ಬರ ಸಲಹೆಯಂತೆ ಕೆ.ಆರ್. ನಗರ ಪಟ್ಟಣದ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಸ್ತ್ರೀ ಮತ್ತು ಪ್ರಸೂತಿ ತಜ್ಞೆ ಡಾ.ಚಂದ್ರಕಲಾ ಮತ್ತು ವೈದ್ಯರ ತಂಡ 45 ವರ್ಷದ ಮಹಿಳೆಯನ್ನು ಎಲ್ಲಾ ರೀತಿಯಲ್ಲಿ ಪರೀಕ್ಷಿಸಿ ಶಸ್ತ್ರಚಿಕಿತ್ಸೆ ಮಾಡಿ ಅಂದಾಜು 5 ಕೆಜಿ ಗಾತ್ರದ ಗೆಡ್ಡೆಯನ್ನು ಮಹಿಳೆಯ ಹೊಟ್ಟೆಯಿಂದ ಹೊರ ತೆಗೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ತಾಲೂಕು ಮಟ್ಟದ ಆಸ್ಪತ್ರೆಯಲ್ಲಿ ಗರ್ಭಿಣಿಯರಿಗೆ ಹೆರಿಗೆ ಮಾಡಲು ಹಿಂದೆ ಮುಂದೆ ನೋಡುವ ವೈದ್ಯರು, ದೊಡ್ಡ ಮಟ್ಟದ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾಗಿರುವುದು ತಾಲೂಕಿನ ಜನರಲ್ಲಿ ಸಂತಸ ಮೂಡಿಸಿದೆ. ಶಸ್ತ್ರಚಿಕಿತ್ಸೆ ವೇಳೆ ಮುಖ್ಯ ವೈದ್ಯಾಧಿಕಾರಿ ಡಾ.ಎಂ.ಎಸ್.ನಾಗೇಂದ್ರ ಅವರ ನೇತೃತ್ವದಲ್ಲಿ ಪ್ರಸೂತಿ ತಜ್ಞರಾದ ಡಾ.ಕೆ.ಆರ್. ಚಂದ್ರಕಲಾ, ಡಾ.ಎಸ್.ವೈ.ಭವಾನಿ, ಡಾ.ದಿವ್ಯಾ ಮತ್ತು ಅರವಳಿಕೆ ತಜ್ಞರ ತಂಡ ಭಾಗವಹಿಸಿದ್ದರು.

> "ಇಂತಹ ಸರ್ಜರಿ ಮೈಸೂರು ಜಿಲ್ಲಾಸ್ಪತ್ರೆ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಮಾತ್ರ ಮಾಡಲು ಸಾಧ್ಯ. ಆದರೆ ನಾವು ಸ್ಥಳೀಯ ಜನರಿಗೆ ಗುಣಮಟ್ಟದ ಚಿಕಿತ್ಸೆ ನೀಡಬೇಕೆಂದು ಶಾಸಕ ಸಾ.ರಾ.ಮಹೇಶ್ ಮತ್ತು ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಎಂ.ಎಸ್.ನಾಗೇಂದ್ರ ಅವರ ಪ್ರೋತ್ಸಾಹದಿಂದ ಇಂತಹ ದೊಡ್ಡ ಶಸ್ತ್ರಚಿಕಿತ್ಸೆ ಮಾಡುತ್ತಿದ್ದು ಯಶಸ್ವಿಯಾಗುತ್ತಿದ್ದೇವೆ. ನಮಗೆ ಇನ್ನಷ್ಟು ಸೌಕರ್ಯ ಕಲ್ಪಿಸಿದರೆ ಮತ್ತಷ್ಟು ಪ್ರಗತಿ ಸಾಧಿಸುತ್ತೇವೆ.
>
> –ಡಾ.ಚಂದ್ರಕಲಾ, ಪ್ರಸೂತಿ ತಜ್ಞೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಕೆ.ಆರ್.ನಗರ.



ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ರಲ್ಲಿ ತಂಬಾಕು ಬೆಳೆಗಾರರಿಗೆ ಗೊಬ್ಬರ ವಿತರಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ಹರಾಜು ಅಧೀಕ್ಷಕ ಡಾ.ಬ್ರಿಜ್ ಭೂಷಣ್, ಕ್ಷೇತ್ರಾಧಿಕಾರಿ ಸವಿನಯ್, ನಾಗರಾಜ್, ಕಿರಣ್, ಕಾಫ್ ಕಮಿಟಿ ಸದಸ್ಯ ನಿಂಗರಾಜ್, ರೈತ ಮುಖಂಡರಾದ ಶಿವಣ್ಣ, ರವಿ, ಪ್ರವೀಣ್, ಸಿಬ್ಬಂದಿ ಕೇಶವ್ ಮತ್ತಿತರರಿದ್ದರು.

ಉಪ್ಪಾರ ಸಮಾಜದ ಅಭಿವೃದ್ಧಿಗೆ ಶಿಕ್ಷಣ ಅತ್ಯವಶ್ಯಕ

ಭಗೀರಥ ಜಯಂತಿಯಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್



ತಿ.ನರಸೀಪುರ, ಮೇ 8(ಎಸ್‌ಕೆ)– ಉಪ್ಪಾರ ಸಮಾಜ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದಲು ಶಿಕ್ಷಣ ಅತ್ಯವಶ್ಯಕ. ಸಮಾಜದ ಜನತೆ ಶಿಕ್ಷಣ ಪಡೆದು ಪ್ರಜ್ಞಾವಂತ ಸಮಾಜ ನಿರ್ಮಾಣ ಮಾಡಲು ಶ್ರಮಿಸಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಕರೆ ನೀಡಿದರು.

ಪಟ್ಟಣದ ಮಿನಿ ವಿಧಾನಸೌಧದ ಮುಂಭಾಗ ತಾಲೂಕು ಆಡಳಿತದಿಂದ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಆಶ್ರಯದಲ್ಲಿ ನಡೆದ ಭಗೀರಥ ಜಯಂತಿಯಲ್ಲಿ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಉಪ್ಪಾರ ಸಮುದಾಯದಲ್ಲಿ ಶಿಕ್ಷಣದ ಕೊರತೆ ಇರುವುದರಿಂದ ಸಾಮಾಜಿಕ, ಆರ್ಥಿಕವಾಗಿ ಮುಂದುವರೆಯಲು ಸಾಧ್ಯವಾಗಿಲ್ಲ. ಹಾಗಾಗಿ ಸಮುದಾಯದ ಜನರು ಶಿಕ್ಷಣದ ಕಡೆ ಹೆಚ್ಚಿನ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಭಗೀರಥರು ಒಬ್ಬ ಶ್ರೇಷ್ಠ ಗುರುಭಕ್ತನಾಗಿ, ಪುರಾಣ ಪುರುಷನಾಗಿ, ತನ್ನ ಸಾಹಸ, ಏಕಾಗ್ರ ಮನಸ್ಥಿತಿಗೆ ತಪೋನಿಷ್ಠೆಗೆ ಪ್ರಸಿದ್ಧನಾಗಿದ್ದರಿಂದ ಭಗೀರಥ ಪ್ರಯತ್ನ ಎಂಬ ನುಡಿ ಎಲ್ಲೆಡೆ ಪಸರಿಸಿತು. ಸತ್ಕಾರ್ಯಗಳಿಂದ ಜನರಿಗೆ ಒಳ್ಳೆಯದಾಗಬೇಕು ಎಂಬ ಉದ್ದೇಶದೊಂದಿಗೆ ಭೂಮಿಗೆ ಗಂಗೆ ತರುವಲ್ಲಿ ಕಠೋರ ತಪಸ್ಸು ಮಾಡಿದ ಭಗೀರಥರು ಸವಾಲು ಮತ್ತು ಸಮಸ್ಯೆಗಳಿಗೆ ಎಂದಿಗೂ ಎದೆಗುಂದಲಿಲ್ಲ. ಸಮಾಜಕ್ಕೆ ಒಳಿತು ಮಾಡಲು ಪರಮಾತ್ಮನನ್ನು ಒಲಿಸಿಕೊಂಡರು ಎಂದರು.

ಸಮಸ್ತ ಮನುಕುಲದ ಉದ್ಧಾರಕ್ಕಾಗಿ ತನ್ನ ಜೀವನ ಮುಡಿಪಾಗಿಟ್ಟ ಭಗೀರಥರಂಥ ಮಹಾತ್ಮರ ಆದರ್ಶ ಮತ್ತು ತತ್ವಗಳನ್ನು ಎಲ್ಲರು ತಮ್ಮ ಜೀವನದಲ್ಲಿ ಒಳವಡಿಸಿಕೊಂಡಾಗ ಮಾತ್ರ ಜಯಂತಿ ಆಚರಣೆ ಸಾರ್ಥಕವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಉಪ್ಪಾರ ಜನಕಲ್ಯಾಣ ಟ್ರಸ್ಟ್ ಅಧ್ಯಕ್ಷ ರಾಮ್ ಶೆಟ್ಟಿ, ಕಾರ್ಯದರ್ಶಿ ಸಿದ್ದಶೆಟ್ಟಿ, ತಾಲೂಕು ಉಪ್ಪಾರ ಮಹಾಸಭಾದ ಅಧ್ಯಕ್ಷ ಮಹದೇವಶೆಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಶಾಂತರಾಜು, ಎಪಿಎಂಸಿ ಮಾಜಿ ಸದಸ್ಯ ಪುಟ್ಟಸ್ವಾಮಿ, ತಹಸೀಲ್ದಾರ್ ಗಿರಿಜಾ, ಸಿಡಿಪಿಓ ಬಸವರಾಜು, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಪ್ರಭುಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ದಸಂಸ ಜಿಲ್ಲಾ ಸಂಚಾಲಕ ಉಮಾ ಮಹದೇವ್, ಮಾಜಿ ಸದಸ್ಯ ಜೈಪಾಲ್ ಭರಣಿ, ನೂಲು ಬಿಚ್ಚುವರರ ಸಹಕಾರ ಸಂಘದ ಅಧ್ಯಕ್ಷ ಚಿಕ್ಕಸ್ವಾಮಿ, ಸಿದ್ದಪ್ಪ ಸ್ವಾಮಿ, ಚಿನ್ನಸ್ವಾಮಿ, ಕೆ.ಮಹದೇವಶೆಟ್ಟಿ, ಆರ್.ಮಾದೇಶ್, ವೆಂಕಟರಾಮು ಮತ್ತಿತರರಿದ್ದರು.

ಮನುಕುಲದ ಒಳಿತಿಗೆ ಭೂಮಿಗೆ ಗಂಗೆ ತಂದ ಮಹಾಪುರುಷ ಭಗೀರಥ

ಸಂಸದ ವಿ.ಶ್ರೀನಿವಾಸಪ್ರಸಾದ್



ನಂಜನಗೂಡು, ಮೇ 8(ಸುದರ್ಶನ್)– ಮನುಕುಲದ ಒಳಿತಿಗಾಗಿ ಗಂಗೆಯನ್ನು ಭೂಮಿಗೆ ತಂದ ಮಹಾಪುರುಷ ಭಗೀರಥ. ನಾವೆಲ್ಲ ಭಗೀರಥನ ರೀತಿ ಹಠ, ಛಲವಂತರಾಗಬೇಕು ಎಂದು ಸಂಸದ ವಿ.ಶ್ರೀನಿವಾಸಪ್ರಸಾದ್ ತಿಳಿಸಿದರು.

ನಗರದ ಶ್ರೀಕಂಠೇಶ್ವರ ಕಲಾ ಮಂದಿರದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಏರ್ಪಡಿಸಿದ್ದ ಭಗೀರಥ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಭಗೀರಥ ಪುರಾಣದ ಒಂದು ಭಾಗ. ನಾವೆಲ್ಲಾ ಅವರನ್ನು ಶ್ರದ್ಧಾ ಭಕ್ತಿಯಿಂದ ಆರಾಧ್ಯ ದೈವವಾಗಿ ಪೂಜಿಸುತ್ತಿದ್ದೇವೆ. ವಾಲ್ಮೀಕಿ, ಅಂಬೇಡ್ಕರ್, ಭಗೀರಥ ಎಲ್ಲಾ ಸಮಾಜ ಸುಧಾರಕರು. ದ್ವೇಷ, ಅಸೂಯೆ ಬಿಟ್ಟು ಮಾನವರಾಗಿ ಬಾಳಬೇಕೆಂದು ಸಮಾಜದ ಹಿತ ಬಯಸಿದವರು. ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಅವರ ಉದ್ದೇಶಗಳನ್ನು ಈಡೇರಿಸಲು ಮುಂದಾಗಬೇಕು ಎಂದರು.

ಉಪ್ಪಾರ ಸಮುದಾಯ ಶ್ರಮ ಜೀವಿಗಳಾದರೂ ಅವರ ಬದುಕು ಹಸನಾಗಿಲ್ಲ. ಶೈಕ್ಷಣಿಕ ಕೊರತೆಯಿಂದ ಆಧುನಿಕ ಸಮಾಜದಲ್ಲಿದ್ದರೂ ಹಿಂದುಳಿದ ಸಮಾಜವಾಗಿದೆ. ಈ ಸಮಾಜ ರಾಜಕೀಯವಾಗಿ ಬೆಳೆಯಬೇಕು ಎಂಬ ಉದ್ದೇಶದಿಂದ ಮಾಜಿ ಸಚಿವ ಪುಟ್ಟರಂಗಶೆಟ್ಟಿಯನ್ನು ರಾಜಕೀಯಕ್ಕೆ ಕರೆತಂದು ಜಿಪಂ ಕ್ಷೇತ್ರದಲ್ಲಿ ನಿಲ್ಲಿಸಿ ಗೆಲ್ಲಿಸಿದ್ದೇನೆ. ಸಮಾಜದ ಬಹಳಷ್ಟು ಮುಖಂಡರಿಗೆ ಪ್ರಾತಿನಿಧ್ಯ ನೀಡಿ ಬೆಳೆಸಿದ್ದೇನೆ. ಜೊತೆಗೆ ನಂಜನಗೂಡು ತಾಲೂಕಿನಲ್ಲಿ ಸುಸಜ್ಜಿತ ಸಮುದಾಯ ಭವನ ನಿರ್ಮಾಣಕ್ಕೆ 20 ಗುಂಟೆ ಜಾಗ ನೀಡಿ 2 ಕೋಟಿ ರೂ.ಗಳನ್ನು ಸರ್ಕಾರದಿಂದ ಮಂಜೂರು ಮಾಡಿಸಿದ್ದೇನೆ ಎಂದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಉಪ್ಪಾರ ಜನಾಂಗದ ಆಶೀರ್ವಾದಿಂದ ಇಂದು ಶಾಸಕನಾಗಿ ಆಯ್ಕೆಯಾಗಿದ್ದೇನೆ. ಕೊಟ್ಟ ಮಾತಿನಂತೆ ಸಮುದಾಯಕ್ಕೆ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಮುಂದೆಯೂ ಕೂಡ ಆಶೀರ್ವದಿಸಿ ಎಂದ ಅವರು ಉಪ್ಪಾರ ಸಮುದಾಯದವರು ಕಡ್ಡಾಯವಾಗಿ ನಿಮ್ಮ ಮಕ್ಕಳಿಗೆ ಶಿಕ್ಷಣಕೊಡಿಸಿ ಎಂದರು.

ಶಾಸಕ ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, ಉಪ್ಪಾರ ಸಮುದಾಯದವರು ಮೌಢ್ಯಕ್ಕೆ ಜೋತು ಬೀಳದೆ ಶಿಕ್ಷಣ ಪಡೆದು ಸಂಘಟಿತರಾಗಿ ಸಮಾಜದಲ್ಲಿ ಮುಂದೆ ಬರಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಮುಖ್ಯಭಾಷಣಕಾರ ಗೋವಿಂದರಾಜು ಮಾತನಾಡಿದರು. ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಎಸ್.ಮಹದೇವಯ್ಯ, ನಗರಸಭಾಧ್ಯಕ್ಷ ಹೆಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸ್ಥಾಯಿ ಸಮಿತಿ ಅಧ್ಯಕ್ಷೆ, ಮೀನಾಕ್ಷಿ, ನಗರಸಭಾ ಸದಸ್ಯರಾದ ಮಹದೇವಮ್ಮ, ಸೌಮ್ಯ, ಶಶಿಕಲಾ, ಸಮುದಾಯದ ಮುಖಂಡರಾದ ಸೋಮಣ್ಣ, ಬಾಲಚಂದ್ರು, ಶಿವಣ್ಣ, ನಾಗರಾಜು, ಮೂಗಶೆಟ್ಟಿ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುಬ್ಬಣ್ಣ, ತಹಸೀಲ್ದಾರ್ ಎಂ.ಶಿವಮೂರ್ತಿ, ಇಓ ಶ್ರೀನಿವಾಸ್, ನಗರಸಭಾ ಆಯುಕ್ತ ರಾಜಣ್ಣ, ಡಿವೈಎಸ್ಪಿ ಗೋವಿಂದರಾಜು ಸೇರಿದಂತೆ ಇತರರಿದ್ದರು.

ತಾಯಂದಿರ ದಿನದ ಅಂಗವಾಗಿ ಶಾಸಕ ರಾಮದಾಸ್‌ರಿಂದ ಮಾತೃವಂದನಾ ಕಾರ್ಯಕ್ರಮ

ತಾಯಂದಿರಿಗೆ ಪಾದಪೂಜೆ ಮಾಡಿದ ನೂರಾರು ಮಕ್ಕಳು

● ಮೂವರು ಮಹಿಳಾ ಸಾಧಕಿಯರಿಗೆ ಸನ್ಮಾನ ● ತಾಯಂದಿರಿಗೆ ಅರಿಷಿನ-ಕುಂಕುಮ, ಗಂಧಾಕ್ಷತೆಯೊಂದಿಗೆ ಸೀರೆ ವಿತರಿಸಿದ ರಾಮದಾಸ್

ಮೈಸೂರು, ಮೇ 8(ಎಂಟಿವೈ)–ವಿಶ್ವ ತಾಯಂದಿರ ದಿನದ ಅಂಗವಾಗಿ ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ಅವರು ತಮ್ಮ ಗೃಹ ಕಚೇರಿ ಬಳಿ ಭಾನುವಾರ ಆಯೋಜಿಸಿದ್ದ ಮಾತೃ ವಂದನಾ ಕಾರ್ಯ ಕ್ರಮದಲ್ಲಿ ನೂರಕ್ಕೂ ಹೆಚ್ಚು ಮಕ್ಕಳು ತಮ್ಮ ತಾಯಂದಿರಿಗೆ ಪಾದಪೂಜೆ ಮಾಡುವ ಮೂಲಕ ಗೌರವ ಸಮರ್ಪಿಸಿದರು.

ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಮೋರ್ಚಾದ ಕಾರ್ಯಕರ್ತರು ಮಾತೃ ವಂದನಾ ಕಾರ್ಯ ಕ್ರಮಕ್ಕೆ ಸಾಥ್ ನೀಡಿದರು. ಇದೇ ವೇಳೆ ಕೆ.ಆರ್.ವಿಧಾನ ಸಭಾ ಕ್ಷೇತ್ರದ ವಿವಿಧ ಬಡಾ ವಣೆಗಳಿಂದ ತಮ್ಮ ಮಕ್ಕಳೊಂದಿಗೆ ಆಗಮಿಸಿದ್ದ ತಾಯಂದಿರಿಗೆ ಶಾಸಕ ಎಸ್.ಎ.ರಾಮದಾಸ್ ಅವರು ಅರಿಶಿನ–ಕುಂಕುಮ, ಗಂಧಾಕ್ಷತೆಗಳೊಂದಿಗೆ ಸೀರೆ ವಿತರಿಸುವ ಮೂಲಕ ಮುತ್ತೈದೆಯರಿಗೆ ಗೌರವ ಸಲ್ಲಿಸಿದರು.

ತಮ್ಮ ಮಕ್ಕಳೊಂದಿಗೆ ಅನ್ಯರ ಮಕ್ಕಳ ಬಗ್ಗೆಯೂ ಕಾಳಜಿ ವಹಿಸಿರುವ ಮೂವರು ಮಹಿಳಾ ಸಾಧಕಿಯರನ್ನು ಇದೇ ವೇಳೆ ಗೌರವಿಸಲಾಯಿತು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್.ಬಿಂದ್ಯಾ, ಆಟೋಚಾಲಕಿ ಸೌಮ್ಯಾ, ಶುಶ್ರೂಷಕಿ ಲತಾಮಣಿ ಅವರನ್ನು ಶಾಸಕ ಎಸ್.ಎ.ರಾಮದಾಸ್ ಸನ್ಮಾನಿಸಿದರು.

ಬಳಿಕ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಇಂದು ವಿಶ್ವದ ಎಲ್ಲೆಡೆ ತಾಯಂದಿರ ದಿನವನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಗುತ್ತಿದೆ. ಇಂದು ನಾವು ಜನ್ಮ ಕೊಟ್ಟ ತಾಯಿಯೊಂದಿಗೆ ಭೂಮಿ ತಾಯಿ ಹಾಗೂ ಪರಿಸರವನ್ನು ತಾಯಿಯಂತೆ



ಮಾತೃವಂದನಾ ಕಾರ್ಯಕ್ರಮದಲ್ಲಿ ಪಾದಪೂಜೆ ಮಾಡುತ್ತಿರುವ ಮಕ್ಕಳು.



ಮೈಸೂರಿನ ವಿದ್ಯಾರಣ್ಯಪುರಂನಲ್ಲಿ ನಡೆದ ಮಾತೃವಂದನಾ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕರಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಹೆಚ್.ಎಸ್.ಬಿಂದ್ಯಾ, ಆಟೋ ಚಾಲಕಿ ಸೌಮ್ಯಾ, ಶುಶ್ರೂಷಕಿ ಲತಾಮಣಿ ಅವರನ್ನು ಶಾಸಕ ಎಸ್.ಎ.ರಾಮದಾಸ್ ಸನ್ಮಾನಿಸಿದರು.

ಪೂಜಿಸುತ್ತಿದ್ದೇವೆ. ಜನ್ಮ ಕೊಟ್ಟ ತಾಯಿಯ ತ್ಯಾಗವನ್ನು ಸ್ಮರಿಸದಿದ್ದರೆ ನಾವು ಏಳಿಗೆ ಸಾಧಿಸುವುದು ಸಾಧ್ಯವಾಗುವುದಿಲ್ಲ. ಸೊಸೆಯಾಗಿ ಬಂದ ಹೆಣ್ಣು ಮಕ್ಕಳನ್ನು ಅತ್ತೆ-ಮಾವಂದಿರು ಪ್ರೀತಿಯಿಂದ ಕಾಣಬೇಕು. ಅಲ್ಲದೇ ಸೊಸೆಯನ್ನು ಮಗಳಂತೆ ಗೌರವದಿಂದ ಕಾಣಬೇಕಾದ ಕರ್ತವ್ಯ ಪೋಷಕರದ್ದಾಗಿದೆ. ಇತ್ತೀಚೆಗೆ ಕೌಟುಂಬಿಕ ಕಲಹದಿಂದ ಹಾಗೂ ವೈಮನಸ್ಸಿನಿಂದ ವಿವಾಹ ವಿಚ್ಛೇದನದಂತಹ ಪ್ರಕರಣಗಳು ಹೆಚ್ಚಾಗುತ್ತಿದೆ. ಇದನ್ನು ತಪ್ಪಿಸ ಬೇಕಾದರೆ ಎಲ್ಲಾ ತಾಯಂದಿರು ಸೊಸೆಯನ್ನು ಮಗಳಂತೆ ನೋಡಿಕೊಳ್ಳುವುದಾಗಿ ಸಂಕಲ್ಪ ಮಾಡಬೇಕಾಗಿದೆ. ಆಗ ಮಾತ್ರ ಕೌಟುಂಬಿಕ ಕಲಹ ತಪ್ಪುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರ ತಾಯಿಗೆ ನೂರು ವರ್ಷ ಸಂದಿದೆ. ಆದರೂ ಮನೆಗೆ ಬಂದಾಗ ಮೋದಿಯವರಿಗೆ ಕೈತುತ್ತನ್ನು ತಿನ್ನಿಸಿ ಪ್ರೀತಿ ಮಾಡುತ್ತಾರೆ. ತಾನು ಹಸಿವಿನಿಂದ ಇದ್ದರೂ ನನ್ನ ಮಕ್ಕಳು ಹಸಿದಿರಬಾರದು ಎಂದು ಎಲ್ಲಾ ತಾಯಂದಿರು ತಾನು ತಿನ್ನಬೇಕಾದ ಊಟದಲ್ಲಿ ಒಂದು ಪಾಲನ್ನು ಮಕ್ಕಳಿಗಾಗಿ ಮೀಸಲಿಡುತ್ತಾಳೆ. ತಾಯಿಯ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ ಎಂದರು.

ನನ್ನ ತಾಯಿಯೂ ನನಗೆ ಈ ಹಿಂದೆ ಸಾಕಷ್ಟು ವಿಚಾರದಲ್ಲಿ ಮಾರ್ಗದರ್ಶನ ನೀಡಿದ್ದರ ಫಲವಾಗಿ ನಾನು ಇಂದು ಜನರ ಸೇವಕನಾಗಿ ಕೆಲಸ ಮಾಡಲು ಸಾಧ್ಯವಾಗಿದೆ. ನಿನ್ನ ತಂದೆ ದೇಶ ಕಾಯುವ ಸೈನಿಕನಾಗಿದ್ದರು, ಪಾಕಿಸ್ತಾನ ಮತ್ತು ಚೀನಾ ಯುದ್ಧದಲ್ಲಿ ಭಾಗವಹಿಸಿದ್ದರು. ಹಾಗಾಗಿ ನಿನ್ನ ರಕ್ತ ಮತ್ತು ಕೈಯನ್ನು ಶುದ್ಧವಾಗಿಟ್ಟುಕೊಂಡು ಭ್ರಷ್ಟಾಚಾರದ ವಿರುದ್ಧ ಹೋರಾಡುವಂತೆ ನನ್ನ ತಾಯಿ ನನಗೆ ಆದೇಶಿಸಿದ್ದರು. ಅಂದಿನಿಂದ ನಾನು ನನ್ನ ತಾಯಿಯ ಸೂಚನೆಯನ್ನು ಪಾಲಿಸುತ್ತಿದ್ದೇನೆ ಎಂದು ಅವರು ಹೇಳಿದರು.

ಕೆ.ಆರ್.ಕ್ಷೇತ್ರ ಮಾತ್ರವಲ್ಲದೆ ನೊಂದವರಿಗೆ ದನಿಯಾಗಿ ಕೆಲಸ ಮಾಡುತ್ತಿದ್ದೇನೆ. ಸೂರಿಲ್ಲದವರಿಗೆ ಸೂರು ಕೊಡಿಸುವ ಜವಾಬ್ದಾರಿ ನನ್ನದಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಏಳಿಗೆಯಲ್ಲಿ ತಾಯಂದಿರ ಪಾತ್ರ ಬಹಳ ಮುಖ್ಯವಾಗಿದೆ. ನಾವು ಪರಿಶುದ್ಧ ಜೀವನ ನಡೆಸುವುದರೊಂದಿಗೆ ಉತ್ತಮ ಸಾಧನೆ ಮಾಡಿದಾಗ ಮಾತ್ರ ಅದು ನಮ್ಮ ಪೋಷಕರಿಗೆ ನಾವು ನೀಡುವ ಗೌರವವಾಗಲಿದೆ ಎಂದು ಸಲಹೆ ನೀಡಿದರು.

ಇಂದು ನಡೆದ ಮಾತೃವಂದನಾ ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ತಾಯಂದಿರಿಗೆ ಪಾದಪೂಜೆ ಮಾಡುವ ಮೂಲಕ ನಮ್ಮ ಆಚಾರ–ವಿಚಾರದ ಜೊತೆಗೆ ಸಂಸ್ಕಾರವನ್ನು ಪ್ರದರ್ಶಿಸಿದ್ದಾರೆ. ಇದು ಒಳ್ಳೆಯ ಬೆಳವಣಿಗೆ. ಮುಂಬರುವ ದಿನಗಳಲ್ಲಿ ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು. ಜನ್ಮ ನೀಡಿದ ತಂದೆ–ತಾಯಿಯರನ್ನು ಗೌರವಿಸುವಂತಹ ಪರಂಪರೆ ಮುಂದುವರೆಸಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಎನ್.ವಡಿವೇಲು, ಪ್ರಧಾನ ಕಾರ್ಯದರ್ಶಿ ಓಂ ಶ್ರೀನಿವಾಸ್, ನಾಗೇಂದ್ರ ಕುಮಾರ್, ಮಹಿಳಾ ಮೋರ್ಚಾ ಅಧ್ಯಕ್ಷೆ ಅನ್ನಪೂರ್ಣ, ಪಾಲಿಕೆ ಸದಸ್ಯರಾದ ಶಾಂತಮ್ಮ ಈಶ್ವರ್, ಡಾ. ರೂಪಾ ಯೋಗೇಶ್, ಬಿಎಲ್ಎ ಪ್ರಸಾದ್ ಬಾಬು, ಮುಖಂಡರಾದ ನೂರ್ ಫಾತಿಮಾ, ರವಿ, ಮಧು, ಮೈಮು ರಾಜೇಶ್, ಬಂಗಾರಿ ಸುರೇಶ್, ಸಂತೋಷ್, ರೇಣುಕಾ, ಜಯಂತಿ, ಭಾಗ್ಯ ಜಯಂತಿ, ಪ್ರದೀಪ್, ಪ್ರಸಾದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಶೃಂಗೇರಿ ಶ್ರೀಗಳಿಗೆ ಭವ್ಯ ಸ್ವಾಗತ



ಮೈಸೂರು, ಮೇ 8(ಎಂಕೆ)– ಶೃಂಗೇರಿ ಶ್ರೀ ಶಾರದಾ ಪೀಠದ 37ನೇ ಪೀಠಾಧಿಪತಿಗಳಾದ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳಿಗೆ ಮೈಸೂರಿನಲ್ಲಿ ಪೂರ್ಣಕುಂಭದೊಂದಿಗೆ ಭವ್ಯ ಸ್ವಾಗತ ಕೋರಲಾಯಿತು.

ಇಲ್ಲಿನ ಶ್ರೀ ಶಂಕರ ಮಠದಲ್ಲಿ ಮೂರು ದಿನಗಳ ಕಾಲ(ಮೇ 8 ರಿಂದ 11ರವರೆಗೆ) ಹಮ್ಮಿಕೊಂಡಿರುವ ಶೀ ಚಂದ್ರಮೌಳೇಶ್ವರ ಪೂಜೆ, ಭಿಕ್ಷಾವಂದನೆ, ಪಾದಪೂಜೆ, ಆಶೀರ್ವಚನ ಹಾಗೂ ಗುರುವಂದನಾ ಕಾರ್ಯಕ್ರಮ ಹಿನ್ನೆಲೆ ಭಾನುವಾರ ಸಂಜೆ ಆಗಮಿಸಿದ ಶ್ರೀಗಳಿಗೆ ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ಪ್ರಭಾರ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಲ್ಯಾಕ್ ಅಧ್ಯಕ್ಷ ಎನ್.ವಿ.ಫಣೀಶ್, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪಾಲಿಕೆ ಸದಸ್ಯರಾದ ಮಾ.ವಿ.ರಾಮ್‌ಪ್ರಸಾದ್, ಶಿವಕುಮಾರ್, ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ವಿಪ್ರ ಮುಖಂಡರಾದ ನಂ.ಶ್ರೀಕಂಠಕುಮಾರ್, ಶೃಂಗೇರಿ ಮಠದ ಆಡಳಿತಾಧಿಕಾರಿ ಡಾ.ವಿ.ಆರ್.ಗೌರಿಶಂಕರ್, ಮೈಸೂರಿನ ಶೃಂಗೇರಿ ಶಂಕರ ಮಠದ ಧರ್ಮಾಧಿಕಾರಿ ಹೆಚ್.ರಾಮಚಂದ ಹಾಗೂ ಸಾವಿರಾರು ಮಂದಿ ಭಕ್ತರು ಸ್ವಾಗತ ಕೋರಿದರು.

ಬಳಿಕ ಮಹಾರಾಜ ಕಾಲೇಜು ಮೈದಾನದಿಂದ(ಏಕಲವ್ಯ ವೃತ್ತ) ಶ್ರೀ ಶಂಕರ ಮಠದವರೆಗೆ ಅಲಂಕೃತ ತೆರೆದ ಜೀಪಿನಲ್ಲಿ ಶೋಭಾಯಾತ್ರೆ ನಡೆಯಿತು. ಶೋಭಾಯಾತ್ರೆಯೊಂದಿಗೆ ಪೂರ್ಣಕುಂಭ, ಮಂಗಳವಾದ್ಯ, ಮಹಿಳಾ ಭಜನೆ, ಮಂತ್ರಘೋಷ, ಜೈಕಾರ ಘೋಷಣೆಗಳ ನಡುವೆ ಕಲಾತಂಡಗಳು ಸಾಗಿದವು. ನಂತರ ಶ್ರೀ ಶಂಕರ ಮಠದ ಚಂದ್ರಮೌಳೇಶ್ವರ ದೇವಾಲಯದಲ್ಲಿ ಶ್ರೀಗಳು ವಿಶೇಷ ಪೂಜೆ ನೆರವೇರಿಸಿದರು. ಮಠದ ಆವರಣದಲ್ಲಿ ನೆರೆದಿದ್ದ ಸಾವಿರಾರು ಮಂದಿ ಭಕ್ತರು ಶೃಂಗೇರಿ ಶ್ರೀಗಳ ದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು.

ನಾಳೆ(ಮೇ 9) ಬೆಳಗ್ಗೆ ಶಂಕರ ಮಠದಲ್ಲಿ ಶ್ರೀ ಶಾರದಾಂಬ ಹಾಗೂ ಮಹಾಗಣಪತಿಗೆ ವಿಶೇಷ ಪೂಜೆ, ಹವನದೊಂದಿಗೆ ಬೆಳ್ಳಿ ಕವಚ ಸಮರ್ಪಣೆ ಮಾಡಲಿದ್ದಾರೆ. ಶೀಗಳು ಮಂಗಳವಾರ ಮೇ 10ರಂದು ಶಂಕರಮಠದಲ್ಲಿ ಬೆಳಗ್ಗೆ ಪಾದಪೂಜೆ, ಭಿಕ್ಷಾವಂದನೆ ಕಾರ್ಯಕಮದಲ್ಲಿ ಭಾಗಿಯಾಗಲಿದ್ದಾರೆ. ವಿಶೇಷವಾಗಿ ಸಂಜೆ 5 ಗಂಟೆಗೆ ಶಂಕರ ಮಠದ ವಿದ್ಯಾಶಂಕರ ಕಲ್ಯಾಣಮಂಟಪದಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಲಿದೆ.

ಮೈಸೂರಲ್ಲಿ ಭಗೀರಥ ಮಹರ್ಷಿ ಜಯಂತಿ ಆಚರಣೆ

● ಗಾಂಧೀಜಿ ಉಪ್ಪಿನ ಸತ್ಯಾಗ್ರಹದಲ್ಲಿ ಉಪ್ಪಾರರು ನಿರ್ಣಾಯಕ ಪಾತ್ರ ವಹಿಸಿದ್ದರು; ಶಾಸಕ ಎಲ್.ನಾಗೇಂದ್ರ
● ಸರ್ಕಾರಿ ಕಚೇರಿಗಳಲ್ಲಿ ಭಗೀರಥರ ಫೋಟೋ ಹಾಕಬೇಕು: ಎಂಎಲ್‌ಸಿ ಸಿ.ಎನ್.ಮಂಜೇಗೌಡ

ಮೈಸೂರು, ಮೇ 8(ಎಂಟಿವೈ)– ಬ್ರಿಟಿಷರ ವಿರುದ್ಧ ಹೋರಾಡಿ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡಲು ಮಹಾತ್ಮ ಗಾಂಧೀಜಿ ನಡೆಸಿದ ದಂಡಿ ಉಪ್ಪಿನ ಸತ್ಯಾಗ್ರಹದಲ್ಲಿ ಉಪ್ಪಾರ ಸಮುದಾಯ ನಿರ್ಣಾಯಕ ಪಾತ್ರ ವಹಿಸಿತ್ತು ಎಂದು ಶಾಸಕ ಎಲ್. ನಾಗೇಂದ್ರ ತಿಳಿಸಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶ್ರೀ ಭಗೀರಥ ಜಯಂತ್ಯೋತ್ಸವ ಸಮಿತಿ ವತಿಯಿಂದ ಭಾನುವಾರ ಆಯೋಜಿಸಿದ್ದ ಭಗೀರಥ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಭಗೀರಥ ಮಹರ್ಷಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಬ್ರಿಟಿಷರ ವಿರುದ್ಧ ನಡೆದ ಸ್ವಾತಂತ್ರ್ಯ ಹೋರಾಟದಲ್ಲಿ ದಂಡಿ ಉಪ್ಪಿನ ಸತ್ಯಾಗ್ರಹ ಮಹತ್ವದ ಪಾತ್ರವಹಿಸಿತ್ತು ಎಂದರು.

ಮಹಾತ್ಮಗಾಂಧಿ ಅಸಹಕಾರ ಚಳವಳಿ ನಡೆಸಿದರು. ದಂಡಿಯಲ್ಲಿ ಉಪ್ಪು ತಯಾರಿಸಿ, ಜನರಿಗೆ ಹಂಚುವ ಮೂಲಕ ಬ್ರಿಟಿಷರು ಹೇರಿದ್ದ ತೆರಿಗೆಯನ್ನು ತೆಗೆದು ಹಾಕುವಂತೆ ಹೋರಾಡಿದ್ದರು. ಈ ಹೋರಾಟಕ್ಕೆ ಉಪ್ಪಾರ ಸಮುದಾಯ ಬೆನ್ನೆಲುಬಾಗಿ ನಿಂತಿತ್ತು. ಆ ಮೂಲಕ ಸ್ವಾತಂತ್ರ್ಯ ಹೋರಾಟದಲ್ಲಿ ಉಪ್ಪಾರ ಸಮಾಜ ತನ್ನದೇ ಕೊಡುಗೆ ನೀಡಿದೆ. ಉಪ್ಪಾರ ಸಮಾಜವು ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿದೆ. ಸಮಾಜ ಅಭಿವೃದ್ಧಿಯಾಗಬೇಕಾದರೆ ಎಲ್ಲರೂ ಪ್ರಜ್ಞಾವಂತರಾಗುವುದಲ್ಲದೇ ಸಂಘಟಿತ



ರಾಗಬೇಕು ಎಂದು ಸಲಹೆ ನೀಡಿದರು.

ಕಾಯಕ ಸಮಾಜದಡಿ ಬರುವ ಎಲ್ಲಾ ಸಮಾಜ ಗಳು ಅಭಿವೃದ್ಧಿ ಯಾಗಬೇಕಾದರೆ ತಮ್ಮ ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಅಲ್ಲದೇ ಸಮಾಜದ ಜನರು ಎಲ್ಲರೂ ಸಂಘಟಿತರಾಗಬೇಕು ಎಂದು ಅವರು ಹೇಳಿದರು.

ಜಿಲ್ಲಾ ಕೇಂದ್ರದಲ್ಲಿ ಭಗೀರಥರ ಪ್ರತಿಮೆ ಸ್ಥಾಪಿಸಿ: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಸರ್ಕಾರವು ಜಿಲ್ಲಾ ಕೇಂದ್ರಗಳಲ್ಲಿ ಶ್ರೀ ಭಗೀರಥ ಸ್ವಾಮೀಜಿ ಪ್ರತಿಮೆಗಳನ್ನು ಸ್ಥಾಪಿಸುವುದರ ಜೊತೆಗೆ ಸರ್ಕಾರಿ ಕಚೇರಿಗಳಲ್ಲಿ ಭಗೀರಥರ ಫೋಟೋ ಅಳವಡಿಸಬೇಕು ಎಂದರಲ್ಲದೆ, ಈ ಕುರಿತು ತಾವು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಗಮನ ಸೆಳೆಯುವುದಾಗಿ ಹೇಳಿದರು.

ಭೂಮಿಗೆ ನೀರನ್ನು ತಂದುಕೊಟ್ಟವರು ಮಹಾ ಪುರುಷ ಭಗೀರಥ ಸ್ವಾಮೀಜಿ ಅವರು. ಅಂಬೇಡ್ಕರ್, ಬಸವಣ್ಣ, ಗಾಂಧೀಜಿ, ಬಾಬು ಜಗಜೀವನ ರಾಂ ಅವರುಗಳು ಸಮಾಜದಲ್ಲಿ ನಿಸ್ವಾರ್ಥದಿಂದ ಕೆಲಸ ಮಾಡಿದವರು. ಮನುಷ್ಯ ಹುಟ್ಟು–ಸಾವಿನ ನಡುವೆ ಈ ಭೂಮಿಯಲ್ಲಿ ತನ್ನ ಹೆಜ್ಜೆ ಗುರುತನ್ನು ಬಿಟ್ಟು ಹೋಗಬೇಕು. ಆಗ ಸಮಾಜ ನಮ್ಮನ್ನು ನೆನೆಯುತ್ತದೆ ಎಂದರು. ಇಂದು ಸಮಾಜದಲ್ಲಿ ನಂಬಿಕೆ, ವಿಶ್ವಾಸ ಕಡಿಮೆಯಾಗುತ್ತಿದೆ. ಜಾತಿ–ಜಾತಿಗಳ ನಡುವೆ, ಧರ್ಮ–ಧರ್ಮಗಳ ನಡುವೆ ಹಾಗೂ ರಾಜಕೀಯ ಪಕ್ಷಗಳ ನಡುವೆ ಸಂಘರ್ಷಗಳು ನಡೆಯುತ್ತಿವೆ. ಇಂತಹ ಸಂದರ್ಭದಲ್ಲಿ ನಾವು ನಂಬಿಕೆ–ವಿಶ್ವಾಸದಿಂದ ಕೆಲಸ ಮಾಡಬೇಕಾಗುತ್ತದೆ. ಉಪ್ಪಾರ ಸಮಾಜದ ಬಂಧುಗಳು ಸ್ವಾಭಿ ಮಾನದಿಂದ ಸಂಘಟಿತರಾಗಿ ತಮ್ಮ ಸಾಮರ್ಥ್ಯವನ್ನು ಸರ್ಕಾರಕ್ಕೆ ತೋರಿಸಬೇಕು ಎಂದರು.

ಬೆಂಗಳೂರಿನ ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಹೆಚ್ಚುವರಿ ಆಯುಕ್ತ ಡಿ.ಜಗನ್ನಾಥ ಸಾಗರ್ ಮುಖ್ಯ ಭಾಷಣ ಮಾಡಿ, ಪ್ರಯತ್ನದ ಪರಾಕಾಷ್ಠೆಯು ಭಗೀರಥ ಪ್ರಯತ್ನವೆಂದು ಜನಜನಿತವಾಗಿದೆ. ಭಗೀರಥನು ತನ್ನ ಸಾಹಸಕ್ಕೆ ಗುರುಭಕ್ತಿಗೆ ಪ್ರಯತ್ನ ಶೀಲತೆಗೆ ತಪೋನಿಷ್ಠೆಗೆ ಆದರ್ಶವಾಗಿ ಕಂಗೊಳಿಸುತ್ತಿದ್ದಾರೆ. ಅಸಾಧ್ಯವಾದ ಕೆಲಸವನ್ನು ಛಲದಿಂದ ಸಾಧಿಸಿ ಸಫಲರಾದ ಅಂತಹ ಕಾರ್ಯವನ್ನು ಭಗೀರಥ ಪ್ರಯತ್ನ ಎನ್ನುತ್ತಾರೆ. ನಮ್ಮ ದೇಶದ ಜೀವನದಿ ಅಷ್ಟೇ ಅಲ್ಲ ದೇವರಾದ ಗಂಗೆಯನ್ನು ಹಿಮಾಲಯದಿಂದ ಭೂಮಿಗೆ ತಂದು ಭೂಮಿಯ ಜೀವ ಧಾತುಗಳಿಗೆ ಸನ್ಮಾರ್ಗವನ್ನು ಉಂಟು ಮಾಡಿದ ಭಗೀರಥನ ಸೂರ್ಯ ವಂಶದ ಪ್ರಸಿದ್ಧ ಚಕ್ರವರ್ತಿ ಮರಿಮೊಮ್ಮಗ ಎಂದರು.

ಶ್ರದ್ಧೆಯಿಂದ ಕೆಲಸ ಮಾಡಿದರೆ ಏನನ್ನಾದರೂ ಸಾಧಿಸಬಹುದು. 2015ನೇ ಸಾಲಿನ ಆರ್ಥಿಕ ಸಮೀಕ್ಷೆಯ ಪ್ರಕಾರ ಪ್ರತಿಯೊಂದು ಜಾತಿ–ಧರ್ಮದ ಸಾಮಾಜಿಕ ಆರ್ಥಿಕ ಶೈಕ್ಷಣಿಕ ಸ್ಥಿತಿ–ಗತಿಯ ಹಿಂದುಳಿದಿರುವಿಕೆಯನ್ನು ಗುರುತಿಸಿದರೆ ಅದರ ಆಧಾರದಲ್ಲಿ ವೈಜ್ಞಾನಿಕವಾಗಿ ಯೋಜನೆಗಳನ್ನು ರೂಪಿಸಲು ಮತ್ತು ಮೀಸಲಾತಿಯನ್ನು ಪುನರ್ ನವೀಕರಣ ಮಾಡಲು ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಉಪ್ಪಾರ ಸಂಘದ ಜಿಲ್ಲಾ ಅಧ್ಯಕ್ಷ ಯೋಗೇಶ್ ಉಪ್ಪಾರ, ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್. ಮಂಜುನಾಥಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಸಮಾಜದ ಮುಖಂಡ ಜಗನ್ನಾಥ್ ಸಾಗರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಸೇರಿದಂತೆ ಅನೇಕರು ಇದ್ದರು.

ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 4– ಮೈಸೂರಿನ ವಿದ್ಯಾರಣ್ಯಪುರಂ ಮತ್ತು ಚಾಮುಂಡಿಬೆಟ್ಟದಲ್ಲಿರುವ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2022–23ನೇ ಸಾಲಿನಲ್ಲಿ 5ನೇ ತರಗತಿಯಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ಎಲ್ಲಾ ಜಾತಿ, ವರ್ಗಗಳಿಗೆ ಸೇರಿದ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದಾಗಿದ್ದು, ವಿದ್ಯಾರ್ಥಿ ನಿಲಯಗಳಿಗೆ ಸೇರ ಬಯಸುವವರು ಮೇ 15ರೊಳಗೆ ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ವರ್ಗಾವಣೆ ಪತ್ರ, ಆದಾಯ ಪ್ರಮಾಣ ಪತ್ರ ಜಾತಿ ಪ್ರಮಾಣ ಪತ್ರ, ಅಂಕಪಟ್ಟಿ, ಆಧಾರ್ ಕಾರ್ಡ್ ಇವುಗಳ ಜೆರಾಕ್ಸ್ ಪ್ರತಿಗಳನ್ನು ಇತ್ತೀಚಿನ 3 ಸ್ಟ್ಯಾಂಪ್ ಸೈಜ್ ಭಾವಚಿತ್ರಗಳೊಂದಿಗೆ ಟಿ.ಎಸ್. ಸುಬ್ಬಣ್ಣ ಸಾರ್ವಜನಿಕ ವಿದ್ಯಾರ್ಥಿ ನಿಲಯ ವಿದ್ಯಾರಣ್ಯಪುರಂ, ಮೈಸೂರು ವಿಳಾಸಕ್ಕೆ ತಲುಪಿಸುವಂತೆ ಪ್ರಕಟಣೆ ತಿಳಿಸಿದೆ.

ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ನಯೋ–05:ಭೂಉಬ:1812:2022–23 ದಿನಾಂಕ: 06–05–2022

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 69(2)ರಡಿ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದ ಸರ್ವೆ ನಂ. 368/7ರಲ್ಲಿನ 03 ಎಕರೆ 21 ಗುಂಟೆ ಪೈಕಿ 02 ಎಕರೆ 28 ಗುಂಟೆ ಮತ್ತು 368/1ರಲ್ಲಿ 01 ಎಕರೆ 13.08 ಗುಂಟೆ ಒಟ್ಟು 04 ಎಕರೆ 01.08 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ. ಕಾಯ್ದೆ 69(2)ರಡಿ ಉದ್ಯಾನವನ ವಲಯ ಮತ್ತು ಬಯಲು ಜಾಗ ಪ್ರದೇಶದಿಂದ ವಸತಿ ವಲಯಕ್ಕೆ ಭೂ ಉಪಯೋಗವನ್ನು ಬದಲಾವಣೆ ಮಾಡುವಂತೆ ಕೋರಿ ಶ್ರೀ ಎಸ್.ಟಿ. ಮೋಹನ್‌ಕುಮಾರ್, ಪಿ.ಎಂ. ಪ್ರಸನ್ನ ಮತ್ತು ನರಸಮ್ಮ ಇವರುಗಳು ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಪ್ರದೇಶದ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯು ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನದೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.

KEY PLAN



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು